## ಅಧ್ಯಾಯ – ೦೩

## ಜನತೆ

**ಒಂ**ದು ಪ್ರದೇಶದ ಜನ ಸಮುದಾಯಗಳ ಸಾಮಾಜಿಕ, ಧಾರ್ಮಿಕ, ಗುಣಲಕ್ಷಣಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವುದು, ಅವುಗಳ ಸಾಂಪ್ರದಾಯಿಕತೆ ಹಾಗೂ ಸಾಮಾಜಿಕ ಪದ್ಧತಿಗಳು ಹೇಗೆ ಹಂತ–ಹಂತವಾಗಿ ಆಧುನೀಕತೆಯ ಪ್ರಭಾವಕ್ಕೆ ಒಳಗಾಗುತ್ತಿವೆ ಎಂಬುದನ್ನು ದಾಖಲಿಸುವುದು ಈ ಅಧ್ಯಾಯದ ಉದ್ದೇಶವಾಗಿರುತ್ತದೆ. ಈ ದೃಷ್ಟಿಯಿಂದ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ನೀಡಲಾಗುವ ಜಿಲ್ಲೆಯ ಜನತೆಯನ್ನು ಕುರಿತ ಸಮೀಕ್ಷೆ ಅಧ್ಯಯನಾತ್ಮಕ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ವಿವಿಧ ಧರ್ಮ, ಜಾತಿಗಳನ್ನು ಕುರಿತ ಸಂಕ್ಷಿಪ್ತ ಪರಿಚಯ, ಅಲ್ಲಿನ ಜನಸಂಖ್ಯಾ ವಿವರ, ಸ್ತ್ರೀ–ಪುರುಷರ ಪ್ರಮಾಣ, ಭಾಷೆ, ವಲಸೆ ಪ್ರವೃತ್ತಿ, ವಿವಾಹ ಇತ್ಯಾದಿ ಜೀವನಾವರ್ತ ಸಂಸ್ಕಾರಗಳು, ಆಹಾರ ಪದ್ಧತಿ, ಹಬ್ಬ, ದೇವರು, ಜಾತ್ರೆ ಮೊದಲಾದ ಅಂಶಗಳನ್ನು ಕುರಿತು ಇಲ್ಲಿ ಸಮೀಕ್ಷಿಸಲಾಗಿದೆ.

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಒಂದೆನಿಸಿರುವ ಉಡುಪಿ ಜಿಲ್ಲೆಯನ್ನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಿಂದ ೧೯೯೭ರಲ್ಲಿ ಬೇರ್ಪಡಿಸಿ, ನೂತನ ಜಿಲ್ಲೆಯಾಗಿ ನಾಮಕರಣ ಮಾಡಲಾಗಿದೆ. ಆಡಳಿತ ಕಾರಣಕ್ಕಾಗಿ ಉಡುಪಿ ಪರಿಸರವನ್ನು ಮಂಗಳೂರು ಪರಿಸರದಿಂದ ವಿಭಾಗಿಸಿದ್ದರೂ, ಆಂತರಿಕವಾಗಿ ಈ ಪ್ರದೇಶಗಳು ಬಹುಮಟ್ಟಿಗೆ ಒಂದೇ ಬಗೆಯ ಸಾಮಾಜಿಕ, ಸಾಂಸ್ಕೃತಿಕ ಗುಣವಿಶೇಷಗಳನ್ನು ಒಳಗೊಂಡಿವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೆಲವೊಂದು ಪ್ರಮುಖ ಜಾತಿ ಸಮುದಾಯಗಳು ಎರಡೂ ಜಿಲ್ಲೆಗಳಲ್ಲಿ ಸಮಾನವಾಗಿವೆ. ಅವರ ಆಚಾರ–ಸಂಪ್ರದಾಯಗಳು, ದೈವ–ಆರಾಧನೆಗಳು ಬಹುಮಟ್ಟಿಗೆ ಒಂದೇ ಬಗೆಯಾಗಿವೆ. ಅಂತೆಯೇ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳೆರಡಕ್ಕೂ ಸಮಾನವಾಗಿರುವ ಕೆಲವು ಅಂಶಗಳ ಜೊತೆಗೆ ಉಡುಪಿ ಪರಿಸರದಲ್ಲಿಯೇ ವಿಶೇಷವಾಗಿ ಕಾಣಬರುವ ಕೆಲವೊಂದು ಸಮುದಾಯ, ಆಚಾರ ಸಂಪ್ರದಾಯಗಳನ್ನು ಇಲ್ಲಿ ಹೆಚ್ಚುವರಿಯಾಗಿ ಪರಿಚಯಿಸಲಾಗಿದೆ.

### ಜನಸಂಖ್ಯಾ ವಿವರ

ಉಡುಪಿ, ಕಾರ್ಕಳ ಹಾಗೂ ಕುಂದಾಪುರ ತಾಲೂಕುಗಳನ್ನೊಳಗೊಂಡ ಉಡುಪಿ ಜಿಲ್ಲೆಯ ಒಟ್ಟು ಜನಸಂಖ್ಯೆ ೨೦೦೧ರ ಜನಗಣತಿಯಂತೆ ೧೧,೧೨,೨೪೩ ಆಗಿದ್ದಿತು. ಅದರಲ್ಲಿ ೯,೦೫,೮೯೦ ಗ್ರಾಮೀಣ ಜನಸಂಖ್ಯೆಯಾಗಿದ್ದರೆ, ನಗರಪ್ರದೇಶದಲ್ಲಿ ವಾಸಿಸುತ್ತಿದ್ದವರ ಸಂಖ್ಯೆ ೨,೦೬,೩೫೩ ಆಗಿದ್ದಿತು.

ಕೋಷ್ಟಕ ೩.೧ರಲ್ಲಿ ನೀಡಿರುವ ತಾಲೂಕುವಾರು ಗ್ರಾಮೀಣ ಜನಸಂಖ್ಯಾ ವಿವರವನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಉಡುಪಿ ತಾಲೂಕು ಅತಿ ಹೆಚ್ಚು ಗ್ರಾಮೀಣ ಜನಸಂಖ್ಯೆ (೩,೭೬,೫೭೯) ಹೊಂದಿದ್ದರೆ, ಕುಂದಾಪುರ ತಾಲೂಕು ಎರಡನೇ ಸ್ಥಾನದಲ್ಲಿರುವುದು(೩,೪೮,೮೨೯) ವ್ಯಕ್ತವಾಗುತ್ತದೆ. ಕಾರ್ಕಳ (೧,೮೦,೪೮೨) ಕೊನೇ ಸ್ಥಾನದಲ್ಲಿದೆ. ಹಾಗೆಯೇ, ೨೦೦೧ರ ಗಣತಿಯಲ್ಲಿನ ಸ್ತ್ರೀ–ಪುರುಷರ ಸಂಖ್ಯೆಯನ್ನು ಗಮನಿಸಿದರೆ, ಜಿಲ್ಲೆಯಲ್ಲಿ ಪುರುಷರಿಗಿಂತ (೫,೨೨,೨೩೧) ಸ್ತ್ರೀಯರ ಸಂಖ್ಯೆ (೫,೯೦,೦೧೨) ಹೆಚ್ಚಾಗಿರುವುದು ಕಂಡುಬಂದಿದೆ. ಉಡುಪಿ ತಾಲೂಕಿನಲ್ಲಿಯೇ ಸ್ತ್ರೀಯರ ಸಂಖ್ಯೆ ಜಿಲ್ಲೆಯ ಇತರ ತಾಲೂಕುಗಳಿಗಿಂತ ಹೆಚ್ಚಾಗಿರುವುದೂ (೨,೭೮,೨೦೪) ವೇದ್ಯವಾಗುತ್ತದೆ. ನಗರಪ್ರದೇಶದಲ್ಲಿನ ಸ್ತ್ರೀ–ಪುರುಷರ ಸಂಖ್ಯೆಯನ್ನು ಹೋಲಿಸಿದರೆ ಕಾರ್ಕಳ ತಾಲೂಕಿನ ನಗರಪ್ರದೇಶದಲ್ಲಿ ಮಾತ್ರ ಸ್ತ್ರೀ–ಪುರುಷರ ಸಂಖ್ಯೆ ಬಹುಮಟ್ಟಿಗೆ ಸಮನಾಗಿರುವುದು (ಕ್ರಮವಾಗಿ ೧೨,೪೩೦ ಹಾಗೂ ೧೨,೬೮೬) ಗಮನಾರ್ಹವಾಗಿದೆ.

**ಕೋಷ್ಟಕ ೩.೧: ತಾಲೂಕುವಾರು ಜನಸಂಖ್ಯಾ ವಿವರ, ೨೦೦೧**

| ತಾಲೂಕು | | ಒಟ್ಟು | ಪುರುಷರು | ಮಹಿಳೆಯರು |
|---|---|---|---|---|
| **ಜಿಲ್ಲೆಯ ಒಟ್ಟು** | ಒಟ್ಟು | ೧೧,೧೨,೨೪೩ | ೫,೨೨,೨೩೧ | ೫,೯೦,೦೧೨ |
| | ಗ್ರಾಮೀಣ | ೯,೦೫,೮೯೦ | ೪,೨೧,೦೫೬ | ೪,೮೪,೮೩೪ |
| | ನಗರ | ೨,೦೬,೩೫೩ | ೧,೦೧,೧೭೫ | ೧,೦೫,೧೭೮ |
| **ಕುಂದಾಪುರ** | ಒಟ್ಟು | ೩,೭೭,೪೨೦ | ೧,೭೪,೪೫೫ | ೨,೦೨,೯೬೫ |
| | ಗ್ರಾಮೀಣ | ೩,೪೮,೮೨೯ | ೧,೬೦,೫೩೬ | ೧,೮೮,೨೯೩ |
| | ನಗರ | ೨೮,೫೯೧ | ೧೩,೯೧೯ | ೧೪,೬೭೨ |
| **ಉಡುಪಿ** | ಒಟ್ಟು | ೫,೨೯,೨೨೫ | ೨,೫೧,೦೨೧ | ೨,೭೮,೨೦೪ |
| | ಗ್ರಾಮೀಣ | ೩,೭೬,೫೭೯ | ೧,೭೬,೪೫೧ | ೨,೦೦,೧೨೮ |
| | ನಗರ | ೧,೫೨,೬೪೬ | ೭೪,೫೭೦ | ೭೮,೦೭೬ |
| **ಕಾರ್ಕಳ** | ಒಟ್ಟು | ೨,೦೫,೫೯೮ | ೯೬,೭೫೫ | ೧,೦೮,೮೪೩ |
| | ಗ್ರಾಮೀಣ | ೧,೮೦,೪೮೨ | ೮೪,೦೬೯ | ೯೬,೪೧೩ |
| | ನಗರ | ೨೫,೧೧೬ | ೧೨,೬೮೬ | ೧೨,೪೩೦ |

*ಆಧಾರ : ಜನಗಣತಿ ಸಂಕ್ಷಿಪ್ತ ವರದಿ ೨೦೦೧ ಪುಟ : ೭೫–೭೬*

## ಸಾಂಸ್ಥಿಕ ವಸತಿಗಳು ಮತ್ತು ಜನಸಂಖ್ಯೆ

ವಿದ್ಯಾರ್ಥಿ ನಿಲಯ, ವಸತಿಗೃಹ, ಆಶ್ರಮ, ಸೆರೆಮನೆ ಮುಂತಾದೆಡೆಗಳಲ್ಲಿ ವಾಸಿಸುವ ಜನರ ಸಂಖ್ಯೆಯನ್ನು ಜನಗಣತಿಯಲ್ಲಿ ಸಾಂಸ್ಥಿಕ ಜನಸಂಖ್ಯೆ (Institutional Population)ಎಂದು ಪರಿಗಣಿಸಲಾಗುತ್ತದೆ. ೨೦೦೧ರ ಜನಗಣತಿಯಂತೆ ಉಡುಪಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ೨೫೨ ಹಾಗೂ ನಗರ ಭಾಗದಲ್ಲಿ ೧೯೫, (ಒಟ್ಟು ೪೪೭) ಸಾಂಸ್ಥಿಕ ವಸತಿಗಳು (Institutional Households)ಗಳಿದ್ದವು. ಇವುಗಳಲ್ಲಿ ೧೨,೫೬೭ ಜನ ವಾಸವಿದ್ದು ಅವರಲ್ಲಿ ಪುರುಷರು (೬,೮೭೯) ಸ್ತ್ರೀಯರಿಗಿಂತ (೫,೬೮೮) ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದರೆ, ಗ್ರಾಮೀಣ ಭಾಗಕ್ಕಿಂತ (೨,೧೧೮) ನಗರಪ್ರದೇಶದಲ್ಲಿ (೩,೫೭೦) ಸ್ತ್ರೀಯರ ಸಂಖ್ಯೆ ಹೆಚ್ಚಾಗಿದ್ದಿತು. ಉದ್ಯೋಗ, ಶಿಕ್ಷಣ ಇತ್ಯಾದಿಗಳಿಂದಾಗಿ ನಗರಗಳ ವಸತಿನಿಲಯಗಳನ್ನು

ಹೆಚ್ಚು ಮಹಿಳೆಯರು ಆಶ್ರಯಿಸಿರಬಹುದಾದ್ದರಿಂದ ಈ ಹೆಚ್ಚಳ ಆಗಿರಬಹುದು. ಸಾಂಸ್ಥಿಕ ಕುಟುಂಬಗಳಲ್ಲಿನ ಅಕ್ಷರಸ್ಥರ ಅಂಕಿಅಂಶಗಳನ್ನು ಪರಿಶೀಲಿಸಿದಾಗ ನಗರಪ್ರದೇಶದಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ತುಸು ಹೆಚ್ಚಾಗಿರುವುದನ್ನು ಈ ದೃಷ್ಟಿಯಿಂದ ಉಲ್ಲೇಖಿಸಬಹುದು. ಪರಿಶಿಷ್ಟ ಜಾತಿ ಹಾಗೂ ಪಂಗಡದವರು ನಗರಕ್ಕಿಂತ ಗ್ರಾಮೀಣ ಪ್ರದೇಶದ (ವಿದ್ಯಾರ್ಥಿನಿಲಯ, ವಸತಿಗೃಹ ಮೊದಲಾದ) ಸಾಂಸ್ಥಿಕ ಕುಟುಂಬಗಳಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾಗೆಯೇ ಸ್ತ್ರೀಯರಿಗಿಂತ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ಸಾಂಸ್ಥಿಕ ಕುಟುಂಬಗಳನ್ನು ಆಶ್ರಯಿಸಿರುವುದೂ ಗಮನಾರ್ಹವೆನಿಸಿದೆ. ಹೆಚ್ಚಿನ ಪರಿಶೀಲನೆಗಾಗಿ ಕೋಷ್ಟಕ ೩.೨ರಲ್ಲಿ ಜಿಲ್ಲೆಯ ಸಾಂಸ್ಥಿಕ ಜನಸಂಖ್ಯೆಯ ಕೆಲವು ಅಂಶಗಳನ್ನು ನೀಡಲಾಗಿದೆ.

**ಕೋಷ್ಟಕ ೩.೨ : ಸಾಂಸ್ಥಿಕ ಕುಟುಂಬಗಳು**

| ಘಟಕ | ಲಿಂಗ | ಒಟ್ಟು | ಗ್ರಾಮೀಣ | ನಗರ |
|---|---|---|---|---|
| **ಸಾಂಸ್ಥಿಕ ಕುಟುಂಬಗಳು** | | ೪೪೭ | ೨೫೨ | ೧೯೫ |
| **ಸಾಂಸ್ಥಿಕ ಜನಸಂಖ್ಯೆ** | ಒಟ್ಟು | ೧೨,೫೬೭ | ೫,೪೭೪ | ೭,೦೯೩ |
| | ಪುರುಷರು | ೬,೮೭೯ | ೩,೩೫೬ | ೩,೫೨೩ |
| | ಸ್ತ್ರೀಯರು | ೫,೬೮೮ | ೨,೧೧೮ | ೩,೫೭೦ |
| **೦–೬ ವಯೋಗುಂಪು** | ಒಟ್ಟು | ೨೪೨ | ೧೦೨ | ೧೪೦ |
| | ಪುರುಷರು | ೧೩೨ | ೪೯ | ೮೩ |
| | ಸ್ತ್ರೀಯರು | ೧೧೦ | ೫೩ | ೫೭ |
| **ಪರಿಶಿಷ್ಟ ಜಾತಿ** | ಒಟ್ಟು | ೫೯೭ | ೩೪೬ | ೨೫೧ |
| | ಪುರುಷರು | ೩೭೭ | ೨೨೯ | ೧೪೮ |
| | ಸ್ತ್ರೀಯರು | ೨೨೦ | ೧೧೭ | ೧೦೩ |
| **ಪರಿಶಿಷ್ಟ ಪಂಗಡ** | ಒಟ್ಟು | ೬೨೫ | ೪೦೬ | ೨೧೯ |
| | ಪುರುಷರು | ೩೮೨ | ೨೯೫ | ೮೭ |
| | ಸ್ತ್ರೀಯರು | ೨೪೩ | ೧೧೧ | ೧೩೨ |
| **ಅಕ್ಷರಸ್ಥರು** | ಒಟ್ಟು | ೧೧,೭೬೧ | ೫,೦೫೭ | ೬,೭೦೪ |
| | ಪುರುಷರು | ೬,೪೪೧ | ೩,೧೪೭ | ೩,೨೯೪ |
| | ಸ್ತ್ರೀಯರು | ೫,೩೨೦ | ೧,೯೧೦ | ೩,೪೧೦ |

*ಆಧಾರ : ಜನಗಣತಿಯ ೨೦೦೧, ಪುಟ – ೨೦೫*

## ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ

ಖಾಯಂ ಆಗಿ ವಾಸಿಸಲು ತಮ್ಮದೇ ಆದ ನಿವಾಸ ಇರದೆ, ಅಲೆಮಾರಿ ಜೀವನ ನಡೆಸುವ ಭಿಕ್ಷುಕರು ಮೊದಲಾದವರ ಕುಟುಂಬಗಳನ್ನು ನಿರ್ವಸಿತ ಕುಟುಂಬಗಳೆಂದು ಜನಗಣತಿಯಲ್ಲಿ ಗುರುತಿಸಲಾಗಿದೆ. ಇಂಥಾ ವ್ಯಕ್ತಿಗಳು ಸಾಮಾನ್ಯವಾಗಿ ಪಾಳುಮಂಟಪ, ಬಯಲು ಸ್ಥಳ, ಬಸ್/ರೈಲು ನಿಲ್ದಾಣ ಮೊದಲಾದ ಸ್ಥಳಗಳಲ್ಲಿ ಆಶ್ರಯ ಪಡೆಯುತ್ತಾರೆ. ೨೦೦೧ರ ಜನಗಣತಿಯಂತೆ ಉಡುಪಿ ಜಿಲ್ಲೆಯಲ್ಲಿ ಒಟ್ಟು ೬೪೯ ನಿರ್ವಸಿತ ಕುಟುಂಬಗಳಿದ್ದು, ಇವುಗಳಲ್ಲಿ ೪೦೬ ಗ್ರಾಮಾಂತರ ಪ್ರದೇಶದಲ್ಲಿಯೂ, ೨೪೩ ನಗರ ಪ್ರದೇಶದಲ್ಲಿಯೂ ಗಣತಿಯಾಗಿವೆ. ಈ ನಿರ್ವಸಿತ ಕುಟುಂಬಗಳಲ್ಲಿನ ಒಟ್ಟು ಜನಸಂಖ್ಯೆ ೨೩೧೧ ಆಗಿದ್ದು, ಅದರಲ್ಲಿ ಪುರುಷರು (೧,೫೯೯) ಸ್ತ್ರೀಯರಿಗಿಂತ (೭೧೨) ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದುದು ಹಾಗೂ ನಗರ ಪ್ರದೇಶಕ್ಕಿಂತ (೯೩೦) ಗ್ರಾಮೀಣ ಪ್ರದೇಶದಲ್ಲಿ (೧,೩೮೧) ಅವರ ಸಂಖ್ಯೆ ಹೆಚ್ಚಾಗಿದ್ದುದೂ

**ಕೋಷ್ಟಕ ೩.೩: ನಿರ್ವಸಿತ ಕುಟುಂಬಗಳು**

| ಘಟಕ | ಲಿಂಗ | ಒಟ್ಟು | ಗ್ರಾಮೀಣ | ನಗರ |
|---|---|---|---|---|
| **ಒಟ್ಟು ನಿರ್ವಸಿತ ಕುಟುಂಬಗಳು** | | ೬೪೯ | ೪೦೬ | ೨೪೩ |
| **ನಿರ್ವಸಿತ ಜನಸಂಖ್ಯೆ** | ಒಟ್ಟು | ೨,೩೧೧ | ೧,೩೮೧ | ೯೩೦ |
| | ಪುರುಷರು | ೧,೫೯೯ | ೯೩೦ | ೬೬೯ |
| | ಸ್ತ್ರೀಯರು | ೭೧೨ | ೪೫೧ | ೨೬೧ |
| **೦–೬ ವಯೋಗುಂಪು** | ಒಟ್ಟು | ೨೬೦ | ೧೭೪ | ೮೬ |
| | ಪುರುಷರು | ೧೩೪ | ೮೯ | ೪೫ |
| | ಸ್ತ್ರೀಯರು | ೧೨೬ | ೮೫ | ೪೧ |
| **ಪರಿಶಿಷ್ಟ ಜಾತಿ** | ಒಟ್ಟು | ೨೭೯ | ೨೧೨ | ೬೭ |
| | ಪುರುಷರು | ೧೭೫ | ೧೩೧ | ೪೪ |
| | ಸ್ತ್ರೀಯರು | ೧೦೪ | ೮೧ | ೨೩ |
| **ಪರಿಶಿಷ್ಟ ಪಂಗಡ** | ಒಟ್ಟು | ೨೩೧ | ೧೪೪ | ೮೭ |
| | ಪುರುಷರು | ೧೪೫ | ೯೦ | ೫೫ |
| | ಸ್ತ್ರೀಯರು | ೮೬ | ೫೪ | ೩೨ |
| **ಅಕ್ಷರಸ್ಥರು** | ಒಟ್ಟು | ೮೨೫ | ೪೩೯ | ೩೮೬ |
| | ಪುರುಷರು | ೭೧೪ | ೩೭೩ | ೩೪೧ |
| | ಸ್ತ್ರೀಯರು | ೧೧೧ | ೬೬ | ೪೫ |

*ಆಧಾರ : ಭಾರತೀಯ ಜನಗಣತಿ ವರದಿ ೨೦೦೧, ಪುಟ – ೨೨೧*

ಕಂಡುಬಂದಿದೆ. ಜಿಲ್ಲೆಯಲ್ಲಿನ ೦–೬ ವಯೋಗುಂಪಿನ ಮಕ್ಕಳಲ್ಲಿ ನಿರ್ವಸಿತ ಕುಟುಂಬಗಳಲ್ಲಿಯೇ ಹೆಚ್ಚಿನ ಮಕ್ಕಳಿದ್ದಾರೆ. ನಗರಕ್ಕಿಂತ (೮೬) ಗ್ರಾಮೀಣ ಪ್ರದೇಶಗಳಲ್ಲಿಯೇ (೧೭೪) ಹೆಚ್ಚಿನ ಮಕ್ಕಳಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಕ್ಷರಸ್ಥರ ಅಂಕಿಅಂಶಗಳನ್ನು ಪರಿಶೀಲಿಸಿದಾಗಲೂ ಇದೇ ಪ್ರವೃತ್ತಿ ಕಂಡುಬಂದಿದೆ. ಕೋಷ್ಟಕ ೩.೩ರಲ್ಲಿ ನಿರ್ವಸಿತ ಕುಟುಂಬಗಳ ವಿವಿಧ ಅಂಕಿಅಂಶಗಳನ್ನು ಗ್ರಾಮೀಣ, ನಗರವಾರು ನೀಡಲಾಗಿದೆ.

## ಲಿಂಗಾನುಪಾತ

ಪ್ರತೀ ಸಾವಿರ ಗಂಡಸರಿಗೆ ಅನುಪಾತವಾಗಿ ಇರುವ ಹೆಂಗಸರ ಸಂಖ್ಯೆಯನ್ನು ಜನಗಣತಿಯಲ್ಲಿ ಲಿಂಗಾನುಪಾತ ಅಥವಾ ಸ್ತ್ರೀ–ಪುರುಷರ ಪ್ರಮಾಣವೆಂದು ಪರಿಗಣಿಸಲಾಗುತ್ತದೆ. ಈ ಪ್ರಮಾಣವು ಅಲ್ಲಲ್ಲಿನ ಜನವರ್ಗದ ಸಾಮಾಜಿಕ, ಆರ್ಥಿಕ ವ್ಯವಸ್ಥೆ, ಧಾರ್ಮಿಕ ನಂಬಿಕೆ, ಸಂಪ್ರದಾಯ, ವೈವಾಹಿಕ ಸ್ಥಿತಿಗತಿ, ವಲಸೆ, ಸಾವಿನ ಪ್ರಮಾಣ ಮೊದಲಾದವುಗಳನ್ನು ಅವಲಂಬಿಸಿ ವ್ಯತ್ಯಾಸವಾಗುತ್ತದೆ. ೨೦೦೧ರ ಜನಗಣತಿಯಂತೆ ಉಡುಪಿ ಜಿಲ್ಲೆಯಲ್ಲಿ ೧೦೦೦ ಪುರುಷರಿಗೆ ಇದ್ದ ಸ್ತ್ರೀಯರ ಪ್ರಮಾಣವು ೧,೧೩೦ ಆಗಿದ್ದಿತು. ಈ ಲಿಂಗಾನುಪಾತವು ರಾಜ್ಯ (೯೬೫), ರಾಷ್ಟ್ರ ಪ್ರಮಾಣ (೯೩೩) ಹಾಗೂ ನೆರೆಯ ದಕ್ಷಿಣ ಕನ್ನಡ ಜಿಲ್ಲೆಯ (೧೦೨೨) ಅನುಪಾತಗಳಿಗಿಂತಲೂ ಹೆಚ್ಚಾಗಿಯೇ ಇರುವುದು ಗಮನಾರ್ಹವಾಗಿದೆ. ೦–೬ ವಯೋಗುಂಪಿನವರ ಪ್ರಮಾಣವು ರಾಷ್ಟ್ರಮಟ್ಟದಲ್ಲಿ ೯೨೭, ರಾಜ್ಯದಲ್ಲಿ ೯೪೬ ಆಗಿದ್ದು ಈ ಎರಡೂ ಪ್ರಮಾಣಗಳು ೧೯೯೧ರ ಗಣತಿಯಲ್ಲಿ ದಾಖಲಾದ ಪ್ರಮಾಣಗಳಿಗಿಂತ (ಕ್ರಮವಾಗಿ ೯೪೫ ಹಾಗೂ ೯೬೦) ಕಡಿಮೆಯೇ ಆಗಿವೆ. ಆದರೆ, ಉಡುಪಿ ಜಿಲ್ಲೆಯಲ್ಲಿ ದಾಖಲಾದ ಇದೇ ವಯೋಮಾನದವರ

**ಕೋಷ್ಟಕ ೩.೪ : ಲಿಂಗಾನುಪಾತ**

| | | |
|---|---|---|
| **ಜಿಲ್ಲೆಯ ಒಟ್ಟು** | ಒಟ್ಟು | ೧೧೩೦ |
| | ಗ್ರಾಮೀಣ<br>ನಗರ | ೧೧೫೧<br>೧೦೪೦ |
| **ಕುಂದಾಪುರ** | ಒಟ್ಟು<br>ಗ್ರಾಮೀಣ<br>ನಗರ | ೧೧೬೩<br>೧೧೭೩<br>೧೦೫೪ |
| **ಉಡುಪಿ** | ಒಟ್ಟು<br>ಗ್ರಾಮೀಣ<br>ನಗರ | ೧೧೦೮<br>೧೧೩೪<br>೧೦೪೭ |
| **ಕಾರ್ಕಳ** | ಒಟ್ಟು<br>ಗ್ರಾಮೀಣ<br>ನಗರ | ೧೧೨೫<br>೧೧೪೭<br>೯೮೦ |

*ಆಧಾರ : ಉಡುಪಿ ಜಿಲ್ಲಾ ಜನಸಂಖ್ಯಾ ವರದಿ ೨೦೦೧, ಪುಟ : ೭-೧೫*

ಪ್ರಮಾಣವು ೨೦೦೧ರಲ್ಲಿ ೯೫೮ ಆಗಿದೆ. ಹಾಗೂ ಪರಿಶಿಷ್ಟ ಜಾತಿ (೯೬೦), ಪರಿಶಿಷ್ಟ ಪಂಗಡದವರ ಅನುಪಾತವು (೯೬೧) ರಾಜ್ಯಕ್ಕಿಂತ ಹೆಚ್ಚಾಗಿಯೇ ಇದೆ. ತೌಲನಿಕವಾಗಿ ನೋಡಿದಾಗ, ಕುಂದಾಪುರ ಹಾಗೂ ಉಡುಪಿ ತಾಲೂಕುಗಳ ನಗರ ಪ್ರದೇಶದ ಸ್ತ್ರೀ-ಪುರುಷರ ಪ್ರಮಾಣವು ಬಹುಮಟ್ಟಿಗೆ ಒಂದೇ ಆಗಿರುವುದು (ಕ್ರಮವಾಗಿ ೧,೦೫೪ ಹಾಗೂ ೧,೦೪೭) ಕಂಡುಬರುತ್ತದೆ. ಆದರೆ, ಕುಂದಾಪುರ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಪುರುಷರಿಗಿಂತ ಸ್ತ್ರೀಯರ ಪ್ರಮಾಣವು ಅತಿ ಹೆಚ್ಚಾಗಿದೆ (೧,೧೭೩). ಕಾರ್ಕಳ ತಾಲೂಕಿನ ನಗರ ಪ್ರದೇಶದಲ್ಲಿ ಸ್ತ್ರೀ-ಪುರುಷರ ಪ್ರಮಾಣವು ಜಿಲ್ಲೆಯ ಉಳಿದೆಡೆಗಿಂತ ಅತಿ ಕಡಿಮೆ (೯೮೦) ಇರುವುದು ಉಲ್ಲೇಖನೀಯವಾಗಿದೆ. ಕೋಷ್ಟಕ ೩.೪ರಲ್ಲಿ ಜಿಲ್ಲೆಯ ಸ್ತ್ರೀ-ಪುರುಷರ ಪ್ರಮಾಣವನ್ನು ತಾಲೂಕುವಾರು ನೀಡಲಾಗಿದೆ.

## ಜನಸಂಖ್ಯಾ ಬೆಳವಣಿಗೆ

ರಾಜ್ಯದಲ್ಲಿನ ಜನಸಂಖ್ಯಾ ಬೆಳವಣಿಗೆಯು ೧೯೮೧-೧೯೯೧ರ ಅವಧಿಗೆ ಹೋಲಿಸಿದರೆ (ಶೇ.೨೧.೧) ೧೯೯೧-೨೦೦೧ರ ಅವಧಿಯಲ್ಲಿ ಇಳಿಮುಖ (ಶೇ.೧೭.೫)ವಾಗಿರುವುದು ಕಂಡುಬರುತ್ತದೆ. ಈ ದಶವಾರ್ಷಿಕ ಬೆಳವಣಿಗೆ ಪ್ರಮಾಣವು ರಾಷ್ಟ್ರದ ಪ್ರಮಾಣ (ಶೇ.೨೧.೫) ಕ್ಕಿಂತಲೂ ಕಡಿಮೆಯಾಗಿದೆ. ರಾಜ್ಯದ ಈ ಪ್ರಮಾಣಕ್ಕೆ ಹೋಲಿಸಿದರೆ ಉಡುಪಿ ಜಿಲ್ಲೆಯ ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆಯು ೧೯೯೧-೨೦೦೧ರಲ್ಲಿ ಇನ್ನೂ ಕಡಿಮೆ (ಶೇ.೭.೧) ಆಗಿರುವುದು ಗಮನಾರ್ಹವಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳ ಒಟ್ಟಾರೆ ಜನಸಂಖ್ಯೆಗಳನ್ನು ಇಳಿಕೆ ಕ್ರಮದಲ್ಲಿ ಗಮನಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯು ಆರನೇ ಸ್ಥಾನದಲ್ಲಿ ಬಂದರೆ, ಉಡುಪಿ ಜಿಲ್ಲೆಯು ೨೧ನೇ ಸ್ಥಾನದಲ್ಲಿ ನಿಲ್ಲುತ್ತದೆ. ಸಾಂಸ್ಥಿಕ ಜನಸಂಖ್ಯೆಗಳನ್ನು ಇದೇ ರೀತಿ ಹೋಲಿಸಿ ನೋಡಿದಾಗ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿಯೂ, ಉಡುಪಿಯು ೧೮ನೇ ಸ್ಥಾನದಲ್ಲಿಯೂ ಇರುವುದು ಕಂಡುಬರುತ್ತದೆ. ಹಾಗೆಯೇ, ನಿರ್ವಸಿತರ ಜನಸಂಖ್ಯಾ ಹೋಲಿಕೆಯಲ್ಲಿ ದಕ್ಷಿಣ ಕನ್ನಡ ಏಳನೇ ಸ್ಥಾನದಲ್ಲಿದ್ದರೆ ಉಡುಪಿ ಜಿಲ್ಲೆಯು ೧೯ನೇ ಸ್ಥಾನಕ್ಕೆ ಬರುತ್ತದೆ. ಇನ್ನು ಪರಿಶಿಷ್ಟ ಜಾತಿಗಳ ಜನಸಂಖ್ಯೆಗಳನ್ನು ಗಮನಿಸಿದರೆ ದಕ್ಷಿಣ ಕನ್ನಡ ಜಿಲ್ಲೆಯು ೨೪ನೇ ಸ್ಥಾನದಲ್ಲಿಯೂ, ಉಡುಪಿಯು ೨೬ನೇ ಸ್ಥಾನದಲ್ಲಿ ಇರುವುದು ಹಾಗೂ ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಹೋಲಿಕೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ೧೭ನೇ ಸ್ಥಾನ ಮತ್ತು ಉಡುಪಿಯು ೨೨ನೇ ಸ್ಥಾನದಲ್ಲಿರುವುದು ಕಂಡುಬಂದಿದೆ.

**ಮಕ್ಕಳ ಜನಸಂಖ್ಯಾ ಪ್ರಮಾಣ:** ರಾಜ್ಯದಲ್ಲಿ ಒಟ್ಟಾರೆ ಶಿಶು ಜನನ ಪ್ರಮಾಣ ಇಳಿಮುಖವಾಗಿದೆ. ಜನಗಣತಿ ದಾಖಲೆಗಳಂತೆ ೨೦೦೧ರಲ್ಲಿ ಗಣತಿಯಾದ ೦-೬ ವಯೋಗುಂಪಿನ ಮಕ್ಕಳ ಜನಸಂಖ್ಯಾ ಪ್ರಮಾಣವು ರಾಜ್ಯದ ಒಟ್ಟಾರೆ ಜನಸಂಖ್ಯೆಗೆ ಹೋಲಿಸಿದಲ್ಲಿ ಶೇ.೧೩.೬ ಆಗಿದೆ. ಆದರೆ, ಇದು ೧೯೯೧ರಲ್ಲಿ ಶೇ.೧೭ ಆಗಿದ್ದಿತು. ವಿಶೇಷವೆಂದರೆ ರಾಜ್ಯದ ಪರಿಶಿಷ್ಟ ಜಾತಿ (ಶೇ.೧೫.೨) ಮತ್ತು ಪರಿಶಿಷ್ಟ ಪಂಗಡಗಳ (ಶೇ.೧೫.೬) ಜನಸಂಖ್ಯಾ ಬೆಳವಣಿಗೆ ರಾಜ್ಯದ ಒಟ್ಟಾರೆ ಜನಸಂಖ್ಯಾ ಪ್ರಮಾಣಕ್ಕಿಂತ ಹೆಚ್ಚಾಗಿಯೇ ಇದೆ. ಜಿಲ್ಲೆಗಳಿಗೆ ಹೋಲಿಸಿದಲ್ಲಿ ಒಟ್ಟಾರೆ ಮಕ್ಕಳು ಹುಟ್ಟುವ ಪ್ರಮಾಣ ಉಡುಪಿ ಜಿಲ್ಲೆಯಲ್ಲಿಯೂ ಕಡಿಮೆ (ಶೇ.೧೦.೩)ಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ (ಶೇ.೧೨.೨) ಹಾಗೂ ಪರಿಶಿಷ್ಟ ಪಂಗಡ (ಶೇ.೧೧.೪) ಗಳಲ್ಲಿನ ಶಿಶು ಜನನ ಪ್ರಮಾಣ ಇಳಿಮುಖವಾಗಿರುವುದೂ ೨೦೦೧ರ ಗಣತಿಯಲ್ಲಿ ದಾಖಲಾಗಿದೆ.

## ಅಂಗವಿಕಲರು

ಕಿವುಡು, ಕುರುಡು, ಕೈಕಾಲು ಊನ, ಬುದ್ಧಿಮಾಂದ್ಯತೆ, ಮಾನಸಿಕ ಅಸ್ವಸ್ಥತೆ ಮೊದಲಾದವುಗಳನ್ನು ಅಂಗವಿಕಲತೆ ಎಂದು ಪರಿಗಣಿಸಲಾಗುತ್ತದೆ. ಕೆಲವರು ಹುಟ್ಟಿನಿಂದ, ಇನ್ನೂ ಕೆಲವರು ಆ ಬಳಿಕ ಆಕಸ್ಮಿಕ ಅಥವಾ ವೈದ್ಯಕೀಯ ಕಾರಣದಿಂದ ಅಂಗವೈಕಲ್ಯಕ್ಕೆ ತುತ್ತಾಗುತ್ತಾರೆ. ಇವರು ಮೇಲ್ನೋಟಕ್ಕೆ ಅಂಗವಿಕಲರಂತೆ ಕಂಡರೂ ದೈಹಿಕ ಅಶಕ್ತತೆಯನ್ನು ಮರೆಸಿ, ತಮ್ಮ ಸಾಮರ್ಥ್ಯವನ್ನು ವಿಭಿನ್ನವಾಗಿ ತೋರುವವರಾಗಿರುತ್ತಾರೆ. ಅಂತೆಯೇ, ಅವರನ್ನು Physically challenged persons, ವಿಕಲಾತೀತರು ಅಥವಾ ವಿಶೇಷ ಮಕ್ಕಳು ಮೊದಲಾದ ಹೆಸರುಗಳಿಂದ ಈಚೆಗೆ ಗುರುತಿಸಲಾಗುತ್ತಿದೆ. ಅಂಗವಿಕಲರ ಗಣತಿಯನ್ನು ಪ್ರತ್ಯೇಕವಾಗಿ ಮಾಡಲಾಗುತ್ತದೆ. ಆದರೂ ಅನೇಕ ಅಂಗವಿಕಲರು ನಿರ್ವಸಿತರಾಗಿ ಭಿಕ್ಷುಕ ಸಮುದಾಯದಲ್ಲಿ ಸೇರಿ, ಸಾಮಾನ್ಯ ಗಣತಿ ಸಮಯದಲ್ಲಿ ಅವರು ಮನೆಗಳಲ್ಲಿ ಅಲಭ್ಯವಾಗುವುದರಿಂದ ಅಂಗವಿಕಲರ ವಾಸ್ತವ ಅಂಕಿ-ಅಂಶಗಳನ್ನು ಗುರುತಿಸುವುದು ಕಷ್ಟವಾಗುತ್ತದೆ. ಜನಗಣತಿ ಇಲಾಖೆಯು ೨೦೦೧ರ ಸಾಲಿಗೆ ಸಂಬಂಧಿಸಿ ಸಿದ್ಧಪಡಿಸಿರುವ ಅಂಕಿಅಂಶಗಳನ್ನು ಗಮನಿಸಿದಾಗ, ಜಿಲ್ಲೆಯಲ್ಲಿ ೩೮ ಸಾವಿರದಷ್ಟು ಅಂಗವಿಕಲರಿರುವುದು ವೇದ್ಯವಾಗುತ್ತದೆ. ಈ ವಿವಿಧ ಬಗೆಯ ಅಂಗವಿಕಲರಲ್ಲಿ ದೃಷ್ಟಿಯಲ್ಲಿ ವೈಕಲ್ಯ ಉಳ್ಳವರು (ಅಂಧರು) ಹೆಚ್ಚಿನ ಸಂಖ್ಯೆಯಲ್ಲಿಯೂ (೬,೭೪೨), ನಡಿಗೆಯಲ್ಲಿ ವೈಕಲ್ಯ ಉಳ್ಳವರು (ಕುಂಟ) ಎರಡನೆಯ ಸ್ಥಾನದಲ್ಲಿಯೂ (೪,೨೩೬) ಇದ್ದಾರೆ. ಮಾನಸಿಕ ಅಸ್ವಸ್ಥರು ಅಥವಾ ಬುದ್ಧಿಮಾಂದ್ಯರು ಮೂರನೇ ಸ್ಥಾನದಲ್ಲಿಯೂ (೩,೦೫೭) ಇದ್ದಾರೆ. ಅಂಗವಿಕಲರ ಸಂಖ್ಯೆಯನ್ನು ಲಿಂಗಾನುಗುಣವಾಗಿ ಹೋಲಿಸಿದಾಗ ೮,೯೮೭ ರಷ್ಟು ಇರುವ ಪುರುಷರು ಸ್ತ್ರೀಯರಿಗಿಂತ (೮,೦೬೩) ಹೆಚ್ಚಿನ ಸಂಖ್ಯೆಯಲ್ಲಿರುವುದು ಹಾಗೂ ನಗರ ಪ್ರದೇಶ (೨,೨೭೩)ಕ್ಕಿಂತ ಗ್ರಾಮೀಣ ಪ್ರದೇಶ (೧೪,೭೭೭)ದಲ್ಲಿಯೇ ಅಂಗವಿಕಲರ ಸಂಖ್ಯೆ ಬಹಳ ಹೆಚ್ಚಾಗಿರುವುದು ಕಂಡುಬರುತ್ತದೆ. ಹೆಚ್ಚಿನ ಪರಿಶೀಲನೆಗಾಗಿ ಕೋಷ್ಟಕ ೩.೫ರಲ್ಲಿ ವಿವಿಧ ಬಗೆಯ ಅಂಗವಿಕಲರ ಅಂಕಿ-ಅಂಶಗಳನ್ನು ನೀಡಲಾಗಿದೆ.

**ಕೋಷ್ಟಕ ೩.೫ : ಜಿಲ್ಲೆಯಲ್ಲಿರುವ ವಿವಿಧ ಬಗೆಯ ಅಂಗವಿಕಲರ ವಿವರ**

| ವಿಧ | ಲಿಂಗ | ಒಟ್ಟು | ಗ್ರಾಮೀಣ | ನಗರ |
|---|---|---|---|---|
| ಶ್ರವಣ | ಒಟ್ಟು | ೮೦೯ | ೭೦೧ | ೧೦೮ |
| | ಗಂಡಸರು | ೩೬೯ | ೩೧೫ | ೫೪ |
| | ಹೆಂಗಸರು | ೪೪೦ | ೩೮೬ | ೫೪ |
| ನಡಿಗೆ | ಒಟ್ಟು | ೪೨೩೬ | ೩೬೧೨ | ೬೨೪ |
| | ಗಂಡಸರು | ೨೫೯೪ | ೨೨೧೧ | ೩೮೩ |
| | ಹೆಂಗಸರು | ೧೬೪೨ | ೧೪೦೧ | ೨೪೧ |
| ಮಾನಸಿಕ | ಒಟ್ಟು | ೩೦೫೭ | ೨೫೧೪ | ೫೪೩ |
| | ಗಂಡಸರು | ೧೬೬೫ | ೧೩೬೯ | ೨೯೬ |
| | ಹೆಂಗಸರು | ೧೩೯೨ | ೧೧೪೫ | ೨೪೭ |

*ಆಧಾರ : ಭಾರತೀಯ ಜನಗಣತಿ ವರದಿ ೨೦೦೧ – ಸಿಡಿ ರೂಪಾಂತರ*

## ವಯೋಗುಂಪು ಮತ್ತು ವೈವಾಹಿಕ ಸ್ಥಿತಿ

ಉಡುಪಿ ಜಿಲ್ಲೆಯಲ್ಲಿನ ವಿವಿಧ ವಯೋಮಾನದವರ ವೈವಾಹಿಕ ಸ್ಥಿತಿಗೆ ಸಂಬಂಧಿಸಿದಂತೆ ೨೦೦೧ರ ಜನಗಣತಿಯ ಅಂಕಿ ಅಂಶಗಳನ್ನು ಅವಲೋಕಿಸಿದರೆ ಕೆಲವೊಂದು ವಿಶೇಷ ಸಂಗತಿಗಳು ಗಮನ ಸೆಳೆಯುತ್ತವೆ. ಎಲ್ಲಾ ವಯಸ್ಸಿನವರ ಸಂಖ್ಯೆಯಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆಯೇ ಹೆಚ್ಚಾಗಿದೆ. ವಿವಾಹಿತ ಸ್ತ್ರೀಯರ ಸಂಖ್ಯೆ (೨,೫೪,೪೫೦) ಪುರುಷರಿಗಿಂತ (೨,೧೨,೨೫೫) ಹೆಚ್ಚಾಗಿಯೇ ಇದೆ. ಆದರೆ, ಅವಿವಾಹಿತರಲ್ಲಿ ಸ್ತ್ರೀಯರಿಗಿಂತ (೨,೭೦,೮೦೭) ಪುರುಷರ ಸಂಖ್ಯೆ (೩,೦೨,೨೬೨) ಹೆಚ್ಚಾಗಿದೆ. ವಿಶೇಷವೆಂದರೆ, ವಿಧುರರಿಗಿಂತ (೭,೩೦೦) ವಿಧವೆಯರ ಸಂಖ್ಯೆ (೬೩,೩೭೨) ಬಹಳ ಹೆಚ್ಚಾಗಿದೆ. ಹಾಗೆಯೇ, ವಿಚ್ಛೇದಿತರು ಅಥವಾ ಬೇರೆಯಾದವರ ಗುಂಪಿನಲ್ಲಿಯೂ ಪುರುಷರಿಗಿಂತ (೪೧೪) ಸ್ತ್ರೀಯರ ಸಂಖ್ಯೆ (೧,೩೮೩) ಹೆಚ್ಚಾಗಿದೆ. ೧೦ರಿಂದ ೧೪ ವರ್ಷಗಳ ವಯಸ್ಸಿನೊಳಗಾಗಿಯೇ ವಿಧುರರಾದವರ ಸಂಖ್ಯೆ ೧೫ ಆಗಿದ್ದರೆ,

**ಕೋಷ್ಟಕ ೩.೬: ವಯೋಗುಂಪು ಮತ್ತು ವೈವಾಹಿಕ ಸ್ಥಿತಿ (ಎಲ್ಲಾ ವರ್ಗ)**

| ವಯೋ ಗುಂಪು | ಒಟ್ಟು ಜನಸಂಖ್ಯೆ | | ಅವಿವಾಹಿತರು | | ವಿವಾಹಿತರು | | ವಿಧವೆ | ವಿಧುರ | ವಿಚ್ಛೇದಿತರು/ ಬೇರೆಯಾದವರು | |
|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | | | ಗಂಡು | ಹೆಣ್ಣು |
| ಎಲ್ಲಾ ವಯಸ್ಸಿನವರು | ೫೨೨೨೩೧ | ೫೯೦೦೧೨ | ೩೦೨೨೬೨ | ೨೭೦೮೦೭ | ೨೧೨೨೫೫ | ೨೫೪೪೫೦ | ೭೩೦೦ | ೬೩೩೭೨ | ೪೧೪ | ೧೩೮೩ |
| ೦-೯ | ೮೭೬೯೯ | ೮೪೨೭೪ | ೮೭೬೯೯ | ೮೪೨೭೪ | ೦ | ೦ | ೦ | ೦ | ೦ | ೦೦ |
| ೧೦-೧೪ | ೬೦೪೯೦ | ೫೯೬೦೭ | ೬೦೩೦೧ | ೫೯೧೨೪ | ೧೬೯ | ೩೯೬ | ೧೫ | ೭೮ | ೫ | ೯ |
| ೧೫-೧೯ | ೫೭೧೨೧ | ೬೮೭೮೪ | ೫೬೭೯೦ | ೬೬೨೭೯ | ೩೧೬ | ೨೪೪೮ | ೯ | ೪೪ | ೬ | ೧೩ |
| ೨೦-೨೪ | ೪೯೨೯೨ | ೬೨೨೬೯ | ೪೬೯೩೪ | ೪೨೮೧೧ | ೨೩೩೬ | ೧೯೨೫೪ | ೧೧ | ೧೬೮ | ೧೧ | ೩೬ |
| ೨೫-೨೯ | ೪೧೪೧೦ | ೫೦೯೭೦ | ೩೦೫೨೮ | ೧೨೦೯೪ | ೧೦೮೧೬ | ೩೮೨೫೮ | ೪೫ | ೫೨೨ | ೨೧ | ೯೬ |
| ೩೦-೩೪ | ೩೫೫೫೮ | ೪೦೨೪೩ | ೧೨೨೦೫ | ೨೫೨೫ | ೨೩೨೪೬ | ೩೬೫೭೯ | ೭೯ | ೯೮೯ | ೨೮ | ೧೫೦ |
| ೩೫-೩೯ | ೩೪೬೮೯ | ೪೨೬೩೮ | ೩೬೫೯ | ೧೦೭೮ | ೩೦೮೭೨ | ೩೯೫೨೫ | ೧೧೯ | ೧೮೧೮ | ೩೯ | ೨೧೭ |
| ೪೦-೪೪ | ೩೦೩೦೪ | ೩೩೮೪೮ | ೧೨೫೦ | ೫೯೨ | ೨೮೮೨೪ | ೩೦೩೬೦ | ೧೭೭ | ೨೬೭೭ | ೫೩ | ೨೧೯ |
| ೪೫-೪೯ | ೩೦೬೪೧ | ೩೩೧೮೨ | ೭೫೪ | ೪೮೦ | ೨೯೫೫೦ | ೨೮೩೧೬ | ೨೮೧ | ೪೧೬೦ | ೫೬ | ೨೨೬ |
| ೫೦-೫೪ | ೨೪೫೦೦ | ೨೬೫೪೫ | ೫೧೪ | ೩೭೮ | ೨೩೪೫೬ | ೨೦೨೬೬ | ೪೭೯ | ೫೭೬೧ | ೫೧ | ೧೪೦ |
| ೫೫-೫೯ | ೧೮೪೯೪ | ೨೧೩೧೧ | ೩೩೯ | ೨೧೯ | ೧೭೫೮೩ | ೧೪೯೪೮ | ೫೩೫ | ೬೦೫೦ | ೩೭ | ೯೪ |
| ೬೦-೬೪ | ೧೭೫೩೦ | ೨೦೬೧೬ | ೩೪೮ | ೨೩೦ | ೧೬೨೭೬ | ೧೦೯೭೨ | ೮೭೩ | ೯೩೨೬ | ೩೩ | ೮೮ |
| ೬೫-೬೯ | ೧೩೩೬೬ | ೧೭೨೭೧ | ೨೪೬ | ೧೭೨ | ೧೨೧೦೪ | ೭೨೦೬ | ೯೯೧ | ೯೮೫೪ | ೨೫ | ೩೯ |
| ೭೦-೭೪ | ೧೦೦೬೦ | ೧೩೦೭೪ | ೨೫೩ | ೧೯೩ | ೮೫೪೭ | ೩೪೫೦ | ೧೨೩೮ | ೯೪೦೧ | ೨೨ | ೩೦ |
| ೭೫-೭೯ | ೫೫೯೨ | ೭೨೮೫ | ೧೫೪ | ೯೫ | ೪೫೩೫ | ೧೫೨೮ | ೮೯೦ | ೫೬೪೮ | ೧೩ | ೧೪ |
| ೮೦+ | ೫೨೯೪ | ೭೯೨೯ | ೧೩೫ | ೧೩೭ | ೩೫೮೭ | ೯೧೧ | ೧೫೫೭ | ೬೮೬೯ | ೧೫ | ೧೨ |
| ವಯಸ್ಸು ತಿಳಿಸದವರು | ೧೯೨ | ೧೬೬ | ೧೫೩ | ೧೨೬ | ೩೮ | ೩೩ | ೧ | ೭ | ೦ | ೦ |
| ೧೮ರ ಒಳಗಿನವರು | ೧೮೧೭೦೦ | ೧೮೨೫೩೨ | ೧೮೧೩೫೦ | ೧೮೧೩೧೬ | ೩೨೨ | ೧೧೦೦ | ೨೦ | ೧೦೫ | ೮ | ೧೧ |
| ೨೧ರ ಒಳಗಿನವರು | ೨೧೮೬೫೨ | ೨೨೯೯೯೫ | ೨೧೭೭೬೩ | ೨೨೪೦೫೦ | ೮೫೦ | ೫೭೬೭ | ೨೬ | ೧೫೪ | ೧೩ | ೨೪ |

*ಆಧಾರ : ಭಾರತೀಯ ಜನಗಣತಿ ವರದಿ ೨೦೦೧ – ಸಿಡಿ ರೂಪಾಂತರ*

**ಕೋಷ್ಟಕ ೩.೭: ವಯೋಗುಂಪು ಮತ್ತು ವೈವಾಹಿಕ ಸ್ಥಿತಿ:ಪರಿಶಿಷ್ಟ ಜಾತಿ**

| ವಯೋ ಗುಂಪು | ಒಟ್ಟು ಜನಸಂಖ್ಯೆ | | ಅವಿವಾಹಿತರು | | ವಿವಾಹಿತರು | | ವಿಧುರ | ವಿಧವೆ | ವಿಚ್ಛೇದಿತರು/ ಬೇರೆಯಾದವರು | |
|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | | | ಗಂಡು | ಹೆಣ್ಣು |
| ಎಲ್ಲಾ ವಯಸ್ಸಿನವರು | ೩೩೩೪೫ | ೩೪೪೪೮ | ೨೦೭೫೬ | ೧೭೬೯೭ | ೧೨೦೮೧ | ೧೩೩೮೬ | ೪೭೫ | ೩೨೬೦ | ೩೩ | ೧೦೧ |
| ೦-೯ | ೫೯೭೫ | ೫೮೦೫ | ೫೯೭೫ | ೫೮೦೫ | ೦ | ೦ | ೦ | ೦ | ೦ | ೦ |
| ೧೦-೧೪ | ೩೯೮೭ | ೩೯೪೨ | ೩೯೭೫ | ೩೯೧೭ | ೧೧ | ೨೩ | ೧ | ೨ | ೦ | ೦ |
| ೧೫-೧೯ | ೩೯೦೧ | ೪೩೧೨ | ೩೮೮೧ | ೪೦೯೧ | ೨೦ | ೨೧೭ | ೦ | ೪ | ೦ | ೦ |
| ೨೦-೨೪ | ೩೫೯೮ | ೩೭೯೪ | ೩೩೩೭ | ೨೩೭೫ | ೨೫೮ | ೧೪೦೧ | ೨ | ೧೮ | ೧ | ೦ |
| ೨೫-೨೯ | ೩೧೭೩ | ೩೩೩೮ | ೨೦೯೬ | ೯೩೫ | ೧೦೭೧ | ೨೩೪೮ | ೩ | ೪೮ | ೩ | ೭ |
| ೩೦-೩೪ | ೨೩೬೮ | ೨೨೫೯ | ೮೨೮ | ೨೫೦ | ೧೫೩೩ | ೧೯೧೭ | ೫ | ೭೬ | ೨ | ೧೬ |
| ೩೫-೩೯ | ೨೩೭೦ | ೨೬೬೩ | ೩೬೬ | ೧೯೮ | ೧೯೯೨ | ೨೨೯೪ | ೧೦ | ೧೪೪ | ೨ | ೨೭ |
| ೪೦-೪೪ | ೧೮೩೬ | ೧೭೭೧ | ೧೦೭ | ೪೧ | ೧೭೦೮ | ೧೫೩೦ | ೧೫ | ೧೮೩ | ೬ | ೧೭ |
| ೪೫-೪೯ | ೧೮೦೧ | ೧೭೪೧ | ೬೩ | ೨೪ | ೧೭೦೯ | ೧೩೯೮ | ೨೭ | ೩೦೫ | ೨ | ೧೪ |
| ೫೦-೫೪ | ೧೩೪೪ | ೧೩೦೯ | ೩೫ | ೧೪ | ೧೨೪೫ | ೯೦೧ | ೬೨ | ೩೮೯ | ೨ | ೫ |
| ೫೫-೫೯ | ೯೦೭ | ೮೯೬ | ೧೧ | ೭ | ೮೪೯ | ೫೮೧ | ೪೧ | ೩೦೧ | ೬ | ೭ |
| ೬೦-೬೪ | ೮೧೩ | ೯೬೦ | ೨೯ | ೯ | ೭೧೩ | ೪೦೯ | ೬೯ | ೫೩೮ | ೨ | ೪ |
| ೬೫-೬೯ | ೫೩೧ | ೬೭೧ | ೧೮ | ೫ | ೪೪೯ | ೧೯೫ | ೬೧ | ೪೬೮ | ೩ | ೩ |
| ೭೦-೭೪ | ೩೮೨ | ೫೩೨ | ೧೧ | ೫ | ೨೯೮ | ೧೦೪ | ೭೨ | ೪೨೨ | ೧ | ೧ |
| ೭೫-೭೯ | ೧೮೨ | ೨೧೯ | ೧೧ | ೮ | ೧೨೦ | ೩೯ | ೪೯ | ೧೭೨ | ೨ | ೦ |
| ೮೦+ | ೧೬೬ | ೨೨೬ | ೪ | ೫ | ೧೦೩ | ೨೭ | ೫೮ | ೧೯೪ | ೧ | ೦ |
| ವಯಸ್ಸು ತಿಳಿಸದವರು | ೧೧ | ೧೦ | ೯ | ೮ | ೨ | ೨ | ೦ | ೦ | ೦ | ೦ |
| ೧೮ರ ಒಳಗಿನವರು | ೧೨೨೩೫ | ೧೨೧೩೫ | ೧೨೨೧೯ | ೧೨೦೬೧ | ೧೫ | ೬೯ | ೧ | ೫ | ೦ | ೦ |
| ೨೧ರ ಒಳಗಿನವರು | ೧೪೯೮೮ | ೧೪೯೫೩ | ೧೪೯೦೭ | ೧೪೬೪೦ | ೮೦ | ೩೦೪ | ೧ | ೯ | ೦ | ೦ |

*ಆಧಾರ : ಭಾರತೀಯ ಜನಗಣತಿ ೨೦೦೧–ಸಿಡಿ^೧ ರೂಪಾಂತರ*

## ಕೋಷ್ಟಕ ೩.೮: ವಯೋಗುಂಪು ಮತ್ತು ವೈವಾಹಿಕ ಸ್ಥಿತಿ: ಪರಿಶಿಷ್ಟ ಪಂಗಡ

| ವಯೋ ಗುಂಪು | ಒಟ್ಟು ಜನಸಂಖ್ಯೆ | | ಅವಿವಾಹಿತರು | | ವಿವಾಹಿತರು | | ವಿಧುರ | ವಿಧವೆ | ವಿಚ್ಛೇದಿತರು / ಬೇರೆಯಾದವರು | |
|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | | | ಗಂಡು | ಹೆಣ್ಣು |
| ಎಲ್ಲಾ ವಯಸ್ಸಿನವರು | ೨೦೫೭೨ | ೨೧೦೪೧ | ೧೨೧೦೦ | ೧೦೩೮೯ | ೮೧೩೯ | ೮೮೨೨ | ೩೦೭ | ೧೭೪೧ | ೨೬ | ೮೯ |
| ೦–೯ | ೩೮೩೬ | ೩೭೦೭ | ೩೮೩೬ | ೩೭೦೭ | ೦ | ೦ | ೦ | ೦ | ೦ | ೦ |
| ೧೦–೧೪ | ೪೧೭ | ೨೩೦೭ | ೨೪೦೯ | ೨೨೯೧ | ೮ | ೧೫ | ೦ | ೧ | ೦ | ೦ |
| ೧೫–೧೯ | ೨೬೧ | ೨೬೪೨ | ೨೨೫೨ | ೨೪೯೯ | ೯ | ೧೪೩ | ೦ | ೦ | ೦ | ೦ |
| ೨೦–೨೪ | ೨೦೩೭ | ೨೨೩೧ | ೧೮೮೮ | ೧೩೪೪ | ೧೪೮ | ೮೭೫ | ೧ | ೧೧ | ೦ | ೧ |
| ೨೫–೨೯ | ೧೭೯೧ | ೧೯೭೪ | ೧೧೧೫ | ೩೫೭ | ೬೭೨ | ೧೫೭೭ | ೨ | ೨೮ | ೨ | ೧೨ |
| ೩೦–೩೪ | ೧೪೮೨ | ೧೩೮೬ | ೩೭೭ | ೭೯ | ೧೧೦೦ | ೧೨೫೮ | ೩ | ೩೯ | ೨ | ೧೦ |
| ೩೫–೩೯ | ೧೩೯೫ | ೧೫೨೦ | ೧೧೭ | ೪೪ | ೧೨೭೦ | ೧೩೯೫ | ೫ | ೬೪ | ೩ | ೧೭ |
| ೪೦–೪೪ | ೧೧೬೦ | ೧೧೧೨ | ೩೯ | ೧೮ | ೧೦೯೯ | ೯೭೭ | ೧೯ | ೧೦೨ | ೩ | ೧೫ |
| ೪೫–೪೯ | ೧೧೭೯ | ೧೦೭೫ | ೨೯ | ೧೨ | ೧೧೩೨ | ೮೯೩ | ೧೦ | ೧೫೩ | ೮ | ೧೭ |
| ೫೦–೫೪ | ೮೨೨ | ೮೨೭ | ೧೩ | ೬ | ೭೮೧ | ೬೧೪ | ೨೭ | ೨೦೨ | ೧ | ೫ |
| ೫೫–೫೯ | ೬೨೩ | ೬೨೬ | ೪ | ೩ | ೫೯೯ | ೪೪೧ | ೧೮ | ೧೭೪ | ೨ | ೮ |
| ೬೦–೬೪ | ೫೫೭ | ೫೩೮ | ೮ | ೮ | ೫೧೨ | ೨೫೧ | ೩೪ | ೨೭೭ | ೩ | ೨ |
| ೬೫–೬೯ | ೩೮೬ | ೪೩೪ | ೬ | ೫ | ೩೩೪ | ೨೧೦ | ೪೪ | ೨೧೮ | ೨ | ೧ |
| ೭೦–೭೪ | ೩೦೨ | ೩೪೨ | ೩ | ೩ | ೨೩೫ | ೯೮ | ೬೪ | ೨೪೦ | ೦ | ೧ |
| ೭೫–೭೯ | ೧೬೪ | ೧೫೩ | ೨ | ೬ | ೧೧೦ | ೨೭ | ೪೬ | ೧೨೦ | ೦ | ೦ |
| ವಯಸ್ಸು ತಿಳಿಸದವರು | ೨ | ೮ | ೦ | ೫ | ೨ | ೨ | ೦ | ೧ | ೦ | ೦ |
| ೧೮ರ ಒಳಗಿನವರು | ೭೫೬೩ | ೭೫೦೦ | ೭೫೫೨ | ೭೪೩೯ | ೧೧ | ೬೦ | ೦ | ೧ | ೦ | ೦ |
| ೨೧ರ ಒಳಗಿನವರು | ೯೧೦೬ | ೯೩೨೪ | ೯೦೬೬ | ೮೯೯೯ | ೪೦ | ೩೨೨ | ೦ | ೩ | ೦ | ೦ |

*ಆಧಾರ : ಭಾರತೀಯ ಜನಗಣತಿ ೨೦೦೧–ಸಿಡಿ^ ರೂಪಾಂತರ*

ವಿಧವೆಯರಾಗಿದ್ದವರ ಸಂಖ್ಯೆ ೭೮ ಆಗಿದ್ದಿತು. ೮೦ಕ್ಕಿಂತ ಹೆಚ್ಚು ವಯಸ್ಸಾದವರಲ್ಲಿಯೂ ವಿಧವೆಯರ ಸಂಖ್ಯೆ ಹೆಚ್ಚಾಗಿದೆ. ಆದರೆ, ಈ ಗುಂಪಿನವರಲ್ಲಿ ಅವಿವಾಹಿತರಾಗಿ ಉಳಿದ ಸ್ತ್ರೀ–ಪುರುಷರ ಸಂಖ್ಯೆ ಬಹುಮಟ್ಟಿಗೆ ಸಮಾನವಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಲ್ಲಿಯೂ ಇದೇ ಪ್ರವೃತ್ತಿ ಕಂಡುಬಂದಿದೆ. ಜಿಲ್ಲೆಯಲ್ಲಿ ಪುರುಷರಿಗಿಂತ ಸ್ತ್ರೀಯರೇ ಹೆಚ್ಚು ದೀರ್ಘಾಯುಗಳಾಗಿದ್ದರೆಂಬುದೂ ಈ ಪಟ್ಟಿಗಳಿಂದ ತಿಳಿದುಬರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಯೋಗುಂಪು ಮತ್ತು ವೈವಾಹಿಕ ಸ್ಥಿತಿಗೆ ಸಂಬಂಧಿಸಿದ ವಿವಿಧ ಗುಂಪಿನ ಅಂಕಿಅಂಶಗಳನ್ನು ಕೋಷ್ಟಕ ೩.೬, ೩.೭ ಹಾಗೂ ೩.೮ರಲ್ಲಿ ನೀಡಲಾಗಿದೆ.

## ಪರಿಶಿಷ್ಟ ಜಾತಿ

ಉಡುಪಿ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ದಾಖಲಾದ ಪರಿಶಿಷ್ಟ ಜಾತಿಯವರ ಜನಸಂಖ್ಯೆ ೬೭,೬೮೯. ಇದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೬.೧ ಆಗುತ್ತದೆ. ಇದು ದಕ್ಷಿಣ ಕನ್ನಡ ಜಿಲ್ಲೆ (ಶೇ.೬.೯) ಗಿಂತಲೂ ತುಸು ಕಡಿಮೆಯೇ ಆಗಿದೆ. ಹಾಗೂ ರಾಜ್ಯದ ಶೇಕಡಾ ಅಂಶಕ್ಕಿಂತ (೧೬.೨) ತೀರಾ ಕಡಿಮೆಯಾಗಿದೆ. ಹಾಗೆಯೇ, ಜಿಲ್ಲೆಯ ನಗರಪ್ರದೇಶಕ್ಕಿಂತ (೧೧,೨೭೯) ಗ್ರಾಮೀಣ ಪ್ರದೇಶದಲ್ಲಿ (೫೬,೪೧೦) ಪರಿಶಿಷ್ಟ ಜಾತಿಯವರ ಸಂಖ್ಯೆ ಹೆಚ್ಚಾಗಿದೆ. ಸ್ತ್ರೀ ಪುರುಷರ ಪ್ರಮಾಣದ ಬಗ್ಗೆ ಪರಿಶೀಲಿಸಿದಾಗ, ಪುರುಷರಿಗಿಂತ (೩೩,೩೪೫) ಸ್ತ್ರೀಯರ ಸಂಖ್ಯೆ (೩೪,೩೪೪) ಹೆಚ್ಚು ಇದ್ದದ್ದು ದಾಖಲಾಗಿದೆ (೧,೦೪೩). ಉಡುಪಿ ತಾಲೂಕಿನಲ್ಲಿ ಜಿಲ್ಲೆಯ ಉಳಿದೆರಡೂ ತಾಲೂಕುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರಿದ್ದಾರೆ.

**ಕೋಷ್ಟಕ ೩.೯: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನಸಂಖ್ಯೆ**

| ಘಟಕ | | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | |
|---|---|---|---|---|---|---|---|
| | ಲಿಂಗ | ಒಟ್ಟು | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ |
| ಒಟ್ಟು ಕುಟುಂಬಗಳು | | ೧೨,೯೭೦ | ೧೦,೮೮೧ | ೨,೦೮೯ | ೮೨೫೬ | ೭೦೬೪ | ೧೧೯೨ |
| ಜನಸಂಖ್ಯೆ | ಒಟ್ಟು<br>ಪುರುಷರು<br>ಸ್ತ್ರೀಯರು | ೬೭,೬೮೯<br>೩೩,೩೪೫<br>೩೪,೩೪೪ | ೫೬,೪೧೦<br>೨೭,೭೫೯<br>೨೮,೬೫೧ | ೧೧,೨೭೯<br>೫,೫೮೬<br>೫,೬೯೩ | ೪೧೬೧೩<br>೨೦೫೭೨<br>೨೧,೦೪೧ | ೩೫೮೬೨<br>೧೭,೭೫೭<br>೧೮,೧೦೫ | ೫೭೫೧<br>೨೮೧೫<br>೨೯೩೬ |
| ೦–೬ ವಯೋಗುಂಪಿನವರು | ಒಟ್ಟು<br>ಪುರುಷರು<br>ಸ್ತ್ರೀಯರು | ೭,೮೮೪<br>೩,೯೬೧<br>೩,೯೨೩ | ೬,೭೮೦<br>೩,೪೨೧<br>೩,೩೫೯ | ೧,೧೦೪<br>೫,೪೦<br>೫೬೪ | ೫೧೧೬<br>೨೬೧೭<br>೨೪೯೯ | ೪೪೯೩<br>೨೩೦೩<br>೨೧೯೦ | ೬೨೩<br>೩೧೪<br>೩೦೯ |
| ಅಕ್ಷರಸ್ಥರು | ಒಟ್ಟು<br>ಪುರುಷರು<br>ಸ್ತ್ರೀಯರು | ೪೧,೯೪೨<br>೨೨,೮೩೬<br>೧೯,೧೦೬ | ೩೩,೮೯೭<br>೧೮,೪೮೦<br>೧೫,೪೧೭ | ೮,೦೪೫<br>೪,೩೫೬<br>೩,೬೮೯ | ೨೫೪೧೧<br>೧೩೭೭೧<br>೧೧೬೪೦ | ೨೧೩೪೬<br>೧೧೬೪೪<br>೯೭೦೨ | ೪೦೬೫<br>೨೧೨೭<br>೧೯೩೮ |

*ಆಧಾರ : ಭಾರತೀಯ ಜನಗಣತಿ ವರದಿ ೨೦೦೧ – ಪುಟ ೩೦೩–೪೫೧*

## ಪರಿಶಿಷ್ಟ ಪಂಗಡ

ಭಾರತೀಯ ಸಂವಿಧಾನದ ೩೪೨ನೇ ವಿಧಿಯಂತೆ ಪಟ್ಟಿ ಮಾಡಲಾದ ಜಾತಿ, ಉಪಜಾತಿ ಹಾಗೂ ಬುಡಕಟ್ಟುಗಳನ್ನು ಪರಿಶಿಷ್ಟವರ್ಗ/ಪಂಗಡ ಎಂದು ಕರೆಯಲಾಗಿದೆ. ೨೦೦೧ರ ಜನಗಣತಿಯಂತೆ ಉಡುಪಿ ಜಿಲ್ಲೆಯಲ್ಲಿ ೪೧,೬೧೩ ಜನ ಪರಿಶಿಷ್ಟ ವರ್ಗದವರಿದ್ದರು. ಜಿಲ್ಲೆಯ ಜನಸಂಖ್ಯೆಗೆ ಹೋಲಿಸಿದರೆ ಇವರ ಶೇಕಡಾ ಪ್ರಮಾಣ ಕೇವಲ ೩.೭ ಆಗಿದ್ದು ಇದು ರಾಜ್ಯದ ಪ್ರಮಾಣಕ್ಕಿಂತ (ಶೇ.೬.೬) ಕಡಿಮೆ ಇದ್ದಿತು. ಸ್ತ್ರೀ–ಪುರುಷರ ಸಂಖ್ಯೆಯನ್ನು ಪರಿಶೀಲಿಸಿದಾಗ ಗ್ರಾಮಾಂತರ ಪ್ರದೇಶದಲ್ಲಿ (೩೫,೮೬೨)

ನಗರಪ್ರದೇಶಕ್ಕಿಂತ (೫,೭೫೧) ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಇದ್ದಿತು. ಹಾಗೆಯೇ, ತಾಲೂಕುವಾರು ಜನಸಂಖ್ಯೆಯನ್ನು ಹೋಲಿಸಿ ನೋಡಿದಾಗ, ಉಡುಪಿ ತಾಲೂಕಿನಲ್ಲಿ (೨೦,೧೧೭) ಇವರು ಹೆಚ್ಚಿನ ಸಂಖ್ಯೆಯಲ್ಲಿದ್ದುದು ದಾಖಲಾಗಿದೆ. ಹಾಗೆಯೇ, ಸ್ತ್ರೀಯರ ಪ್ರಮಾಣ ಹೆಚ್ಚಾಗಿರುವುದೂ ದಾಖಲಾಗಿದೆ. ಹೆಚ್ಚಿನ ಮಾಹಿತಿಗಾಗಿ ೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಇದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಜನಸಂಖ್ಯೆ ಹಾಗೂ ಸ್ತ್ರೀ ಪುರುಷರ ಸಂಖ್ಯೆಯನ್ನು ಮುಂದಿನ ಕೋಷ್ಟಕ ೩.೯ದಲ್ಲಿ ನೀಡಲಾಗಿದೆ:

## ಸಾಕ್ಷರತೆ

ಜನಗಣತಿಯ ಪ್ರಕಾರ ಯಾವುದೇ ಭಾಷೆಯಲ್ಲಿ ಓದಲು ಮತ್ತು ಬರೆಯಲು ಸಮರ್ಥನಾದ ವ್ಯಕ್ತಿಯನ್ನು ಅಕ್ಷರಸ್ಥನೆಂದು ದಾಖಲಿಸಲಾಗುತ್ತದೆ. ಇದಕ್ಕೆ ಯಾವುದೇ ಶೈಕ್ಷಣಿಕ ಅರ್ಹತೆಯನ್ನು ನಿಗದಿಪಡಿಸಿರುವುದಿಲ್ಲ ಹಾಗೂ ಆರು ವರ್ಷದ ಒಳಗಿರುವ ಮಕ್ಕಳನ್ನು ಅನಕ್ಷರಸ್ಥರೆಂದು ಪರಿಗಣಿಸಲಾಗುತ್ತದೆ. ಉಡುಪಿ ಜಿಲ್ಲೆಯ ಸಾಕ್ಷರತೆಯು ೨೦೦೧ರ ಜನಗಣತಿಯಂತೆ ಶೇ.೮೨.೫ ಇದ್ದು, ಅವರಲ್ಲಿ ಪುರುಷರ ಸಂಖ್ಯೆ ೪,೦೯,೧೩೫ ಮತ್ತು ಸ್ತ್ರೀಯರ ಸಂಖ್ಯೆ ೪,೦೧,೪೪೯ ಆಗಿದೆ. ಇದು ರಾಜ್ಯದ ಪ್ರಮಾಣಕ್ಕಿಂತ (ಶೇ.೮೧.೨) ಹೆಚ್ಚಾಗಿದೆ (ಹೆಚ್ಚಿನ ವಿವರಕ್ಕೆ 'ಶಿಕ್ಷಣ' ಅಧ್ಯಾಯ ನೋಡಿರಿ).

## ಸಾಮಾಜಿಕ, ಧಾರ್ಮಿಕ ಜೀವನ

ದಕ್ಷಿಣ ಕನ್ನಡ ಜಿಲ್ಲೆಯಂತೆ ಉಡುಪಿ ಜಿಲ್ಲೆಯಲ್ಲಿಯೂ ಸಹಜವಾಗಿಯೇ ಬಹು ಧರ್ಮೀಯ ಒಡನಾಟದ ವಿಪುಲ ನಿದರ್ಶನಗಳು ಕಾಣಬರುತ್ತವೆ. ಇಲ್ಲಿನ ನೆಲ ಮೂಲದವರ ರೂಢಿಗಳಾಗಿ ನಾಗಾರಾಧನೆ, ಭೂತಾರಾಧನೆ ಮೊದಲಾದುವುಗಳಿವೆ. ಮುಂದೆ, ವ್ಯಾಪಾರ ವಹಿವಾಟಿಗಾಗಿ ಬಂದ ಮುಸ್ಲಿಮರು ಇಲ್ಲಿ ನೆಲೆ ನಿಂತ ಪರಿಣಾಮವಾಗಿ ಬ್ಯಾರಿ ಸಮಾಜ ರೂಪುಗೊಂಡಿತು. ಹೊರದೇಶಗಳಿಂದ ಬಂದ ಮಿಷನರಿಗಳು ಹಾಗೂ ಗೋವಾದಿಂದ ಬಂದ ಕೊಂಕಣಿ ಕ್ರೈಸ್ತರು ಇಲ್ಲಿನ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಸಾಧನೆಗಳನ್ನು ಮಾಡಿದರು. ಉತ್ತರದ ಅಹಿಚ್ಛತ್ರದಿಂದಲೋ ಮಹಾರಾಷ್ಟ್ರದ ರತ್ನಗಿರಿ ಭಾಗದಿಂದಲೋ ಬಂದ ಹವೀಕ, ಗೌಡಸಾರಸ್ವತ, ಚಿತ್ಪಾವನ ಮೊದಲಾದ ಸಮುದಾಯಗಳು ಇಲ್ಲಿನ ಸಾಂಸ್ಕೃತಿಕ ವೈವಿಧ್ಯಕ್ಕೆ ಕಾರಣರಾಗಿದ್ದಾರೆ. ಕೆಳದಿ, ವಿಜಯನಗರ ಮೊದಲಾದೆಡೆಯಿಂದ ಸೈನಿಕರಾಗಿಯೋ, ಕೃಷಿಕರಾಗಿಯೋ ಬಂದ ವಿವಿಧ ಸಮುದಾಯಗಳು ಕ್ರಮೇಣ ಇಲ್ಲಿನ ನೆಲದ ಮಕ್ಕಳೇ ಆಗಿ ಬಾಳುವ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಅನನ್ಯತೆಗಳಿಗೆ ಕಾರಣರಾಗಿದ್ದಾರೆ. ಸಮಾಜ ಸುಧಾರಕರು, ಮತ ತತ್ವ ಬೋಧಕರೂ ಇಲ್ಲಿನ ಅಸಂಖ್ಯಾತ ಜನಸಮೂಹವನ್ನು ಪ್ರಭಾವಿಸಿದ್ದಾರೆ. ಉಡುಪಿ ಜಿಲ್ಲೆಯ, ಒಟ್ಟಾರೆ ತುಳುನಾಡಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಬದುಕನ್ನು ಅವಲೋಕಿಸುವಾಗ ಈ ಎಲ್ಲಾ ಆಂತರಿಕ-ಬಾಹ್ಯ ಸಂಬಂಧಗಳನ್ನು ಸ್ಮರಣೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ಸಮಾಜೋ ಸಾಂಸ್ಕೃತಿಕ ಲಕ್ಷಣಗಳ ಕಿರುಪರಿಚಯಕ್ಕಾಗಿ, ಇಲ್ಲಿನ ವಿವಿಧ ಸಮುದಾಯದವರ ಸಾಮಾಜಿಕ ವ್ಯವಸ್ಥೆ, ಹುಟ್ಟಿನಿಂದ ಸಾವಿನವರೆಗೆ ಅನುಸರಿಸುವ ಆಚಾರ-ಸಂಪ್ರದಾಯಗಳು, ಹಬ್ಬ-ದೇವರು, ಜಾತಿ, ಧರ್ಮಗಳು ಇತ್ಯಾದಿಗಳ ಕಿರುಪರಿಚಯವನ್ನು ಈ ಮುಂದೆ ನೀಡಲಾಗಿದೆ.

## ಕುಟುಂಬ ವ್ಯವಸ್ಥೆ, ಬಾಂಧವ್ಯ

ತುಳುನಾಡಿನಲ್ಲಿ ಮಾತೃ ಪ್ರಧಾನ ಕುಟುಂಬ ಪದ್ಧತಿ ವಿಶೇಷವಾಗಿದ್ದರೂ, ಕೆಲವರಲ್ಲಿ ಪುರುಷ ಪ್ರಧಾನ ಕುಟುಂಬ ಪದ್ಧತಿ ಇದೆ. ಆದರೆ ಕುಡುಬಿಯರಲ್ಲಿ ಅವೆಲ್ಲಕ್ಕೆ ಭಿನ್ನವಾದ ಆಚಾರ ವಿಚಾರಗಳಿರುವುದಕ್ಕೆ ಅವರ ಕೌಟುಂಬಿಕ ಹಾಗೂ ವೈವಾಹಿಕ ಪದ್ಧತಿಯಲ್ಲಿನ ಕೆಲವು ಶಾಸ್ತ್ರ-ಸಂಪ್ರದಾಯಗಳು ಸಾಕ್ಷ್ಯಗಳಾಗುತ್ತವೆ. ಅಳಿಯಕಟ್ಟು ಪದ್ಧತಿಯಲ್ಲಿ ಮಹಿಳೆಗೆ ತನ್ನ ತವರು ಮನೆಯ ಆಸ್ತಿ ಮೇಲೆ ಸಾಂಪ್ರದಾಯಿಕವಾದ ಹಕ್ಕು ಇರುತ್ತದೆ. ಆಕೆ ಬೇಕೆಂದಾಗ ಗಂಡನ ಮನೆಯಿಂದ ತವರಿಗೆ ಹೋಗಿ ಇರುವುದೂ ಮಾನ್ಯವಾಗಿರುತ್ತದೆ.

ಆದರೆ, ಕುಡುಬಿಗಳಲ್ಲಿ ಇದಕ್ಕಿಂತಾ ತೀರ ವಿಭಿನ್ನವಾದ ಕಟ್ಟುಪಾಡುಗಳಿರುವುದು ಉಲ್ಲೇಖನೀಯವಾಗಿದೆ. ಅವರಲ್ಲಿ ಹೆಣ್ಣು ವಿವಾಹದ ಪರಿಣಾಮವಾಗಿ ತನ್ನ ತವರಿನ ಸಂಬಂಧವನ್ನೇ ಕಳೆದುಕೊಳ್ಳಬೇಕಾಗುತ್ತದೆ. ವಿವಾಹಕ್ಕಾಗಿ ವರನ ಮನೆಗೆ ಆಕೆ ಹೊರಡುವಾಗ ಬಾಗಿಲಲ್ಲಿ ನಡೆಯುವ ಸಾಂಪ್ರದಾಯಿಕ ಕ್ರಿಯೆಗಳು ಆಕೆ ಮತ್ತು ತವರಿನ ಸಂಬಂಧವನ್ನು ತುಂಡರಿಸುವ ಸಾಂಕೇತಿಕ ವಿಧಿಗಳಾಗಿವೆ. ಹೊಸತಿಲ ಮೇಲಿನ ದೀಪವನ್ನು ಆಕೆ ಆರಿಸಿ, ಹೊಸತಿಲು ದಾಟಿದ ಬಳಿಕ ಮತ್ತೆಂದೂ ಆಕೆ ತವರಿನಲ್ಲಿ ದೀಪ ಹಚ್ಚುವಂತಿಲ್ಲ. ಇತರರಲ್ಲಿ ಚೊಚ್ಚಿಲ ಹೆರಿಗೆ ತವರಿನಲ್ಲಿ ಆಗುವುದು ನಡವಳಿಕೆಯಾದರೂ ಕುಡುಬಿ ಮಹಿಳೆಗೆ ಅದು ನಿಷಿದ್ಧ. ತವರಿನ ಯಾವ ಸೂತಕವೂ ಆಕೆಗೆ ತಟ್ಟುವುದಿಲ್ಲ. ಶವ ಸಂಸ್ಕಾರಾದಿಗಳ ಸಂದರ್ಭದಲ್ಲಿ ಒಂದು ವೇಳೆ ಆಕೆ ತವರಿನಲ್ಲಿದ್ದರೂ ತಕ್ಷಣ ಗಂಡನ ಮನೆಗೆ ಹಿಂದಿರುಗಬೇಕೆಂಬ ನಿಯಮವಿದೆ. ಸೋದರಿಕೆಯಲ್ಲಿ ವಿವಾಹ ಸಂಬಂಧ ಮಾಡಿಕೊಳ್ಳುವುದು ಹಿಂದೆ ಸಾಮಾನ್ಯವಾಗಿ ಇದ್ದ ಪದ್ಧತಿ. ಕುಡುಬಿಯರಲ್ಲಿ ಸೋದರಿಕೆಯಲ್ಲಿಯೇ ಸಂಬಂಧ ಮಾಡುವಾಗ ಮಾತ್ರ ಹೆಣ್ಣು ಕೇಳಲು ಹುಡುಗನ ತಾಯಿಯೂ ಹೋಗುತ್ತಿದ್ದುದು ಪದ್ಧತಿಯಾಗಿತ್ತು. ವಿವಾಹದಂದು ವಧುವಿನ ತಾಯಿಯು ತನ್ನ ಮಗಳ ಮದುವೆಗೆ ಹೋಗುವುದು, ಆಕೆಯ ತಾಯಿ, ತಂದೆಯರು ಸ್ವತ: ಮಗಳನ್ನು ಧಾರೆ ಎರೆದುಕೊಡುವುದು ಇವರಲ್ಲಿ ರೂಢಿಯಲ್ಲಿಲ್ಲ.

**ಅಳಿಯಸಂತಾನ ಪದ್ಧತಿ:** ತುಳುನಾಡಿನ ಹಲವು ವೈಶಿಷ್ಟ್ಯಗಳಲ್ಲಿ ಅಳಿಯಕಟ್ಟು ಅಥವಾ ಮಾತೃ ಪ್ರಧಾನ ಪದ್ಧತಿಯೂ ಒಂದಾಗಿದೆ. ಸ್ಥಳೀಯವಾಗಿ ಈ ಪದ್ಧತಿಯನ್ನು ಮೂಲಿಯ ಪದ್ಧತಿಯೆಂದೂ ಕರೆಯಲಾಗುತ್ತದೆ. ಕರ್ನಾಟಕದಲ್ಲಿ ಮಕ್ಕಳ ಸಂತಾನಕಟ್ಟು ಪದ್ಧತಿಯೇ ವ್ಯಾಪಕವಾಗಿದ್ದರೂ, ಕರಾವಳಿಯು ಇದಕ್ಕೆ ಅಪವಾದವಾಗಿರುವುದು ಇಲ್ಲಿನ ವಿಶೇಷವಾಗಿದೆ. ಇಲ್ಲಿನ ಗೌಡ, ವಿಶ್ವಕರ್ಮ, ಬ್ರಾಹ್ಮಣ, ಮ್ಯಾಲ ಮೊದಲಾದ ಕೆಲವು ಜಾತಿಗಳನ್ನು ಹೊರತುಪಡಿಸಿ ಉಳಿದಂತೆ ಜೈನ, ಬಂಟ, ನಾಡವ, ಬಿಲ್ಲವ, ಮೊಗೇರ, ಅಗಸ, ಮೊಯ್ಲಿ, ಕುಲಾಲ, ಸಪಲ್ಯ ಮೊದಲಾದವರು ಅಂದರೆ ಇಲ್ಲಿನ ಶೇಕಡಾ ಸುಮಾರು ೭೫ಕ್ಕಿಂತಲೂ ಹೆಚ್ಚಿನ ಸಮುದಾಯಗಳು ಈ ಸ್ತ್ರೀ ಪ್ರಾಧಾನ್ಯದ ಕುಟುಂಬ ಪದ್ಧತಿಯನ್ನು ಒಪ್ಪಿಕೊಂಡಿದ್ದವು. ಕಾನೂನಿನಲ್ಲಿ ಮಾನ್ಯವೂ ಆಗಿದ್ದ ಈ ವ್ಯವಸ್ಥೆಯಲ್ಲಿ ಮನೆತನದ ಎಲ್ಲಾ ಆಸ್ತಿ-ಪಾಸ್ತಿ, ಹಕ್ಕು-ಬಾಧ್ಯತೆಗಳು ತಂದೆಯಿಂದ ಮಗನಿಗೆ ಹೋಗುವ ಬದಲು ತಾಯಿಯಿಂದ ಮಗಳಿಗೆ (ಆ ಮೂಲಕ ಅಳಿಯಂದಿರಿಗೆ) ಹಸ್ತಾಂತರವಾಗುತ್ತವೆ. ಇಲ್ಲಿ ಗಂಡುಮಕ್ಕಳು ತಾವು ಜೀವಂತ ಇರುವವರೆಗೆ ಮಾತ್ರ ಅವರು ಆ ಮನೆತನದ ಆಸ್ತಿಯನ್ನು ಅನುಭವಿಸಬಹುದು. ಬಳಿಕ ಆ ಭೂಮಿ-ಕಾಣಿಗಳು ಆತನ ಮಕ್ಕಳಿಗೆ ಹೋಗುವ ಬದಲು ಆತನ ಸಹೋದರಿಯ ಅಥವಾ ಆ ಸಹೋದರಿಯ ಮಕ್ಕಳ ಹಕ್ಕುದಾರಿಕೆಗೆ ಒಳಪಡುತ್ತವೆ. ಗಮನಿಸಬೇಕಾದುದೆಂದರೆ ಗಂಡನ ನಿಧನಾನಂತರ ಆತನ ಪತ್ನಿಗೂ ಆ ಆಸ್ತಿಯನ್ನು ಅನುಭವಿಸುವ ಅಧಿಕಾರವಿರುವುದಿಲ್ಲ. ಬದಲಿಗೆ, ಆಕೆ ಮಕ್ಕಳೊಂದಿಗೆ ತನ್ನ ತವರಿಗೇ ಹೋಗಬೇಕು. ಅಲ್ಲಿ ತೌರು ಮನೆಯ ಆಸ್ತಿ ಅನುಭವಿಸುವ ಹಕ್ಕು ಆಕೆಗೂ, ಅವಳ ಮಕ್ಕಳಿಗೂ ಲಭ್ಯವಾಗುತ್ತದೆ. ಇಲ್ಲಿ ಆಸ್ತಿಯ ವಿಷಯದಲ್ಲಿ ಸ್ತ್ರೀ ಸ್ವತಂತ್ರಳು ಅರ್ಥಾತ್ ಪುರುಷನಿಗೆ ಸಮಾನಳು. ವಿವಾಹದ ಬಳಿಕ ಆಕೆ ಬೇಕಾದಾಗ ಗಂಡನ ಮನೆಯಿಂದ ತನ್ನ ತೌರಿಗೆ ಹೋಗಿ ಇರುವ ಹಕ್ಕೂ ಆಕೆಗಿದೆ. ಪುರುಷನು ತನ್ನ ಸ್ವಯಾರ್ಜಿತ ಆಸ್ತಿಯನ್ನು ಆತನ ಹೆಂಡತಿ-ಮಕ್ಕಳಿಗೆ ಉಯಿಲು ಮೂಲಕ ಕೊಡಬಹುದು. ಹಾಗೆ ಉಯಿಲು ಮಾಡದಿದ್ದಲ್ಲಿ ಆ ಆಸ್ತಿಯು ಆತನ ಸಹೋದರಿಯರ ಮಕ್ಕಳಿಗೇ ಹೋಗುತ್ತದೆ.

ಅಳಿಯ ಸಂತಾನ ಪದ್ಧತಿಗೆ ಸಂಬಂಧಿಸಿದ ಸಾಹಿತ್ಯ ಮೊದಲ ಬಾರಿಗೆ ೧೮೪೩ರಲ್ಲಿ ಮದರಾಸು ಹೈಕೋರ್ಟಿನಲ್ಲಿ ದಾಖಲಾದ ಒಂದು ವ್ಯವಹರಣೆಯಲ್ಲಿ ಪ್ರಕಾಶಕ್ಕೆ ಬಂತು. ಇದರಲ್ಲಿ ಈ ಪದ್ಧತಿಯವರು ಅನುಸರಿಸಬೇಕಾದ ೧೪ ಕಟ್ಟುಗಳೂ, ೧೬ ಕಟ್ಟಳೆಗಳೂ ಅಡಕವಾಗಿವೆ. ಭೂತಾಳ ಪಾಂಡ್ಯ ಅರಸನ ಬಗೆಗಿನ ಐತಿಹ್ಯದ ಪ್ರಕಾರ ಈ ಪದ್ಧತಿ ಕ್ರಿ.ಶ.ಸು.೭೭ರಲ್ಲಿ ಜಾರಿಗೆ ಬಂದಿತು (ಆದರೆ, ಈ ಅರಸನ ಬಗೆಗೆ ಐತಿಹಾಸಿಕ ದಾಖಲೆಗಳಿಲ್ಲ). ಮಂಜೇಶ್ವರ ಗೋವಿಂದಪೈ ಅವರ ಪ್ರಕಾರ ಇದು ಕ್ರಿಸ್ತಪೂರ್ವದಷ್ಟು ಪ್ರಾಚೀನವಾದ ಸಂಪ್ರದಾಯ. ಬಿ.ಎ.ಸಾಲೆತ್ತೂರರ ಪ್ರಕಾರ ೧೨ನೇ ಶತಮಾನಕ್ಕೆ ಮೊದಲೇ ಈ ಆಚರಣೆ

ಈ ಪ್ರಾಂತದಲ್ಲಿ ವ್ಯಾಪಿಸಿತ್ತು. ಇನ್ನೊಂದು ಅಭಿಪ್ರಾಯದ ಪ್ರಕಾರ ೧೩ನೆಯ ಶತಮಾನದ ಮಧ್ಯಭಾಗದವರೆಗೆ ಹೆಣ್ಣು ಮೂಲಪದ್ಧತಿ ಈ ನಾಡಿನಲ್ಲಿ ಅನುಷ್ಠಾನದಲ್ಲಿದ್ದ ಬಗ್ಗೆ ಆಧಾರಗಳಿಲ್ಲ. ಆನಂತರ ಇಲ್ಲಿ ಆಳಿದ ಕೆಲವು ಜೈನ ರಾಜಮನೆಗಳು ಇವನ್ನು ಅನುಸರಿಸುತ್ತಿದ್ದರಾಗಿ ಇತರರಲ್ಲೂ ಇದು ಬಳಕೆಗೆ ಬಂದಿರಬಹುದು. ೧೫ನೇ ಶತಮಾನದಲ್ಲಿ ೧೬ ಕಟ್ಟಳೆಗಳು ಪ್ರಚಾರದಲ್ಲಿದ್ದುದಕ್ಕೆ ಕಾರ್ಕಳ ತಾಲೂಕಿನ ಕಾಂತಾವರದ ಶಾಸನದಲ್ಲಿ ಸಾಕ್ಷ್ಯವಿದೆ (ಕನ್ನಡ ವಿಷಯ ವಿಶ್ವಕೋಶ, ಪು.೩೭). ಕೇರಳದಲ್ಲಿನ ಮರುಮಕ್ಕತಾಯಮ್ ಪದ್ಧತಿಯಲ್ಲಿ ಸ್ತ್ರೀಯೇ ಕುಟುಂಬದ ಒಡತಿಯಾಗಿದ್ದರೆ, ಅಳಿಯಕಟ್ಟುನಲ್ಲಿ ಸ್ತ್ರೀಯ ಹಿರಿಯ ಅಣ್ಣ ಕುಟುಂಬದ ಯಜಮಾನನಾಗಿರುತ್ತಾನೆ ಮತ್ತು ಆಸ್ತಿ ಈತನ ಸೋದರಿಯ ಮಕ್ಕಳಿಗೆ ಸೇರುತ್ತದೆ. ಆದಾಗ್ಯೂ, ಅವಿಭಕ್ತ ಕುಟುಂಬ ಪದ್ಧತಿಯಿಂದಾಗಿ, ವಯಸ್ಸಿಗೆ ಬಂದ ಎಲ್ಲಾ ವ್ಯಕ್ತಿಗಳ ಒಪ್ಪಿಗೆಯಿಂದ ಮಾತ್ರ ಆಸ್ತಿ ವಿಭಜನೆಯಾಗಬೇಕಿದ್ದಿತು. ಒಟ್ಟಾರೆ, ಈ ಸಾಂಪ್ರದಾಯಿಕ ಪದ್ಧತಿ ಕಾನೂನಿನಂತೆಯೇ ಬಳಕೆಯಾಗುತ್ತಿತ್ತು. ಆದರೆ, ಸ್ವಾತಂತ್ರ್ಯಾನಂತರ (೧೯೪೯ರಲ್ಲಿ) ಈ ಕಾನೂನಿನಲ್ಲಿ ಬದಲಾವಣೆಗಳಾದವು. ೧೯೫೬ರಲ್ಲಿ ಅಳಿಯಸಂತಾನದ ಉತ್ತರಾಧಿಕಾರತ್ವ ಸಂಪೂರ್ಣವಾಗಿ ರದ್ದಾಯಿತು. ಹೀಗೆ ಕಾನೂನು ಪ್ರಕಾರ ಅಳಿಯಕಟ್ಟು ಇಲ್ಲವಾದರೂ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ನೆಲೆಯ ಸಂಪ್ರದಾಯ, ನಡವಳಿಕೆಗಳಲ್ಲಿ ಈಗಲೂ ತುಳುನಾಡಿನ ಎಷ್ಟೋ ಸಮುದಾಯಗಳು ಈ ಪರಂಪರೆಯನ್ನು ಇನ್ನೂ ಅನುಸರಿಸುತ್ತಾ ಬಂದಿವೆ. ಅಳಿಯಕಟ್ಟು ಪದ್ಧತಿಯಲ್ಲಿ ಹುಟ್ಟು, ಸಾವಿನ ಸೂತಕಗಳು ಗಂಡ, ಹೆಂಡತಿಗೆ ಸಮಾನವಾಗಿ ಅನ್ವಯವಾಗುವುದಿಲ್ಲ. ಅಂದರೆ, ಹೆಂಡತಿಯ ತವರುಮನೆಯಲ್ಲಿ ಆಗುವ ಸೂತಕ ಆಕೆ ಮತ್ತು ಆಕೆಯ ಮಕ್ಕಳಿಗೆ ಅನ್ವಯವಾಗುತ್ತದೆ; ಗಂಡನಿಗೆ ಅಲ್ಲ. ಹಾಗೆಯೇ, ಗಂಡನ ಮನೆಯಲ್ಲಿ ಸೂತಕ ಬಂದಾಗ ಅದು ಆತನ ಹೆಂಡತಿ, ಮಕ್ಕಳಿಗೆ ಅನ್ವಯವಾಗುವುದಿಲ್ಲ.

**ಬಳಿ:** ತುಳುನಾಡಿನಲ್ಲಿ ವೈವಾಹಿಕ ಸಂಬಂಧಗಳನ್ನು 'ಗೋತ್ರ' ಕ್ಕೆ ಸಮಾನ ಅರ್ಥದ ಪದವಾದ ಬಳಿಯ (ತುಳುವಿನಲ್ಲಿ ಬರಿ) ಆಧಾರದ ಮೇಲೆ ನಿರ್ಧರಿಸುವ ರೂಢಿ ಇದೆ. ಪಿತೃಮೂಲ ಪದ್ಧತಿಯಲ್ಲಿ ಸಗೋತ್ರ ವಿವಾಹ ನಿಷೇಧವಿದ್ದಂತೆ ಇಲ್ಲಿಯೂ ಒಂದೇ ಬಳಿಯಲ್ಲಿ ವಿವಾಹ ಆಗುವಂತಿಲ್ಲ ಎಂಬ ನಿಷೇಧವಿದೆ. ಆದರೆ, ಅಳಿಯ ಸಂತಾನ ಪದ್ಧತಿಯ ಕಟ್ಟಳೆಯಂತೆ ಬಳಿಗಳು ಮಾತೃಪ್ರಧಾನವಾಗಿದ್ದು, ತಾಯಿಯ ಮೂಲಕ ಬಳಿಯ ನಿರ್ಧಾರವಾಗುತ್ತದೆ. ಅಂದರೆ, ತಾಯಿಯ ಬಳಿಗೇ ಮಕ್ಕಳೂ ಸೇರುತ್ತಾರೆ. ಆದ್ದರಿಂದ ಗಂಡು–ಹೆಣ್ಣು ಒಂದೇ ಬಳಿಯವರಾದರೆ ಅವರನ್ನು ಪರಸ್ಪರ ಸೋದರ–ಸೋದರಿ ಅರ್ಥಾತ್ ಒಂದೇ ಕುಟುಂಬದವರು ಎಂದು ಪರಿಗಣಿಸಲಾಗುತ್ತದೆ.

**ಜಾತಿಯ ಒಳಾಡಳಿತ ಪದ್ಧತಿ:** ಸ್ವಾತಂತ್ರ್ಯ ಪೂರ್ವದಲ್ಲಿ ಎಲ್ಲಾ ಜಾತಿ ಸಮುದಾಯಗಳೂ ತಮ್ಮವೇ ಆದ ಒಳಾಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದು, ಅದಕ್ಕೆ ಬದ್ಧವಾಗಿಯೇ ನಡೆಯುತ್ತಿದ್ದವು. ಅದರಲ್ಲಿ ಕುಲದ ಮುಖ್ಯಸ್ಥ (ಊರಿನ ಗುರಿಕಾರ ಅಥವಾ ಗುತ್ತಿನವ) ಆ ಸಮುದಾಯದ ಯಜಮಾನನೂ ಆಗಿದ್ದು, ಅವನು ಬಹುಮಟ್ಟಿಗೆ ಅವರ ಎಲ್ಲಾ ಧಾರ್ಮಿಕ, ಸಾಮಾಜಿಕ ನಡವಳಿಕೆಗಳ ಆಡಳಿತಾತ್ಮಕ ಹೊಣೆ ಹೊತ್ತಿರುತ್ತಿದ್ದನು. ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಈ ಹುದ್ದೆ ಬರುತ್ತಿದ್ದು, ಆತನ ಮಾತೇ ಅಂತಿಮವಾಗಿರುತ್ತಿದ್ದಿತು. ಆಡಳಿತದಲ್ಲಿ ಈತನಿಗೆ ನೆರವಾಗಲು ಬೇರೆ ಹುದ್ದೆಯವರೂ ಇರುತ್ತಿದ್ದರು. ಕುಡುಬಿಯರಲ್ಲಿ ಜಾತಿಪಂಚಾಯಿತಿಗೆ ವೋಡೋ (ಕೂಡುಕಟ್ಟು) ಎಂಬ, ಕುಲದ ಮುಖ್ಯನಿಗೆ ಬುದ್ದೂಂತ್‌ಗಾರ್ ಎಂಬ ಹೆಸರುಗಳಿವೆ. ರಾಯ್‌ಬರಿ ಮತ್ತು ಗಾಡ್ಯರು ಆತನ ಸಹಾಯಕ್ಕಿರುತ್ತಾರೆ. ರಾಣೆಯರಲ್ಲಿ ನಿಗದಿತ ಹಣ ನೀಡಿ ಜಾತಿಕೂಟದ ಸದಸ್ಯನಾಗುವ ಅವಕಾಶ ಈ ವ್ಯಕ್ತಿಗಳಿಗಿದೆ. ಇವರಲ್ಲಿ ಜಾತಿಯ ಮುಖ್ಯಸ್ಥನಿಗೆ ಜಾತಿಗೌಡ ಅಥವಾ ಗುರಿಕಾರನೆಂಬ ಹೆಸರಿದೆ. ಈತನ ಮಾತು ಅಂತಿಮವಾದರೂ ನ್ಯಾಯ ನಿರ್ಣಯದಲ್ಲಿ ವತ್ತಿನಗೌಡ ಮತ್ತು ಇತರ ಸದಸ್ಯರ ಸಲಹೆಗಳನ್ನೂ ಪಡೆಯುತ್ತಾನೆ. ಜಾತಿಗೌಡನಿಗೆ ಅಗತ್ಯ ಸಲಹೆ ಕೊಡುವ ಕರ್ತವ್ಯದ ಈ ವತ್ತಿನ ಗೌಡ ಜಾತಿ ಸದಸ್ಯರು ಹಾಗೂ ಗುರಿಕಾರನ ನಡುವಿನ ಕೊಂಡಿಯಾಗಿರುತ್ತಾನೆ. ಇವರ ನಂತರದ ಸ್ಥಾನದ ಬಿರಾಣಿಯು (ಸಂದೇಶ ವಾಹಕ) ಸಭೆಯ ಸೂಚನೆಗಳನ್ನು ಸಮುದಾಯಕ್ಕೆ

ಮುಟ್ಟಿಸುವ ಕೋಲುಕಾರನಾಗಿರುತ್ತಾನೆ. ಈ ಕೂಟ ವ್ಯವಸ್ಥೆ ಈಚೆಗೆ ತನ್ನ ಪ್ರಾಬಲ್ಯ ಕಳೆದುಕೊಂಡಿದ್ದು ಕೆಲವು ಜಾತಿಗಳಲ್ಲಿ ಇದರ ಪಳೆಯುಳಿಕೆಗಳು ಸಾಂದರ್ಭಿಕವಾಗಿ ಕಾಣಬರುತ್ತವೆ. ಮೊಗವೀರರಲ್ಲಿ ಈ ಜಾತಿಕೂಟದ ಬಿಗಿ ವ್ಯವಸ್ಥೆ ಈಗಲೂ ಉಳಿದಿದೆ.

## ಜಾತಿಗಳು

ಉಡುಪಿ ಜಿಲ್ಲೆಯೂ ದಕ್ಷಿಣಕನ್ನಡ ಜಿಲ್ಲೆಯಂತೆ ರೂಢಿಯಲ್ಲಿರುವ ಜಾತಿಗಳ ವೈವಿಧ್ಯದಿಂದ ಕೂಡಿದ ಪ್ರದೇಶವಾಗಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಣಬರುವ ಜಾತಿಸಮುದಾಯಗಳು ಉಡುಪಿ ಜಿಲ್ಲೆಯಲ್ಲಿಯೂ ಇವೆ. ಹೀಗಾಗಿ, ಎರಡೂ ಜಿಲ್ಲೆಗಳಲ್ಲಿನ ಕೆಲವು ಪ್ರಮುಖ ಸಮುದಾಯಗಳ ಜಾತಿಮೂಲ, ಕಸುಬು, ಆಚಾರ-ವಿಚಾರಾದಿಗಳಲ್ಲಿ ಮೂಲಭೂತವಾದ ಸಮಾನ ಸಂಗತಿಗಳು ಹಾಗೂ ತೀರಾ ಕೆಲವೇ ಅಂಶಗಳಲ್ಲಿ ಸ್ಥಳೀಯ ವ್ಯತ್ಯಾಸಗಳು ಇರುವುದು ಸಹಜವಾಗಿದೆ. ಕುಡುಬಿ, ಖಾರ್ವಿ, ಬಂಟ, ಬಿಲ್ಲವ, ಮೊಗವೀರ, ನಾಯರಿ, ಗೌಡ ಸಾರಸ್ವತ, ಬ್ರಾಹ್ಮಣ ಮೊದಲಾದವರು ಉಡುಪಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬರುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಜಾತಿಸಮುದಾಯಗಳ ಸ್ಥೂಲಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

**ಅಗಸ :** ತುಳುವಿನಲ್ಲಿ ಅಗಸರಿಗೆ ಮಡ್ಯೊಳೆ-ಮಡ್ಡೆಳೆ (ಮಡಿವಾಳ-ಕನ್ನಡ) ಎಂಬ ಹೆಸರು ಇದೆ. ಬಟ್ಟೆ ಮಡಿ ಮಾಡಿಕೊಡುವುದು ಇವರ ಕುಲಕಸುಬು. ಬಂಟರೇ ಮೊದಲಾದ ವಿವಿಧ ಜಾತಿಗಳಲ್ಲಿನ ಹುಟ್ಟು, ಸಾವು ಹಾಗೂ ಋತುಮತಿ ಸಂಬಂಧದ ಶುದ್ಧಿ ಆಚರಣೆಗಳಲ್ಲಿ ಇವರು ವಿಶೇಷವಾಗಿ ಭಾಗವಹಿಸುವ ಸಂಪ್ರದಾಯವಿದೆ. ದೇವಸ್ಥಾನಕ್ಕೆ ಮಡಿವಸ್ತ್ರ ನೀಡುವುದು, ಉತ್ಸವಾದಿಗಳಲ್ಲಿ ಮಡಿ ವಸ್ತ್ರ ಹಾಸುವುದು, ದೀವಟಿಗೆ ಹಿಡಿಯುವುದು, ಭೂತಸ್ಥಾನದಲ್ಲಿ ಸಿಂಗದನ ಕಟ್ಟುವುದು ಮೊದಲಾದ ಕಾರ್ಯಗಳನ್ನೂ ಮಡಿವಾಳರು ನಿರ್ವಹಿಸುತ್ತಾರೆ. ಇವರಲ್ಲಿ ಸಾಲ್ಯಾನ್, ಬಂಗೇರಣ್ಣ, ಕುಂದರ್, ಬೋಲ್ದನ್ನ, ಉಪ್ಪರನ್ನ ಮೊದಲಾದ ಬಳಿಗಳಿವೆ.

**ಕಂಚುಗಾರ :** ಕಂಚು, ಹಿತ್ತಾಳೆ ಇತ್ಯಾದಿ ಲೋಹಗಳಿಂದ ಕುಶಲಕಲೆ ಮಾಡುವ ವೃತ್ತಿಯವರನ್ನು ಕಂಚುಗಾರರೆಂದು ಗುರುತಿಸಲಾಗುತ್ತದೆ. ಜಿಲ್ಲೆಯಲ್ಲಿ ವಿರಳವಾಗಿ ಕಂಡುಬರುವ ಈ ಸಮುದಾಯದವರು ತಮ್ಮ ಹೆಸರಿನೊಂದಿಗೆ ಶೆಟ್ಟಿ, ರಾವ್, ನಾಯ್ಕ ಎಂಬ ಉಪನಾಮ ಇಟ್ಟುಕೊಳ್ಳುತ್ತಾರೆ. ಜನಿವಾರಧಾರಣೆಯ ಪದ್ಧತಿ ಇರುವ ಇವರ ಶುಭಶೋಭನಾದಿಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುತ್ತಾರೆ. ಇವರ ಮನೆ ಮಾತು ಕನ್ನಡ. ರಾಮರಾಜ ಕ್ಷತ್ರಿಯರೊಡನೆ ವೈವಾಹಿಕ ಸಂಬಂಧ ಮಾಡುವುದು ರೂಢಿಯಲ್ಲಿದೆ. ಕಾಳಮ್ಮ ಮತ್ತಿತರ ದೇವರು, ದೈವಗಳನ್ನು ಇವರು ಆರಾಧಿಸುತ್ತಾರೆ.

**ಕುಡುಬಿ :** ಕುಡುಬಿ ಪದದ ಮೂಲ ರೂಪ ಕುಡ್ಮಿ ಅಥವಾ ಕುಣ್‌ಬಿ. ಕುಡುಬಿ ಭಾಷೆಯಲ್ಲಿ ಕುಡುಬಿ ಎಂದರೆ ಮುಳ್ಳು ಹಂದಿ ಎಂದೂ, ಅವರು ಮುಳ್ಳು ಹಂದಿ ಬೇಟೆಯಲ್ಲಿ ನಿಪುಣರಾದ್ದರಿಂದ ಈ ಹೆಸರು ಬಂದಿದೆ ಎಂದೂ ತಿಳಿಯಲಾಗಿದೆ. ಗೋವಾ ಪ್ರದೇಶದಿಂದ ಕರಾವಳಿಗೆ ಬಂದ ಕುಡುಬಿಗಳು ಮೂಲತ: ಬೇಟೆ ಹಾಗೂ ಕುಮೇರಿ (ಕುಮ್ರಿ) ಬೇಸಾಯ ವೃತ್ತಿಯ ಬುಡಕಟ್ಟು ಜನವಾಗಿದ್ದು, ಬದಲಾದ ಕಾಲಮಾನದಲ್ಲಿ ಗುಡಿಕೈಗಾರಿಕೆ, ಕೃಷಿ ಮತ್ತಿತರ ವೃತ್ತಿಗಳಲ್ಲಿ ತೊಡಗಿದ್ದಾರೆ. ಇವರ ಮಾತೃಭಾಷೆ ಕುಡುಬಿಯು ಕೊಂಕಣಿಯ ಒಂದು ಉಪಭಾಷೆಯಾಗಿದೆ. ಕುಡುಬಿಗಳಲ್ಲಿ ಗೋವಾ ಕುಡುಬಿ, ಕೊಡಿಯಾಲ ಕುಡುಬಿ, ಕುಮ್ರಿ ಕುಡುಬಿ, ಕರಿ ಕುಡುಬಿ, ಜೋಗಿ ಕುಡುಬಿ, ಜಾತಿ ಕುಡುಬಿ, ಮಲೆ ಕುಡುಬಿ, ನಾಡ ಕುಡುಬಿ ಮೊದಲಾದ ಒಳ ಪ್ರಭೇದಗಳಿದ್ದು, ಅವುಗಳ ನಡುವೆ ವಿವಾಹ ಸಂಬಂಧ ಏರ್ಪಡುವುದಿಲ್ಲ. ವಾಘಣ್‌ಕಾರ್, ಅಳ್ವೆಗಾರ್, ಮೋರ್‌ಕಾರ್, ಕೇಳ್‌ಕಾರ್, ಸೊಂಸ್‌ಕಾರ್, ದನ್‌ಕಾರ್, ದಿನ್‌ಚೇಕಾರ್, ಪಣಿಲೇಕಾರ್, ಹುಣ್ಕ್‌ಕಾರ್, ಬಿಗಣ್‌ಕಾರ್, ಮೊಕ್ಕಾರ್, ಕಡ್ಕಾರ್, ಕುತ್ಕಾರ್ ಮೊದಲಾದುವು ಇವರಲ್ಲಿನ ಬಳಿ (ಬುಂಕ ಅಥವಾ ಮಾಯೋ)ಗಳಾಗಿವೆ. ಚೇಂಕ್ರ, ಹುಲಿಯ, ಜೇಂಟ ಮೊದಲಾದುವು ಇವರ ಗಂಡಸರ ಹಾಗೂ ಜಿಬ್ಲಿ,

ಬೆಳ್ಳಿ, ಸಾಬುಡ್ಡಿ ಮೊದಲಾದುವು ಇವರ ಮಹಿಳೆಯರ ಸಾಂಪ್ರದಾಯಿಕ ಹೆಸರುಗಳಾಗಿವೆ. ಕುಡುಬಿಯರದು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಾಗಿದ್ದು ಮಕ್ಕಳಕಟ್ಟು ಪದ್ಧತಿಯನ್ನು ಅನುಸರಿಸುತ್ತಾರೆ. ಇವರಲ್ಲಿ ಜಾತಿ ಪಂಚಾಯತಿಯೂ ಇದ್ದು, ಅದನ್ನು ವೋಡೋ ಅಥವಾ ವಡೋ (ಕೂಡುಕಟ್ಟು ಅಥವಾ ವಾಳ್ಯ) ಎಂದು ಕರೆಯುತ್ತಾರೆ. ಗುರಿಕಾರ ಅಥವಾ ಬುದ್ಧೂಂತ್‌ಗಾರ್ ಕುಲದ ಮುಖ್ಯಸ್ಥನಾಗಿದ್ದು, ಅವರ ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ರಾಯ್‌ಬರಿ ಮತ್ತು ಗಾಡ್ಯರು ಈತನಿಗೆ ಸಹಾಯಕರಾಗಿರುತ್ತಾರೆ. ಕುಡುಬಿಯರು ಯುಗಾದಿ, ಆಷಾಢ ಮತ್ತಿತರ ಹಬ್ಬಗಳಲ್ಲದೆ ಹೋಳಿ, ವನಭೋಜನ, ನೆವೆಂಜೆವ್‌ಚ್ಚೆ (ಹೊಸತೂಟ) ಮೊದಲಾದ ವಿಶೇಷ ಹಬ್ಬಗಳನ್ನು ಆಚರಿಸುತ್ತಾರೆ. ಹೋಳಿಯಲ್ಲಿ 'ಗೋವಾ ಅಮ್ಮ' (ದುರ್ಗೆ) ಮತ್ತು ಗೋವಾ ಮಲ್ಲಿಕಾರ್ಜುನ ದೇವರನ್ನು ವಿಶೇಷವಾಗಿ ಪೂಜಿಸುತ್ತಾರೆ. ಇವರಲ್ಲಿ ಋತುಮತಿಯಾದ ಹುಡುಗಿಗೆ ಆಕೆಯ ತಾಯಿ ಮತ್ತು ಅಕ್ಕ ಎಣ್ಣೆ ಸ್ನಾನ ಮಾಡಿಸುವ ಪದ್ಧತಿ ಇದೆ. ವಿವಾಹದಲ್ಲಿ ಧಾರೆ ಕಾರ್ಯವು ಈಚೆಗೆ ಬ್ರಾಹ್ಮಣ ಪುರೋಹಿತರ ನೇತೃತ್ವದಲ್ಲಿ ನೆರವೇರುತ್ತಿದೆ ಹಾಗೂ ವ್ಯಕ್ತಿಯು ಮೃತನಾದಾಗ ಶವವನ್ನು ದಹಿಸುವ ಪದ್ಧತಿಯೂ ಈಚೆಗೆ ರೂಢಿಯಾಗುತ್ತಿದೆ.

**ಕುರುವಾನ :** ಈ ಗಿರಿಜನ ವರ್ಗ ತಮಿಳುನಾಡಿನಿಂದ ಕೇರಳಮಾರ್ಗವಾಗಿ ವಲಸೆ ಬಂದವರು. ಕೋಟೇಶ್ವರ ಪರಿಸರದಲ್ಲಿ ನೆಲೆಸಿದ್ದಾರೆ. ತುಳು ಮಲಯಾಳ ಮಿಶ್ರಿತ ಕುರುವಾನಿಯನ್ನು ಮನೆ ಮಾತನ್ನಾಗಿ ಹೊಂದಿದ್ದಾರೆ. ಕಣಿ, ಗಿಣಿಶಾಸ್ತ್ರ ಹೇಳುವುದು, ಹಾವು, ಕೋತಿ ಆಡಿಸುವುದು ಮೊದಲಾದವು ಇವರ ವೃತ್ತಿಗಳಾಗಿವೆ.

**ಕುಲಾಲ :** ಕುಲಾಲರಿಗೆ ಮೂಲ್ಯ, ಹಾಂಡ, ಕುಂಬಾರ ಮೊದಲಾದ ಪರ್ಯಾಯ ಹೆಸರುಗಳೂ ಇವೆ. ಕುಂಬಾರಿಕೆ ಇವರ ಸಾಂಪ್ರದಾಯಿಕ ವೃತ್ತಿಯಾಗಿದೆ. ಬಾಗೆಟ್ಟನ್ನಾಯ, ಬೊನ್ನಣ್ಣಾಯ, ಪುಲ್ಲೆಟಣ್ಣಾಯ, ಸಾಲಣ್ಣಾಯ, ಬಂಗೇರಣ್ಣಾಯ, ಕುಂದಲಣ್ಣಾಯ, ಪಂಗಲಣ್ಣಾಯ, ಕುರ್ಮರಣ್ಣಾಯ, ಕೆಲ್ಲರಣ್ಣಾಯ, ಹಿರಿವಣ್ಣಾಯ, ಉಪ್ಪರಣ್ಣಾಯ, ಪೆರ್ಗಡೆ ಬಣ್ಣಾಯ, ಉದ್ಬರಣ್ಣಾಯ, ಕೋಚಪ್ಪಬನ್ನಾಯ ಮೊದಲಾದ ಬಳಿಗಳಿವೆ. ಒಂದೇ ಬಳಿಯಲ್ಲಿ ವಿವಾಹ ನಿಷಿದ್ಧವಾಗಿದೆ. ಕುಲಾಲರ ಮನೆ ಮಾತು ತುಳು (ಕುಂದಾಪುರ ಭಾಗದಲ್ಲಿ ಕನ್ನಡ). ತುಳು ಮಾತನಾಡುವವರು ಅಳಿಯಕಟ್ಟು ಹಾಗೂ ಕನ್ನಡ ಮಾತನಾಡುವವರು ಮಕ್ಕಳ ಕಟ್ಟಿಗೆ ಸೇರಿದ್ದು,ಕೂಡುಕಟ್ಟಿನ ಗುರಿಕಾರರ ಮಾರ್ಗದರ್ಶನದಲ್ಲಿ ವಿವಾಹಾದಿ ಕಾರ್ಯಗಳು ನಡೆಯುತ್ತವೆ.

**ಕೊಟ್ಟಾರಿ :** ಕೊಟ್ಟಾರಿ ಎಂದರೆ ಉಗ್ರಾಣದ ಅಧಿಕಾರಿ ಎಂದು ಅರ್ಥ. ಹಿಂದೆ ಜೈನ ಹಾಗೂ ಬಂಟ ಅರಸರ ಅಥವಾ ಜಮೀನ್ದಾರರ ಮನೆಯ ಉಗ್ರಾಣಗಳ ಮೇಲ್ವಿಚಾರಕ ವೃತ್ತಿ ಮಾಡುತ್ತಿದ್ದವರು ಈಗಲೂ ತುಳುನಾಡಿನಲ್ಲಿ ಕೊಟ್ಟಾರಿ ಎಂಬ ಜಾತಿ ಸಮುದಾಯವಾಗಿ ಕಾಣಬರುತ್ತಾರೆ. ಈ ವೃತ್ತಿಯ ಕಾರಣಕ್ಕಾಗಿ ಇವರಿಗೆ ಜೈನ ಹಾಗೂ ಬಂಟರ ಸಮೀಪ ಸಂಪರ್ಕವಿದ್ದಿತು. ಇವರು ಕೃಷಿಕಾರ್ಯದಲ್ಲಿಯೂ ತೊಡಗಿದವರು. ಅಳಿಯಕಟ್ಟು ಪದ್ಧತಿಯವರಾದುದರಿಂದ ಇವರ ಆಚಾರ–ಸಂಪ್ರದಾಯಗಳು, ದೈವಾರಾಧನೆಗಳು ಬಹುಮಟ್ಟಿಗೆ ಇತರ ಅಳಿಯ ಸಂತಾನ ಪದ್ಧತಿಯವರ ಕಟ್ಟುಕಟ್ಟಳೆಗಳನ್ನೇ ಹೋಲುತ್ತವೆ.

**ಕೊರಗ :** ತುಳುನಾಡಿನ ಮೂಲನಿವಾಸಿಗಳಲ್ಲಿ ಕೊರಗರೂ ಸೇರುತ್ತಾರೆ. ಹುಬಾಸಿಕನೆಂಬ ವೀರನು ಕೊರಗ ಸಮುದಾಯದ ಅರಸನಾಗಿದ್ದನು. ಸ್ಥಳೀಯ ಅರಸರೊಂದಿಗಿನ ಹೋರಾಟದಲ್ಲಿ ಆತ ಸೋತ ಕಾರಣವಾಗಿ ಕೊರಗರು ನಾಡು ಬಿಟ್ಟು ಕಾಡನ್ನು ಆಶ್ರಯಿಸಿದರೆಂಬ ಐತಿಹ್ಯವನ್ನು ಇ.ಥರ್ಸ್ಟನ್ ದಾಖಲಿಸಿದ್ದಾನೆ. ಬುಕಾನನ್ ಸಹ ತುಳುನಾಡನ್ನು ಒಂದು ಕಾಲದಲ್ಲಿ ಆಳಿದ ಪ್ರಭುಗಳಾದ ಹಬ್ಸಿನಿಯಾ ವಂಶದವರೆಂದು ಅವರು ಹೇಳಿಕೊಳ್ಳುವುದಾಗಿ ದಾಖಲಿಸಿದ್ದಾನೆ. ಆದರೆ, ದೈಹಿಕವಾಗಿ ನೀಗ್ರೋ ಲಕ್ಷಣ ಹೊಂದಿರುವುದರಿಂದ ಮತ್ತು ಬಹು ಹಿಂದೆ ಅವರು ಅಬ್ಸಿದಿಂದ (ಅಬಿಸೀನಿಯಾ) ಬಂದಿರಬಹುದಾಗಿದ್ದು, ಅಬ್ಸಿ ಎಂಬುದೇ ಅಬ್ಸಿಕ, ಹಬಾಸಿಕ ಆಗಿರಬಹುದೆಂದು ಎಸ್.ಎ.ಕೃಷ್ಣಯ್ಯ ಅಭಿಪ್ರಾಯಪಟ್ಟಿದ್ದಾರೆ. ಇವರು ಅರಣ್ಯದಲ್ಲಿ ಬೇಟೆಯಾಡುತ್ತಾ ಅಲೆಮಾರಿಗಳಾಗಿದ್ದವರು ಕಾಲಾಂತರದಲ್ಲಿ ಒಂದೆಡೆ ನೆಲೆಸಿ ಬುಟ್ಟಿ ಹೆಣೆಯುವುದು, ಕಾಡುತ್ಪತ್ತಿ ಸಂಗ್ರಹ, ಕೃಷಿಕೂಲಿ ಮತ್ತಿತರ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಕೊರಗರಲ್ಲಿ ಹಂಡೆ ಅಥವಾ ತಿಪ್ಪಿ ಕೊರಗ, ಕುಂಟು (ಬಟ್ಟೆ) ಕೊರಗ, ಉಡುಪಿಯ ವಂಟಿಕೊರಗ, ಹೆಬ್ರಿಯ ತೊಪ್ಪು (ಸೊಪ್ಪು)

ಕೊರಗ, ಕುಂದಾಪುರದ ಮೂಡುಕೊರಗ ಎಂಬ ಒಳ ಪ್ರಭೇದಗಳಿವೆ. ಮೂಡುಕೊರಗ ಮತ್ತು ತೊಪ್ಪುಕೊರಗ ಭಾಷೆಗಳ ಮೇಲೆ ಕನ್ನಡದ ಪ್ರಭಾವವಿದ್ದರೆ, ಒಂಟಿಕೊರಗರ ಮೇಲೆ ತುಳುವಿನ ಪ್ರಭಾವವಿದೆ. ಇವರು ಅಳಿಯಕಟ್ಟು ಪದ್ಧತಿಯವರು. ಕೊರಗರ ನಿವಾಸಗಳನ್ನು ಸಾಂಪ್ರದಾಯಿಕವಾಗಿ ಕೊಪ್ಪ ಅಥವಾ ಕೊಟ್ಯ ಎಂದು ಕರೆಯುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಇವರು ಕೊಳಲು (ವಾಂಟೆ) ಹಾಗೂ ಕಡ್ಡಾಯಿ ಎಂಬ ಡೋಲುವಾದ್ಯ ನುಡಿಸುತ್ತಾ ಕುಣಿಯುವ ಸಂಪ್ರದಾಯವಿದೆ. ಕುಲದ ಮುಖ್ಯಸ್ಥನಾದ ಗುರಿಕಾರನ ಮಾರ್ಗದರ್ಶನದಲ್ಲಿ ನ್ಯಾಯ ಪಂಚಾಯಿತಿ, ವಿವಾಹ ಮತ್ತಿತರ ಸಾಂಪ್ರದಾಯಿಕ ಕಾರ್ಯಗಳು ನಡೆಯುತ್ತವೆ. ಇವರಲ್ಲಿ ನವಜಾತಶಿಶು ಹಾಗೂ ಬಾಣಂತಿಯನ್ನು ಐದು ದಿನ ಪ್ರತ್ಯೇಕ ಗುಡಿಸಲಲ್ಲಿ ಇರಿಸುತ್ತಾರೆ. ಮಗು ಹುಟ್ಟಿದ ದಿನದ ಹೆಸರನ್ನು ಆಧರಿಸಿ ಮಗುವಿಗೆ ಹೆಸರು ಇಡುವುದೂ ಇವರಲ್ಲಿನ ಒಂದು ರೂಢಿಯಾಗಿದೆ. ಮದುವೆಯಲ್ಲಿ ವರನನ್ನು ಬತ್ತದ ಮುಡಿಯ ಮೇಲೆ ಹಾಗೂ ವಧುವನ್ನು ಅದಕ್ಕಿಂತ ಕಡಿಮೆ ಎತ್ತರದ ಹೆಡಿಗೆಯ ಮೇಲೆ ಕೂರಿಸುವುದು, ಗಂಡಿನ ಕಡೆಯ ಗುರಿಕಾರನು ವಧುವಿಗೆ ಕರಿಮಣಿ ಕಟ್ಟಿ, ಕಾಲುಂಗುರ ತೊಡಿಸುವುದು ಮೊದಲಾದುವು ಇವರ ಕೆಲವು ಸಾಂಪ್ರದಾಯಿಕ ಪದ್ಧತಿಗಳು. ಶವವನ್ನು ಕಂಬಳಿಯಲ್ಲಿ ಸುತ್ತಿ ಅಥವಾ ಹೆಣಕ್ಕೆ ಮುಸುಕು ಹಾಕಿ ಒಂದೇ ಬಡಿಗೆಯಲ್ಲಿ ಹೂಳುವ ಜಾಗಕ್ಕೆ ಒಯ್ಯುವುದೂ ಇವರಲ್ಲಿನ ಪದ್ಧತಿಯಾಗಿದ್ದಿತು. 'ಸುಡುಸುದ್ಧ' ಎಂಬ ಪ್ರಾಯಶ್ಚಿತ್ತ ಕ್ರಮವು ಹಿಂದೆ ಕೊರಗರಲ್ಲಿಯೂ ಇದ್ದಿತು. ಅದರ ಪ್ರಕಾರ ತಪ್ಪಿತಸ್ಥ ಹೆಣ್ಣು ಅಥವಾ ಗಂಡು ಉರಿವ ಗುಡಿಸಲುಗಳ ಮೂಲಕ ಹಾದುಬರಬೇಕಾಗಿದ್ದಿತು. ಕೊರಗತನಯನನ್ನು ಕೊರಗರು ದೈವವೆಂದು ಆರಾಧಿಸುತ್ತಾರೆ. ಈ ದೈವದ ಕೋಲವಾಗುವಾಗ ಯಾವುದೇ ಬಗೆಯ ದೀಪದ ಬೆಳಕು ಇರಬಾರದೆಂಬ ನಿಬಂಧನೆಯೂ ಇದೆ. ಇವರಲ್ಲಿ ಯಾವ ಪೂಜಾರಿಯೂ ಇಲ್ಲ, ದೈವವನ್ನು ಪ್ರತಿಯೊಬ್ಬರೂ ಸ್ವತ: ತಾವೇ ಪೂಜಿಸುತ್ತಾರೆ ಎಂದು ಬುಕನನ್ ದಾಖಲಿಸಿದ್ದಾನೆ.

**ಖಾರ್ವಿ :** ಗುಜರಾತಿನ ಖರ್ವ ಊರಿನಿಂದ ಬಂದದ್ದರಿಂದ ಇವರಿಗೆ ಖಾರ್ವಿಗಳೆಂದು ಹೆಸರಾಗಿದೆ ಎಂಬ ಹೇಳಿಕೆ ಇದೆ. ಇವರು ವಿಜಯನಗರದ ಹಾಗೂ ಕೆಳದಿಯ ಅರಸರ ಕಾಲದಲ್ಲಿ ಸೈನಿಕರಾಗಿದ್ದರೆಂದೂ, ಬಳಿಕ ಮೀನುಗಾರಿಕೆಯನ್ನು ಪ್ರಧಾನವಾಗಿ ಅವಲಂಬಿಸಿದರೆಂದೂ ತಿಳಿದುಬರುತ್ತದೆ. ಇವರು ಸಮುದ್ರ ಅಥವಾ ನದಿಯ ಕಿನಾರೆಯಲ್ಲಿ ಸಣ್ಣ ಸಣ್ಣ ಗುಡಿಸಲುಗಳಲ್ಲಿ ಗುಂಪಾಗಿ ವಾಸಿಸುತ್ತಾರೆ. ಇವರಿಗೆ ಅಂಬಿಗ, ಹರಿಕಾಂತ ಇತ್ಯಾದಿ ಹೆಸರುಗಳಿವೆ. ಖಾರ್ವಿಗಳಲ್ಲಿ ಕನ್ನಡ ಖಾರ್ವಿ ಹಾಗೂ ಕೊಂಕಣ ಖಾರ್ವಿಗಳಿದ್ದಾರೆ. ಖಾರ್ವಿಗಳು ನೂಲಹುಣ್ಣಿಮೆ, ಹೋಳಿ ಹುಣ್ಣಿಮೆ ಹಾಗೂ ಚಾಂದ್ರಮಾನ ಯುಗಾದಿಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಇವರಲ್ಲಿ ಕುಲಪಂಚಾಯತಿ ವ್ಯವಸ್ಥೆ ಇದೆ. ಇವರ ಗುರಿಕಾರರು ಹೆಗ್ಡೆ, ಪಟೇಲ್, ಸಾರಂಗ, ನಾಯಕ್ ಇತ್ಯಾದಿ ಉಪನಾಮಗಳನ್ನು ಇಟ್ಟುಕೊಳ್ಳುತ್ತಾರೆ. ಒಂದೇ ಕುಲದೈವದ ಮನೆತನಗಳ ನಡುವೆ ವಿವಾಹ ಸಂಬಂಧ ಮಾಡುವಂತಿಲ್ಲ. ಈಚೆಗೆ ಶುಭಾಶುಭ ಕಾರ್ಯಗಳಿಗೆ ಬ್ರಾಹ್ಮಣ ಪುರೋಹಿತರನ್ನು ಕರೆಸುತ್ತಿದ್ದಾರೆ. ವಿವಾಹದಂದು ಪುರೋಹಿತರು ಜನಿವಾರ ಧಾರಣೆ ಮಾಡಿಸುವ ಪದ್ಧತಿ ಇವರಲ್ಲಿದೆ.

**ಗಾಣಿಗ :** ಜಿಲ್ಲೆಯಲ್ಲಿ ಸಪಲ್ಯ, ಸಪಲಿಗ ಎಂಬ ಹೆಸರುಗಳೂ ಇರುವ ಗಾಣಿಗರು ಗಾಣ ಆಡಿಸಿ ಎಣ್ಣೆ ತೆಗೆಯುವ ಕುಲಕಸುಬಿನವರಾಗಿದ್ದಾರೆ. ಈಚೆಗೆ ಅವರು ಇತರ ವೃತ್ತಿಗಳನ್ನೂ ಮಾಡುತ್ತಿದ್ದಾರೆ. ಇವರ ಮಾತೃಭಾಷೆ ತುಳು. ಅಳಿಯಕಟ್ಟು ಸಂಪ್ರದಾಯಕ್ಕೆ ಸೇರಿದ ಇವರಲ್ಲಿ ಮೆಂಡನ್, ಬಂಗೇರ, ಸಾಲ್ಯಾನ್ ಮೊದಲಾದ ಬಳಿಗಳಿವೆ. ಕುಲದ ಮುಖಂಡರಾದ ಗುರಿಕಾರರ ಮುಂದಾಳ್ತನದಲ್ಲಿ ವಿವಾಹಾದಿ ಸಂಪ್ರದಾಯಗಳು ನಡೆಯುವುದು ಪದ್ಧತಿ. ಗಾಣದ ಕೊಟ್ಯ ಇರುವವರು ಈಗ ಗಾಣ ಆಡಿಸದಿದ್ದರೂ ಅದನ್ನು ತೆಗೆಯದೆ, ಆ ಮರದ ಭಾಗ ಭೂಮಿಯಲ್ಲಿ ಸ್ವತ: ನಶಿಸಿಹೋಗುವವರೆಗೆ ಹಾಗೇ ಬಿಡಬೇಕೆಂಬ ನಂಬಿಕೆ ಇದೆ. ದೀಪಾವಳಿಯಲ್ಲಿ ಅದನ್ನು ದೇವರೆಂದು ಪೂಜೆ ಮಾಡುತ್ತಾರೆ.

**ಗೊಡ್ಡ :** ಇವರು ಕಾರ್ಕಳ, ಪಡುಬಿದ್ರಿ ಭಾಗಗಳಲ್ಲಿ ವಿಶೇಷವಾಗಿ ಕಾಣಬರುತ್ತಾರೆ. ಆದರೆ, ತೀರಾ ಅಲ್ಪಸಂಖ್ಯಾತರು. ಹೊಯ್ಸಳರ ಕಾಲದಲ್ಲಿ ದೇವಳದ ಸೇವೆ ಹಾಗೂ ಯುದ್ಧ ಕೌಶಲರಾಗಿದ್ದರೆಂಬ,

ಅಭಿಪ್ರಾಯವಿದೆ. ಬೇಲೂರು ಹುಟ್ಟು, ಕಟ್ಟಿಂಗೇರಿ ಕಟ್ಟು ಎಂಬ ಇವರಲ್ಲಿನ ನುಡಿಗಟ್ಟು ಈ ಸಮುದಾಯದ ಮೂಲ, ವೃತ್ತಿಗಳ ಸೂಚಕವಾಗಿದೆ. ಮೊದಲು ಕಟ್ಟಿಂಗೇರಿಗೆ ಬಂದು ಕಾಪು, ಉಡುಪಿ ಪ್ರದೇಶಗಳಲ್ಲಿ ದೈವಾರಾಧನೆಯ ಸೇವೆಯಲ್ಲಿ ತೊಡಗಿದರು. ಕಾಪುವಿನ ಹಳೇ ಮಾರಿಗುಡಿ ಸಮೀಪದ ದೈವಸ್ಥಾನದಲ್ಲಿ ನಡೆಸುವ ಪಿಲಿಕೋಲ, ಬೆರ್ಮೆರ ಆರಾಧನೆ ಇತ್ಯಾದಿಗಳಲ್ಲಿ ಇವರದು ಯಜಮಾನಿಕೆ ಪಾತ್ರವಾಗಿದೆ. ಕಂಗಿಲು ಇವರ ವಿಶೇಷ ಕಲಾಪ್ರಕಾರವಾಗಿದೆ.

**ಚಿತ್ಪಾವನರು :** ಬರಗಾಲ ಮತ್ತು ಬಡತನದಿಂದಾಗಿ ರತ್ನಗಿರಿ ಕಡೆಯಿಂದ ಹಾಗೂ ಪೋರ್ಚುಗೀಸರ ಮತಾಂತರದ ದಬ್ಬಾಳಿಕೆಗೆ ಅಂಜಿ ಗೋವಾ ಕಡೆಯಿಂದ ವಲಸೆ ಬಂದು ಪಶ್ಚಿಮ ಘಟ್ಟಗಳ ತಪ್ಪಲಲ್ಲಿ ಅಡಿಕೆ ಕೃಷಿಯಲ್ಲಿ ತೊಡಗಿ ಜೀವನೋಪಾಯವನ್ನು ಕಂಡುಕೊಂಡ ಬ್ರಾಹ್ಮಣ ಜಾತಿಗೆ ಸೇರಿದ ಮರಾಠಿ ಮನೆಮಾತಿನ ಜನರು ಇವರು. ತಮ್ಮ ಮೂಲ ಕುಲನಾಮಗಳನ್ನು ಉಳಿಸಿಕೊಂಡು ಕುಲದೇವರುಗಳ ಆರಾಧನೆಯನ್ನು ಪಾಲಿಸಿಕೊಂಡು ಬಂದಿರುವ ಇವರು ಅನೇಕ ಮರಾಠಿ ಸಂಪ್ರದಾಯವನ್ನು ಈಗಲೂ ಆಚರಿಸಿಕೊಂಡು ಬರುತ್ತಿದ್ದಾರೆ. ಪರಶುರಾಮನನ್ನು ತಮ್ಮ ಗುರುವೆಂದು ಆರಾಧಿಸುವ ಚಿತ್ಪಾವನರು ಕಾರ್ಕಳ ತಾಲೂಕಿನ ಮಾಳದಲ್ಲಿ ಪರಶುರಾಮ ದೇವಸ್ಥಾನವನ್ನು ಬಹಳ ಹಿಂದೆಯೇ ಸ್ಥಾಪಿಸಿಕೊಂಡಿದ್ದಾರೆ. ತೀರಾ ಇತ್ತೀಚಿನವರೆಗೂ ಸ್ಥಳೀಯ ಬ್ರಾಹ್ಮಣರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸದೆ ಕೇವಲ ಕೃಷಿಕರಾಗಿ ತಮ್ಮ ಜಾತಿ–ಭಾಷೆ–ಸಂಪ್ರದಾಯಗಳ ಅನನ್ಯತೆಯನ್ನೂ ಕಾಪಾಡಿಕೊಂಡಿದ್ದ ಇವರು ಇತ್ತೀಚೆಗೆ ಆ ಬಗ್ಗೆ ಮುಕ್ತ ಮನಸ್ಸು ಹೊಂದಿದ್ದಾರೆ. ಮಹಾರಾಷ್ಟ್ರ ಮೂಲದ ಕರಾಡ ಬ್ರಾಹ್ಮಣರು, ಸ್ಥಳೀಯರಾದ ಹವ್ಯಕ, ಶಿವಳ್ಳಿ, ಸ್ಥಾನಿಕ ಹಾಗೂ ದೇಶಸ್ಥ ಬ್ರಾಹ್ಮಣರೊಡನೆ ವಿವಾಹ ಸಂಬಂಧಗಳೇರ್ಪಟ್ಟಿವೆ. ಇಂದು ಚಿತ್ಪಾವನರಲ್ಲಿಯೂ ಅನೇಕರು ವಿದ್ಯಾವಂತರಾಗಿ ಕೃಷಿಯೇತರ ಆದಾಯ ಮೂಲಗಳನ್ನು ಹುಡುಕಿಕೊಂಡಿದ್ದಾರೆ. ಸರಕಾರಿ ಹಾಗೂ ಖಾಸಗಿ ನೌಕರಿಗಳಲ್ಲಿ, ಸ್ವೋದ್ಯೋಗದಲ್ಲಿ ಮತ್ತು ಸ್ವಂತ ಉದ್ದಿಮೆಗಳಲ್ಲಿ ತೊಡಗಿದ್ದಾರೆ.

**ತಿಗಳ :** ವಹ್ನಿಕುಲಕ್ಷತ್ರಿಯ, ಅಗ್ನಿವಂಶಕ್ಷತ್ರಿಯ, ಅಗ್ನಿವನ್ನಿ, ಧರ್ಮರಾಜಕಾಪು, ಪಲ್ಲಿ, ಶಂಭುಕುಲಕ್ಷತ್ರಿಯ, ವನ್ನಿಯಾರ್ ಮೊದಲಾದ ಹೆಸರುಗಳೂ ಇರುವ ತಿಗಳರು ಕಾರ್ಕಳ ಪರಿಸರದಲ್ಲಿ ವಿಶೇಷವಾಗಿ ಕಾಣಬರುತ್ತಾರೆ. ಟಿಪ್ಪುವಿನ ಸೈನ್ಯದಲ್ಲಿದ್ದ ಇವರ ಪೂರ್ವಿಕರು ಬಳಿಕ ಕಾರ್ಕಳದ ಕೋಟೆಯ ಉಸ್ತುವಾರಿಗಾಗಿ ಇಲ್ಲಿ ನೆಲೆನಿಂತರೆಂದು ತಿಳಿದುಬರುತ್ತದೆ. ಕನ್ನಡ ಮನೆಮಾತಾದ ಇವರು ಪಿತೃಪ್ರಧಾನ ಪದ್ಧತಿಯ ಮಕ್ಕಳ ಕಟ್ಟು ಪದ್ಧತಿಯವರಾಗಿದ್ದಾರೆ. ತಮ್ಮದು ಜಂಬುಮಹರ್ಷಿ ಗೋತ್ರವೆಂದೂ, ಸಗೋತ್ರ ವಿವಾಹ ರೂಢಿಯಲ್ಲಿದೆ ಎಂದೂ ಹೇಳುತ್ತಾರೆ. ಮದುವೆಯ ಸಂದರ್ಭದಲ್ಲಿ ವರನಿಗೆ ಉಪನಯನ ನಡೆಸಿ ಯಜ್ಞೋಪವೀತ ಧಾರಣೆ ಮಾಡುವ ಸಂಪ್ರದಾಯ ಅನುಸರಿಸುತ್ತಾರೆ. ಮನ್ನಾರ ದೇವರನ್ನು (ದ್ರೌಪದಿ) ಕುಲದೇವತೆ ಎಂದು ಪೂಜಿಸುವ ಇವರು ಕರಗ ಉತ್ಸವ, ನವರಾತ್ರಿ ಆಚರಣೆ ಇತ್ಯಾದಿಗಳನ್ನು ನಡೆಸುತ್ತಾರೆ. ಬ್ರಾಹ್ಮಣ ಕುಲಪುರೋಹಿತರು ಇವರ ವಿವಾಹಾದಿ ಸಂಪ್ರದಾಯಗಳನ್ನು ನಡೆಸಿಕೊಡುತ್ತಾರೆ.

**ದಾಸಯ್ಯ :** ಹಣೆಯಲ್ಲಿ ಗಂಧದ ಮೂರು ನಾಮಗಳು, ತಲೆಗೆ ಮುಂಡಾಸು, ಸೊಂಟಕ್ಕೆ ಬಿಳೀ ಕಚ್ಚೆ ಪಂಚೆ ಧರಿಸಿ, ಶಂಖ, ಜಾಗಟೆ, ಭವನಾಸಿ ಹಾಗೂ ಗರುಡಗಂಬಗಳೊಂದಿಗೆ ಇವರು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಾರೆ. ದಾಸಯ್ಯನು ತನಗೆ ನಿರ್ದಿಷ್ಟವಾದ ಗ್ರಾಮಗಳ ಅಜಲಿನ ಮನೆಗಳಲ್ಲಿ ನಡೆಯುವ ದೇವತಾಕಾರ್ಯ ಮತ್ತಿತರ ಧಾರ್ಮಿಕ ಆಚರಣೆಗಳಲ್ಲಿ ಪುರೋಹಿತನಂತೆ ಭಾಗವಹಿಸುತ್ತಾನೆ. ತಿಮ್ಮಪ್ಪನ ಒಕ್ಕಲಿನವರು ತಿರುಪತಿಗೆ ಮುಡಿಪು ಕಟ್ಟುವಾಗ ಮಾಡುವ 'ಹರ್‌ಸಾಯ' (ಹರಿಸೇವೆ)ವನ್ನು ದಾಸಯ್ಯ ನಡೆಸಿಕೊಡಬೇಕಾಗುತ್ತದೆ. ಹಾಗೂ, ತಿರುಪತಿಗೆ ಮುಡಿಪು ತೆಗೆದುಕೊಂಡು ಹೋಗುವವರು ತಮ್ಮ ಜೊತೆಯಲ್ಲಿ ದಾಸಯ್ಯನನ್ನು ಕರೆದುಕೊಂಡು ಹೋಗುವ ಪದ್ಧತಿ ಇದ್ದಿತು.

**ದೇವದಾಸಿ :** ಇವರಿಗೆ ನಾಯಕಸಾನ, ಕಲಾವಂತ ಸಮಾಜ ಮೊದಲಾದ ಹೆಸರುಗಳೂ ಇವೆ. ಮಂಗಳೂರಿನ ಶಾಸನವೊಂದರಲ್ಲಿ ಕೂತಾಡುವ ಬಾಕನಂಗೆಯರು ಎಂದು ಇವರನ್ನು ಕರೆಯಲಾಗಿದೆ (ದೇವದಾಸಿಯರ ಹಾಡುಗಳು, ಪು.೪೮). ಇವರು ಕೆಳದಿ, ವಿಜಯನಗರ ಮೊದಲಾದ ಘಟ್ಟದ ಮೇಲಿನ ಪಟ್ಟಣಗಳಿಂದ

ತುಳುನಾಡಿಗೆ ಬಂದವರು. ಬಸರೂರು, ಬಾರ್ಕೂರು, ಹಿರಿಯಡ್ಕ, ಪುತ್ತಿಗೆ ಮತ್ತಿತರ ಪಟ್ಟಣಗಳ ಮುಖ್ಯ ದೇವಸ್ಥಾನಗಳಲ್ಲಿ ಸಂಗೀತ, ನೃತ್ಯಾದಿ ಸೇವೆಗಳನ್ನು ಮಾಡುವುದು (ತಟ್ಟೆ ಚಾಕರಿ) ಇವರ ಮೂಲ ಸಾಂಪ್ರದಾಯಿಕ ವೃತ್ತಿಯಾಗಿದ್ದಿತು. ಆದ್ದರಿಂದ ಇವರು ಸಂಗೀತ, ನೃತ್ಯಾದಿಗಳನ್ನು ವಿಶೇಷವಾಗಿ ಅಭ್ಯಾಸ ಮಾಡುತ್ತಿದ್ದರು. ಇವರಲ್ಲಿ ಸ್ತ್ರೀ ನಾಟಕ ಮಂಡಲಿ ಕಟ್ಟಿ, ನಾಟಕ ಆಡಿದವರೂ ಇದ್ದಾರೆ (ಅದೇ; ಪು.೭೨). ಇವರ ಮನೆ ಮಾತು ಕನ್ನಡ. ಕಾಲಾಂತರದಲ್ಲಿ ಈ ಸಮುದಾಯದ ಹೆಣ್ಣುಮಕ್ಕಳು ಶ್ರೀಮಂತರನ್ನು ಆಶ್ರಯಿಸುವ ಪದ್ಧತಿ ಬೆಳೆಯಿತು. ಆದರೆ, ಸ್ವಾತಂತ್ರ್ಯೋತ್ತರದಲ್ಲಿ ಆದ ದೇವದಾಸಿ ಪದ್ಧತಿಯ ರದ್ಧತಿ ಇತ್ಯಾದಿ ಕಾನೂನುಗಳಿಂದಾಗಿ ಬಳಿಕ ಈ ಕಲಾವಂತ ಸಮುದಾಯ ತಮ್ಮ ಹಳೆಯ ಜೀವನ ಕ್ರಮವನ್ನು ತ್ಯಜಿಸಿದ್ದಾರೆ. ಈ ಹೆಣ್ಣುಮಕ್ಕಳು ತಮಗೆ ಸೂಕ್ತರಾದ ಇತರ ಜಾತಿಯವರನ್ನು ವಿವಾಹ ಮಾಡಿಕೊಂಡು ಗೃಹಸ್ಥ ಜೀವನ ನಡೆಸುತ್ತಿದ್ದಾರೆ. ದೇವದಾಸಿ ಪದ್ಧತಿಯಲ್ಲಿ ಹೆಣ್ಣು ಕುಟುಂಬದ ಪ್ರಮುಖ ವ್ಯಕ್ತಿಯಾಗಿದ್ದು ಆಕೆಯ ಆದಾಯದಿಂದಲೇ ಕುಟುಂಬ ಸಾಗಬೇಕಾಗಿದ್ದಿತು. ಹೆಣ್ಣು ಮೈನೆರೆದಾಗ ಊರ ದೇವರ ಎದಿರು ಗೆಜ್ಜೆಕಟ್ಟುವುದು, ಆ ದೇವರ ಜೊತೆಗೇ ಸಾಂಕೇತಿಕವಾಗಿ ವಿವಾಹ ಮಾಡಿಕೊಳ್ಳುವುದು ಮೊದಲಾದ ಸಂಪ್ರದಾಯಗಳು ಹಿಂದೆ ಇದ್ದವು. ಇವರ ಆಚಾರ–ಸಂಸ್ಕಾರಗಳು ಬ್ರಾಹ್ಮಣ ಪುರೋಹಿತರ ಮೂಲಕ ವೈದಿಕ ಸಂಪ್ರದಾಯದಂತೆ ನಡೆಯುತ್ತವೆ.

**ದೇವಾಡಿಗ :** ದೇವಾಲಯಗಳಲ್ಲಿ ದೀವಟಿಗೆ ಹಿಡಿಯವುದು, ಓಲಗ ನುಡಿಸುವುದು ಮೊದಲಾದ ಕಾರ್ಯಗಳನ್ನು ಸಾಂಪ್ರದಾಯಿಕವಾಗಿ ನಿರ್ವಹಿಸುವ ವೃತ್ತಿಯ ದೇವಾಡಿಗರಿಗೆ ಮೊಯ್ಲಿ, ಶೇರಿಗಾರ ಎಂಬ ಹೆಸರಿವೆ. ಅಳಿಯಕಟ್ಟು ಪದ್ಧತಿಯ ದೇವಾಡಿಗರಲ್ಲಿ ಅಡ್ಯರನ್, ಸಿಡಿಯಾನ್, ಕಾಯರನ್, ಕುಂದರನ್, ಉಪ್ಪೆನ್, ವಡ್ಡರನ್, ಸಾಲ್ಯಾನ್, ಗುಜರಾನ್, ಶ್ರೀಯಾನ್, ಬಂಗೇರ ಮೊದಲಾದ ಬಳಿಗಳಿವೆ. ಕುಲದ ಮುಖ್ಯಸ್ಥನಾದ ಗುರಿಕಾರನ ಮುಂದಾಳ್ತನದಲ್ಲಿ ವಿವಾಹಾದಿ ಸಾಂಪ್ರದಾಯಿಕ ಆಚರಣೆಗಳು ನಡೆಯುವುದು ಪದ್ಧತಿ. ಆಟಿ ಶ್ರಾವಣದಲ್ಲಿ ಪಿತೃಗಳಿಗೆ ಹೊಸಬಟ್ಟೆ ಇಟ್ಟು, ಎಡೆ ಹಾಕಿ, ಪ್ರಾರ್ಥಿಸುತ್ತಾರೆ. ಕೃಷ್ಣಜನ್ಮಾಷ್ಟಮಿ, ಚೌತಿ, ಯುಗಾದಿ ಮೊದಲಾದ ಹಬ್ಬಗಳನ್ನು ದೇವಾಡಿಗರೂ ಆಚರಿಸುತ್ತಾರೆ. ಇವರು ಆಯಾ ಸ್ಥಳದ ಎಲ್ಲಾ ದೇವಾಲಯಗಳಲ್ಲಿಯೂ ಕೆಲವು ಸಾಂಪ್ರದಾಯಿಕ ಸೇವಾ ಕಾರ್ಯಗಳನ್ನು ಮಾಡುತ್ತಿದ್ದಾರೆ.

**ದೈವಜ್ಞ ಬ್ರಾಹ್ಮಣ :** ವಜ್ರ, ಚಿನ್ನ, ಬೆಳ್ಳಿಯಂತಹ ಆಭರಣಗಳ ವ್ಯಾಪಾರೋದ್ಯಮವನ್ನು ಕುಲಕಸಬಾಗಿ ಉಳ್ಳ ಇವರಿಗೆ ಸೋನಾರ, ಕೊಂಕಣ ಸೋನಾರ, ಸೋನಾರ ಶೆಟಗಾರ, ಶೇಟ್ ಮೊದಲಾದ ಹೆಸರುಗಳೂ ರೂಢಿಯಲ್ಲಿವೆ. ತಮ್ಮನ್ನು ದೈವಜ್ಞ ಬ್ರಾಹ್ಮಣರೆಂದೂ ಗುರುತಿಸಿಕೊಳ್ಳುವ ಇವರು ಕರಾವಳಿಗೆ ಗೋವಾ ಮಾರ್ಗವಾಗಿ ಮಹಾರಾಷ್ಟ್ರದಿಂದ ವಲಸೆ ಬಂದು ನೆಲೆ ನಿಂತವರಾಗಿದ್ದಾರೆ. ಇವರ ಮಾತೃ ಭಾಷೆ ಕೊಂಕಣಿ. ವಶಿಷ್ಠ, ವಿಶ್ವಾಮಿತ್ರ, ಅತ್ರಿ ಮೊದಲಾದ ಏಳು ಗೋತ್ರಗಳು ಇದ್ದು, ರೇವಣ್‌ಕರ್, ರಾಯ್ಕರ್, ಸಾನು, ನೀಲಾವರ್ ಮೊದಲಾದುವು ಇವರ ಮನೆತನದ ಹೆಸರುಗಳಾಗಿವೆ. ಇವರ ಜಾತಿಯ ಪುರೋಹಿತರೇ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಇವರು ಉಡುಪಿ ಸೋದೆಮಠದ ಸ್ವಾಮಿಗಳನ್ನು ತಮ್ಮ ಮಠಾಧೀಶರೆಂದು ಒಪ್ಪಿ ನಡೆದುಕೊಳ್ಳುತ್ತಿದ್ದರು. ಇತ್ತೀಚೆಗೆ ಕೆಲವರು ತಮ್ಮದೇ ಆದ ಶೈವಮಠವನ್ನು ಪ್ರತ್ಯೇಕ ಸ್ಥಾಪಿಸಿ, ಅದಕ್ಕೆ ನಡೆದುಕೊಳ್ಳುತ್ತಿದ್ದಾರೆ. ಹಯಗ್ರೀವ ದೇವರನ್ನು ಕುಲದೇವರಾಗಿ ಪೂಜಿಸುವ ಇವರು ಇತರ ಗ್ರಾಮ ದೇವತೆಗಳಿಗೂ, ದೈವಗಳಿಗೂ ನಡೆದುಕೊಳ್ಳುತ್ತಾರೆ. ಉಪಾಕರ್ಮ, ತುಳಸಿಹಬ್ಬ, ಅನಂತನೋಂಪಿ ಮೊದಲಾದವು ಇವರು ನಡೆಸುವ ಕೆಲವು ಹಬ್ಬಹರಿದಿನಗಳಾಗಿವೆ.

**ನಾಯರಿ (ನ್ಯಾರಿ) :** ನಾಯರಿಕೇರಿ ಅಥವಾ ನಾಯರಿಬೆಟ್ಟು ಎಂಬ ಹೆಸರುಗಳು ಜಿಲ್ಲೆಯ ಕೆಲವು ಸ್ಥಳಗಳಿಗೆ ಇರುವುದರಿಂದ ನಾಯರಿ ಸಮುದಾಯದವರು ಬಹು ಹಿಂದಿನಿಂದಲೂ ಈ ಪ್ರದೇಶದಲ್ಲಿ ವಾಸಿಸುತ್ತಿದ್ದರೆಂದು ಊಹಿಸಲಾಗಿದೆ. ಇವರ ಮನೆ ಮಾತು ಕುಂದಾಪುರ ಕನ್ನಡ. ಇವರು ತಮಗೂ ಕೇರಳದ ನಾಯರ್‌ಗಳಿಗೂ ಸಂಬಂಧವಿಲ್ಲವೆಂದು ಹೇಳುತ್ತಾರೆ. ನಾಯರಿಗಳು ಅಳಿಯಕಟ್ಟು ಪದ್ಧತಿಯವರು. ಇವರಲ್ಲಿ ಹಿಂದೆ ತೋಳಾರ, ಹೆಗ್ಡೆ, ದೇವರು, ಕೌಂಚ, ಸಾಲಿ, ಹೋಲಿ, ತೋರಣ ಹಾಗೂ ತಾಯ್‌ಹಟ್ಟಿದ್

ಬಳಿ ಎಂಬ ಬಳಿಗಳಿದ್ದವು. ಈಗ ತೋರಣ ಬಳಿ ಹಾಗೂ ಹೋಲಿ ಬಳಿಗಳು ನಾಮಾವಶೇಷಗಳಾಗಿವೆ ಎನ್ನಲಾಗಿದೆ. ನಿಗದಿತ ಬ್ರಾಹ್ಮಣ ಗುರುಗಳು ನಾಯರಿ ತರುಣರಿಗೆ ಸಾಂಪ್ರದಾಯಿಕವಾಗಿ ಶಸ್ತ್ರಾಸ್ತ್ರ ವಿದ್ಯೆ ಕಲಿಸುವ ರೂಢಿ ಇದೆ. ನಾಯರಿಗಳು ಕುಲದೇವತೆ ಚಂಡಿಕಾ ದುರ್ಗಾಪರಮೇಶ್ವರಿ, ಕಾನವೀರ, ಜಟ್ಟಿಗ, ಮಾಸ್ತಿ ಮೊದಲಾದ ದೇವರು ಹಾಗೂ ದೈವಗಳನ್ನು ಪೂಜಿಸುತ್ತಾರೆ.

**ಪದ್ಮಶಾಲಿ :** ನೇಕಾರಿಕೆಯು ಕುಲಕಸುಬಾದ ಪದ್ಮಶಾಲಿಗಳಿಗೆ ಶೆಟ್ಟಿಗಾರ, ಜಾಡ, ನೇಯ್ಗಿ ಮೊದಲಾದ ಹೆಸರುಗಳೂ ಇವೆ. ಮಡಿಬಟ್ಟೆ ತಯಾರಿಸಿಕೊಡುವ ಕಾರ್ಯಕ್ಕಾಗಿಯೇ ಸುಮಾರು ೭೦೦ ವರ್ಷಗಳ ಹಿಂದೆ ಬಾರ್ಕೂರಿನ ತುಳು ಅರಸರು ಇವರನ್ನು ಹೊರರಾಜ್ಯದಿಂದ ಕರೆಸಿಕೊಂಡರು ಎನ್ನಲಾಗಿದೆ. ಇವರು ಮಕ್ಕಳ ಸಂತಾನಪದ್ಧತಿಯವರು. ಪದ್ಮಶಾಲಿಗಳಲ್ಲಿ ಕರ್ತನಕೋಲ್, ಚೋರಡಾ, ಶಾಮಡಾ, ಕೌಡುಂಜಿ, ಕಡಮನಕೋಲ್, ಸಿರಿನ್ ಹಾಗೂ ಶೆಟ್ಟಿ ಎಂಬ ಏಳು ಬಳಿಗಳಿವೆ. ಒಂದೇ ಬಳಿಯಲ್ಲಿ ವಿವಾಹ ಆಗುವಂತಿಲ್ಲ. ಇವರಲ್ಲಿ ಬಳಕೆಯಲ್ಲಿರುವ ಶಾಲಿ ಎಂಬ ಭಾಷೆ ಕನ್ನಡ, ತಮಿಳು, ಮಲಯಾಳಿ ಮತ್ತು ತೆಲುಗು ಭಾಷಾ ಶಬ್ದಗಳ ಮಿಶ್ರಣವಾಗಿದ್ದು, ಇದಕ್ಕೆ ಪ್ರತ್ಯೇಕ ಲಿಪಿ ಇಲ್ಲ. ಈ ಅಂಶವೂ ಪದ್ಮಶಾಲಿಗಳು ತುಳುನಾಡಿಗೆ ಹೊರಗಿನಿಂದ ಬಂದವರೆಂಬುದನ್ನು ಸೂಚಿಸುತ್ತದೆ. ಪದ್ಮಶಾಲಿಗಳ ವಿವಾಹಾದಿ ಸಾಂಪ್ರದಾಯಿಕ ಕಾರ್ಯಗಳನ್ನು ಅವರ ಕುಲದೇವಸ್ಥಾನದ ಆಡಳಿತ ಮುಖಂಡರ ಮುಂದಾಳ್ತನದಲ್ಲಿ ಪುರೋಹಿತರು ನೆರವೇರಿಸುತ್ತಾರೆ. ವೀರಭದ್ರ ಹಾಗೂ ದುರ್ಗಾಪರಮೇಶ್ವರಿ ಯಾ ಮಹಾಮಾಯಿ ಇವರ ಕುಲದೇವರಾಗಿವೆ. ವಿವಾಹದ ನೆಂಟಸ್ತಿಕೆ ಮಾಡುವಾಗ ವಧು-ವರರ ಕಡೆಯವರು ಗ್ರಾಮದಲ್ಲಿನ ತಮ್ಮ ಸಮಾಜದವರ ದೇವಸ್ಥಾನದಿಂದ ಅನುಮತಿ ಪತ್ರ ಪಡೆಯಬೇಕೆಂಬ ಕಟ್ಟುಪಾಡು ಇವರಲ್ಲಿ ಇದೆ.

**ಪರವ :** ಪರವರು ಭೂತದೈವಗಳ ವೇಷಗಳನ್ನು ಹಾಕುವವರಾಗಿದ್ದಾರೆ. ಕೋಟಿಚೆನ್ನಯರ ಆರಾಧನೆ ಗರಡಿಗಳಲ್ಲಿ ನಡೆದಾಗ ಅಲ್ಲಿ ಕರಂಡೆ ವಾದ್ಯವನ್ನು ನುಡಿಸುತ್ತಾ ಈ ದೈವಗಳನ್ನು ಕುರಿತ ಪಾಡ್ದನಗಳನ್ನು ಹಾಡುತ್ತಾರೆ. ಮಕ್ಕಳಕಟ್ಟು ಸಂಪ್ರದಾಯದ ಇವರಲ್ಲಿ ಬಂಗೇರ, ಸಾಲಿಯಾನ್, ಪುಲ್ಯಟನ್ ಮೊದಲಾದ ಬಳಿಗಳಿವೆ. ಇವರಲ್ಲಿ ನಾಮಕರಣದಂದು ಮಗುವಿನ ಹೆಸರನ್ನು ಮೊದಲು ಕರೆಯುವ ಹಕ್ಕು ಅದರ ಅಜ್ಜ /ಅಜ್ಜಿಯದಾಗಿರುತ್ತದೆ.

**ಪಾಣಾರ :** ಇವರಿಗೆ ನಲ್ಕೆ, ಅಜಿಲ (ಸುಳ್ಯ), ಕೋಪಾಲ (ಕಾಸರಗೋಡು) ಎಂಬ ಹೆಸರುಗಳೂ ಇವೆ. ತುಳುವಿನಲ್ಲಿ ನಲಿಕೆ ಎಂದರೆ ನಾಟ್ಯ ಅಥವಾ ಕುಣಿತ ಎಂದು ಅರ್ಥ. ಭೂತದ ವೇಷ ಹಾಕಿ ಕುಣಿತ ಮಾಡುವುದನ್ನು ಸಾಂಪ್ರದಾಯಿಕ ವೃತ್ತಿ ಮಾಡಿಕೊಂಡಿದ್ದರಿಂದ ಇವರನ್ನು ನಲ್ಕೆಯವರು ಎಂದು ಕರೆಯಲಾಗುತ್ತದೆ. ಕುಕ್ಕೆ, ಚಾಪೆ ಇತ್ಯಾದಿ ಹೆಣೆಯುವುದು, ಮುಟ್ಟಾಳೆ ಮಾಡುವುದು, ಕೃಷಿ ಮತ್ತು ಕೃಷಿ ಕೂಲಿ ಮೊದಲಾದುವು ಇವರು ಜೀವನಕ್ಕಾಗಿ ಅವಲಂಬಿಸಿದ ಇತರ ಕಸುಬುಗಳಾಗಿವೆ. ಮಕ್ಕಳ ಕಟ್ಟು ಪದ್ಧತಿಯ ಇವರಲ್ಲಿ ಸಾಲಿಯಾನ್, ಬಂಗೇರ, ಕಿರೋಡಿಯನ್ನಾಯ, ಕರುಂಬೆರನ್ನಾಯ ಮೊದಲಾದ ಬಳಿಗಳು ಇವೆ. ತುಳುವ ಪದ್ಧತಿಯಂತೆ ಹಬ್ಬ-ಸಂಪ್ರದಾಯಗಳನ್ನು ನಡೆಸುತ್ತಾರೆ. ಮಳೆಗಾಲದಲ್ಲಿ ಮಕ್ಕಳಿಗೆ ಆಟಿಕಳಂಜ, ಕನ್ಯಾಪು ಮೊದಲಾದ ವೇಷಗಳನ್ನು ಹಾಕಿ, ತೆಂಬರೆ ಎಂಬ ಚರ್ಮವಾದ್ಯದೊಂದಿಗೆ ಹಾಡುತ್ತಾ ಮನೆಮನೆಯ ಮುಂದೆ ಕುಣಿತ ಮಾಡುವುದು, ಕೋಲಾಟ ಮಾಡುವುದು ಇವರಲ್ಲಿನ ಒಂದು ವಿಶೇಷವಾಗಿದೆ. ಭೂತ ಕಟ್ಟುವುದು ಇವರ ಪ್ರಧಾನ ಕಸುಬಾಗಿದೆ.

**ಪಂಬದ :** ಸಾಂಪ್ರದಾಯಿಕವಾಗಿ ತುಳುನಾಡಿನಲ್ಲಿ ಪ್ರಸಿದ್ಧವಾದ ಉಳ್ಳಾಕುಲು, ಅತ್ತಾವರದೆಯ್ಯಂಗಳು, ಕಿನ್ನಿಮಾಣಿ-ಪೂಮಾಣಿ ಮೊದಲಾದ ಅರಸುದೈವಗಳ (ಭೂತಗಳ) ವೇಷಹಾಕಿ ನರ್ತಿಸುವವರು ಪಂಬದ ಕಲಾವಿದರು. ಪಂಬದರಲ್ಲಿ ಬೈಲ ಪಂಬದ ಹಾಗೂ ಬಡ್ಯೆ (ಬಡಕಾಯಿ) ಪಂಬದರೆಂಬ ಪಂಗಡಗಳಿವೆ. ಇವರು ಕೃಷಿ ಹಾಗೂ ಕೃಷಿಕೂಲಿಯನ್ನು ಮುಖ್ಯವಾಗಿ ಅವಲಂಬಿಸಿದ್ದು, ಇವರ ಮಾತೃಭಾಷೆ ತುಳು. ಸಾಂಪ್ರದಾಯಿಕವಾಗಿ ಅಳಿಯ ಸಂತಾನ ಪದ್ಧತಿಯವರಾಗಿದ್ದಾರೆ. ಪಂಬಾದೇವಿಯು ತಮ್ಮ ಪೂರ್ವಜಳೆಂಬ ನಂಬಿಕೆ ಪಂಬದರದ್ದಾಗಿದೆ. ಇವರು ದೈವಾದಿಗರು ಎಂಬ ಜಾತಿ ಸಂಘವನ್ನು ಕಟ್ಟಿಕೊಂಡಿದ್ದಾರೆ.

**ಬಂಟ :** ಇವರ ಮುಖ್ಯ ಕುಲವೃತ್ತಿ ಒಕ್ಕಲುತನ ಅಥವಾ ವ್ಯವಸಾಯ. ಆದ್ದರಿಂದ ಇವರನ್ನು ಒಕ್ಕಲಕುಲು ಎಂದು ಕರೆಯುತ್ತಿದ್ದರು. ಪ್ರವೃತ್ತಿಯಲ್ಲಿ ಯೋಧ(ಭಟ)ರಾಗಿಯೂ ಕಾರ್ಯನಿರ್ವಹಿಸಿದುದರಿಂದ ಈ ಸಮುದಾಯಕ್ಕೆ ಬಂಟರೆಂಬ ವಿಶೇಷ ಹೆಸರು ಬಂದಿದೆ. ಇವರು ಅರಸರಾಗಿ ಆಡಳಿತ ನಡೆಸಿದ್ದೂ ಉಂಟು. ಕುಂದಾಪುರ ಭಾಗದಲ್ಲಿ ಕನ್ನಡ ಮಾತನಾಡುವ ಬಂಟರನ್ನು ನಾಡವರೆಂದೂ, ತುಳು ಮಾತನಾಡುವವರನ್ನು ಬಂಟರೆಂದೂ ಕರೆಯುತ್ತಾರೆ. ಬಂಟರು ತುಳುನಾಡಿನಲ್ಲಿ ಬಹು ಪ್ರಭಾವಶಾಲಿ ಸಮುದಾಯದವರಾಗಿದ್ದರೆಂದು ಇತಿಹಾಸಕಾರ ಗಣಪತಿರಾವ್ ಐಗಳ್ ಹೇಳಿದ್ದಾರೆ. ಆಳ್ವ, ರೈ, ಶೆಟ್ಟಿ, ಚೌಟ, ಬಲ್ಲಾಳ ಮೊದಲಾದ ೯೩ ಕುಲನಾಮಗಳು ಇವರಲ್ಲಿವೆ. ಬಂಗೇರನ್ನಾಯ, ಕುಂಡಾರನ್ನ ಮೊದಲಾದ ೫೨ ಬರಿ(ಳಿ)ಗಳಿದ್ದು, ಒಂದೇ ಬಳಿಯಲ್ಲಿ ವಿವಾಹ ನಿಷಿದ್ಧವಾಗಿದೆ. ಬಂಟರದ್ದು ಅಳಿಯಕಟ್ಟು ಪದ್ಧತಿಯಾಗಿದೆ. ಇವರ ಕುಲದ ಮುಖ್ಯಸ್ಥನನ್ನು ಗುರಿಕಾರ ಎನ್ನುತ್ತಾರೆ. ಗುರಿಕಾರ ವಾಸಿಸುವ ಮನೆಗೆ ಗುತ್ತು, ಬೀರು, ಬರ್ಕೆ, ಪರಾರಿ, ಆರಂತಡ ಇತ್ಯಾದಿ ಹೆಸರುಗಳಿವೆ. ಈ ಮನೆಗಳು ಭವ್ಯವಾಗಿದ್ದು, ಸಾಂಪ್ರಾದಾಯಿಕ ಕೆತ್ತನೆ ಕೆಲಸಗಳಿಂದ ಕೂಡಿವೆ. ಬಂಟರಲ್ಲಿ ಕೂಸು ಹುಟ್ಟಿದಾಗ ೧೦ ದಿನಗಳ ಅಮೆ (ಸೂತಕ) ಆಚರಣೆ ಮಾಡುತ್ತಾರೆ. ಮೈನೆರೆದ ಹುಡುಗಿಗೆ ನಾಲ್ಕನೇ ದಿನ ಶುದ್ಧಿ ಸ್ನಾನವಾದಾಗ 'ಮದುಮಗಳ ಮದುವೆ' ಎಂಬ ಶಾಸ್ತ್ರ ಮಾಡುತ್ತಾರೆ. ಇವರಲ್ಲಿ ವಿವಾಹಾದಿ ಶಾಸ್ತ್ರಗಳು ಕುಲದ ಹಿರಿಯರ ಮಾರ್ಗದರ್ಶನದಲ್ಲಿ ಸಾಂಪ್ರದಾಯಿಕವಾಗಿ ನಡೆಯುತ್ತಿದ್ದವು. ಬಂಟರಲ್ಲಿಯೂ ಪುನರ್ವಿವಾಹಕ್ಕೆ ಅವಕಾಶವಿದೆ. ಇವರು ವೈದಿಕ ದೇವರುಗಳನ್ನೂ ಸ್ಥಳೀಯದೈವಗಳನ್ನೂ ಸಮಾನ ಭಕ್ತಿಯಿಂದ ಪೂಜಿಸುತ್ತಾರೆ. ಇವರ ಗುತ್ತಿನ ಮನೆಗಳಲ್ಲಿ ಭೂತದ ಚಾವಡಿ ಅಥವಾ ಭೂತದ ಮಂಚ ಸಾಮಾನ್ಯವಾಗಿ ಇರುತ್ತದೆ.

**ಬಾಕುಡ :** ಕುಂದಾಪುರ ಭಾಗದಲ್ಲಿ ಬತ್ತಡ ಅಥವಾ ಬಥದ ಎಂದು ಕರೆಯುವ ಸಮುದಾಯದವರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐಪಟ್ಟು, ಪ್ರಾಕೃತ ಅಥವಾ ಬಾಕುಡರೆಂಬ ಹೆಸರುಗಳಿವೆ. ಮೈದಾನ ಭೂಮಿಯಲ್ಲಿ ಕೃಷಿಕೂಲಿ ಕಾರ್ಯ ಮಾಡುತ್ತಿದ್ದುದರಿಂದ ಬಯಲು ಬಾಕುಡರೆಂಬ ಹೆಸರೂ ಬಂದಿದೆ ಎನ್ನಲಾಗಿದೆ. ಇವರ ಮನೆ ಮಾತು ತುಳು. ವ್ಯಾವಹಾರಿಕ ಭಾಷೆ ಕನ್ನಡ. ಕೊಮರಾಯ ದೈವವನ್ನು ವಿಶೇಷವಾಗಿ ಆರಾಧಿಸುತ್ತಾರೆ. ಮಾತೃಕುಟುಂಬ ಪದ್ಧತಿಯವರಾದ ಇವರಲ್ಲಿ ಹೊಲಸ, ಬೆಲ್ಲ, ಹುಲಿ, ಹರಿಣ, ಮೈಯ್ಯ ಇತ್ಯಾದಿ ಬೆಡಗುಗಳಿವೆ. ಬುಕಾನನ್ ಇವರನ್ನು Bacadaru, Batadaru ಎಂದು ಹೆಸರಿಸಿದ್ದಾನೆ. ತುಳುನಾಡಿನ ಉತ್ತರಕ್ಕಿರುವ ಇವರು ಕನ್ನಡ ಮಾತನಾಡುತ್ತಾರೆ; ಜಾತಿಶ್ರೇಣಿಯಲ್ಲಿ ಒಂದೇ ಆದರೂ ಒಬ್ಬರೊಂದಿಗೆ ಒಬ್ಬರು ಸಂಬಂಧ ಬೆಳೆಸುವುದಿಲ್ಲ; ದಣಿಗಳಲ್ಲಿ ಕೆಲಸ ಮಾಡುವ ಇವರು ಕೆಲಸವಿಲ್ಲದಾಗ ಬುಟ್ಟಿ ಹೆಣೆಯುವುದು ಇತ್ಯಾದಿ ಮಾಡುತ್ತಾರೆ. ಇವರಿಗೆ ಜಾತಿ ಪುರೋಹಿತನಾಗಲೀ, ನಾಯಕನಾಗಲೀ ಇಲ್ಲ; ಕೆಲವು ಪ್ರಮುಖರ ಸಮ್ಮುಖದಲ್ಲಿ ನ್ಯಾಯತೀರ್ಮಾನ ಮಾಡಿಕೊಳ್ಳುತ್ತಾರೆ. ಜಾತಿಯಿಂದ ಯಾರಿಗೂ ಬಹಿಷ್ಕಾರ ಹಾಕುವುದಿಲ್ಲ – ಎಂಬ ಅಂಶಗಳನ್ನೂ ಬುಕಾನನ್ ದಾಖಲಿಸಿದ್ದಾನೆ.

**ಬ್ರಾಹ್ಮಣ :** ಕರಾವಳಿಯ ಬ್ರಾಹ್ಮಣರಲ್ಲಿ ಹವ್ಯಕ, ಶಿವಳ್ಳಿ, ಕೋಟ, ಕೋಟೇಶ್ವರ, ಸ್ಥಾನಿಕ, ಕರಾಡ, ಚಿತ್ಪಾವನ, ದೇಶಸ್ಥ ಮೊದಲಾದ ವರ್ಗಗಳಿವೆ. ಕರಾಡ, ಸಾರಸ್ವತ, ಚಿತ್ಪಾವನ ಮೊದಲಾದವರು ಸುಮಾರು ೫೦೦ ವರ್ಷಗಳಿಂದ ಈಚೆಗೆ ಮಹಾರಾಷ್ಟ್ರ ಭಾಗದಿಂದ ಕರಾವಳಿ ಭಾಗಕ್ಕೆ ವಲಸೆ ಬಂದವರಾಗಿದ್ದಾರೆ. ಅಹಿಕ್ಷೇತ್ರ (ಅಹಿಚ್ಛತ್ರ)ದಿಂದ ಬಂದ ಹವಿಕರಲ್ಲಿ ಕೆಲವರು ಕುಂದಾಪುರ ತಾಲೂಕಿನ ಹಳ್ಳಿಹೊಳೆ, ಅಜ್ರಿ, ಹೊಸಂಗಡಿ, ಉಳ್ಳೂರು, ಸಿದ್ಧಾಪುರ ಎಂಬ ಐದು ಹಳ್ಳಿಗಳಲ್ಲಿ ನೆಲೆನಿಂತದ್ದರಿಂದ ಅವರಿಗೆ ಪಂಚಗ್ರಾಮ ಬ್ರಾಹ್ಮಣರೆಂಬ ಹೆಸರೂ ಇದೆ. ಸ್ಮಾರ್ತ ಸಂಪ್ರದಾಯದ ಇವರು ಚಾತ್ರ, ಕನ್ನಂತ, ಮಿತ್ಯಂತ ಮೊದಲಾದ ಉಪನಾಮಗಳನ್ನು ಇಟ್ಟುಕೊಳ್ಳುವ ಪದ್ಧತಿ ಇದೆ. ೧೪ ಗ್ರಾಮಗಳ ಒಂದು ಕೂಟಕ್ಕೆ ಸೇರಿದವರನ್ನು ಕೂಟ ಅಥವಾ ಕೋಟ ಬ್ರಾಹ್ಮಣರೆಂದು ಗುರುತಿಸುವುದು ರೂಢಿಯಲ್ಲಿ ಬಂದಿದೆ. ಕಾರಂತ, ಹೆಬ್ಬಾರ, ತುಂಗ, ನಾವಡ, ಹಂದೆ, ಬಾಸ್ರಿ, ಹೊಳ್ಳ, ಮಯ್ಯ ಎಂಬುವು ಇವರ ಉಪನಾಮಗಳಾಗಿವೆ. ಶಿವಳ್ಳಿ ಬ್ರಾಹ್ಮಣರು ಉಡುಪಿ ಜಿಲ್ಲೆಯ ಶಿವಳ್ಳಿ ಗ್ರಾಮದಲ್ಲಿ ಮೊದಲು ನೆಲೆಗೊಂಡವರು. ಇವರಲ್ಲಿ ಶಿವಳ್ಳಿ, ನಾಡಶಿವಳ್ಳಿ, ಕಂದಾವರ ಎಂಬ

ಮೂರು ಪಂಗಡದವರಿದ್ದಾರೆ. ಸ್ಥಾನಿಕ ಬ್ರಾಹಣರು ಶೈವಸಂಪ್ರದಾಯದವರಾಗಿದ್ದಾರೆ. ಕಾರ್ಕಳ ತಾಲೂಕಿನ ಮಾಳ ಮತ್ತು ದುರ್ಗ ಪ್ರದೇಶಗಳಲ್ಲಿ ಚಿತ್ಪಾವನರು ಅಧಿಕ ಸಂಖ್ಯೆಗಳಲ್ಲಿ ಕಂಡುಬರುತ್ತಾರೆ ಇವರು ಹೆಚ್ಚಾಗಿ ಅಡಿಕೆ ಕೃಷಿಯನ್ನು ಅನುಸರಿಸುತ್ತಾರೆ. ಹವಿಕರು ಮೂಲತ: ಕೃಷಿಕ ವೃತ್ತಿಯವರು. ಕೆಲವರು ಹೋಟೆಲ್, ಬ್ಯಾಂಕ್, ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿದ್ದಾರೆ. ಕೆಲವರು ಪೌರೋಹಿತ್ಯ ಹಾಗೂ ಅರ್ಚಕ ವೃತ್ತಿಯನ್ನು ಅವಲಂಬಿಸಿರುವುದೂ ಉಂಟು. ಬ್ರಾಹ್ಮಣರಲ್ಲಿ ಅತ್ರಿ, ಕಶ್ಯಪ, ಭಾರದ್ವಾಜ ಮೊದಲಾದ ಏಳು ಗೋತ್ರಗಳಿವೆ (ಕೋಟ ಬ್ರಾಹ್ಮಣರಲ್ಲಿ ಐದೇ ಗೋತ್ರಗಳು). ಇವರಲ್ಲಿ ಸಗೋತ್ರ ವಿವಾಹ ನಿಷಿದ್ಧವಾಗಿದೆ. ಮೊದಲು ಸ್ಮಾರ್ತರಾಗಿದ್ದ ತ್ರಿಮತಸ್ಥರಲ್ಲಿ ಕೆಲವರು ಮಧ್ವಾಚಾರ್ಯರ ದ್ವೈತ ಮತಾವಲಂಬಿಗಳಾಗುವ ಮೂಲಕ ವೈಷ್ಣವರಾದರು. ಈ ಎಲ್ಲಾ ವರ್ಗಗಳಿಗೂ ತಮ್ಮದೇ ಆದ ಗುರುಮಠ, ಗುರುಪರಂಪರೆಗಳಿವೆ (ಕೋಟ ಬ್ರಾಹ್ಮಣರಿಗೆ ಪ್ರತ್ಯೇಕ ಗುರುಮಠವಿಲ್ಲ. ಉಗ್ರನರಸಿಂಹ ಕುಲದೇವರನ್ನೇ ಗುರುವೆಂದು ನಂಬಿದ್ದಾರೆ). ಇವರು ತಮ್ಮ ಪುರೋಹಿತರ ಮಾರ್ಗದರ್ಶನದಲ್ಲಿ ಉಪನಯನ, ವಿವಾಹಾದಿ ಪೂರ್ವ ಸಂಸ್ಕಾರ ಹಾಗೂ ಶವಸಂಸ್ಕಾರ, ಶ್ರಾದ್ಧ ಇತ್ಯಾದಿ ಅಪರ ಸಂಸ್ಕಾರಗಳನ್ನು ನಡೆಸುತ್ತಾರೆ.

**ಬಿಲ್ಲವ :** ಬಿಲ್ಲವರಿಗೆ ಪೂಜಾರಿ, ಬಿರುವ, ಬೈದ್ಯ ಎಂಬ ಹೆಸರೂ ಇವೆ. ಪ್ರಾಚೀನ ಕಾಲದಲ್ಲಿ ಬಿಲ್ಲು ಹಿಡಿದು ಬೇಟೆಯಾಡುತ್ತಿದ್ದುದರಿಂದ ಬಿಲ್ಲವರೆಂದೂ, ದೈವಗಳ ಪೂಜಾರಿಗಳಾದುದರಿಂದ ಪೂಜಾರಿಗಳೆಂದೂ ಹೆಸರು ಬಂದಿದೆ. ತೆಂಗು ಮತ್ತು ತಾಳೆಮರಗಳಿಂದ ಸೇಂದಿ ಇಳಿಸುವುದು, ಮೂರ್ತೆದಾರಿಕೆ, ಓಲೆಬೆಲ್ಲ ಮಾಡುವುದು ಇವರ ಸಾಂಪ್ರದಾಯಿಕ ವೃತ್ತಿಯಾಗಿದ್ದವು. ಕೋಟ್ಯಾನ್, ಬಂಗೇರ, ಸುವರ್ಣ, ಕುಕ್ಯಾನ್, ಪೆರ್ಗಡೆ, ಕರ್ಕೇರ, ಗುಜ್ಜೆಟ್ಟಿ, ಬುನ್ನಾನ್, ಬಾಗೆಟ್ಟಿ, ಅಂಚನ್, ಸಾಲಿಯಾನ್, ಅಮೀನ್, ಜತ್ತನ್ ಮೊದಲಾದುವು ಬಿಲ್ಲವರಲ್ಲಿನ ಬಳಿಗಳಾಗಿದ್ದು, ಒಂದೇ ಬಳಿಯಲ್ಲಿ ವಿವಾಹ ಸಂಬಂಧ ನಿಷಿದ್ಧವಾಗಿದೆ. ಇವರು ಅಳಿಯಕಟ್ಟು ಪದ್ಧತಿಯವರು. ಹಿಂದೆ ಜಾತಿ ಪಂಚಾಯಿತಿಯು ಸಕ್ರಿಯವಾಗಿದ್ದಿತು; ಜಾತಿಯ ಗುರಿಕಾರರ ಮಾರ್ಗದರ್ಶನದಲ್ಲಿಯೇ; ವಿವಾಹಾದಿ ಪದ್ಧತಿಗಳು ನೆರವೇರುತ್ತಿದ್ದವು. ಈಗ ಇವರದೇ ಸಮುದಾಯದ ಕೆಲವರು ವೈದಿಕ ಮಂತ್ರಾದಿಗಳನ್ನು ಅಭ್ಯಾಸ ಮಾಡಿ ತಮ್ಮ ಸಮಾಜದವರ ಶುಭಶೋಭನಾದಿಗಳನ್ನು ನಡೆಸಿಕೊಡುವುದೂ ಉಂಟು. ಶವವನ್ನು ಹೂಳುವುದು ಹಿಂದಿನ ಸಂಪ್ರದಾಯವಾಗಿದ್ದಿತು; ಈಗ ಸುಡುತ್ತಾರೆ. ಕೋಟಿ–ಚೆನ್ನಯ ಹಾಗೂ ಕಾಂತಾಬಾರೆ, ಬೂದಬಾರೆ ಬಿಲ್ಲವ ಸಮುದಾಯದ ಸಾಂಸ್ಕೃತಿಕ ವೀರರೂ, ಆರಾಧನೀಯರೂ ಆಗಿದ್ದಾರೆ. ಈಚಿನ ದಿನಗಳಲ್ಲಿ ನಾರಾಯಣ ಗುರು ಅವರನ್ನು ಇವರು ವಿಶೇಷವಾಗಿ ಆರಾಧಿಸುತ್ತಿದ್ದಾರೆ.

**ಬೋವಿ :** ಮೋಯರ್ ಎಂಬ ಹೆಸರೂ ಹೊಂದಿರುವ ಬೋವಿಗಳು ಅಬ್ಬಕ್ಕರಾಣಿಯ ಕಾಲದಲ್ಲಿ ಪಲ್ಲಕ್ಕಿ ಹೊರುವ ಕಾರ್ಯಮಾಡುತ್ತಿದ್ದರಂತೆ. ಇವರು ಮೀನುಗಾರ ವೃತ್ತಿಯವರು. ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಕುಲದ ಮುಖ್ಯಸ್ಥನನ್ನು ಗುರಿಕಾರ ಎನ್ನುತ್ತಾರೆ. ಬಯಕರ ಮೋಯ, ಉಳ್ಳಾಡ, ಊನುಮೋಯ, ಎರೋಡಿ, ಕೊಡುಕಾಟ್, ಬಿಲಿಮಾತ್, ಚಕ್ಕಕೂಟ, ಚೆರೂಪುಮೋಯ, ಕರಿಪತ್ ಕಿರಿಯ ಇತ್ಯಾದಿ ೪೪ ಬಳಿಗಳು ಇವರಲ್ಲಿವೆ. ಒಂದೇ ಬಳಿಯಲ್ಲಿ ವಿವಾಹ ಸಂಬಂಧ ಮಾಡುವುದು ನಿಷಿದ್ಧವಾಗಿದೆ. ಇವರ ಮಾತೃಭಾಷೆ ಮೋಯ (ಮಲಯಾಳ). ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ಅಮೆ ಆಚರಿಸುತ್ತಾರೆ. ಗುರಿಕಾರರ ಮಾರ್ಗದರ್ಶನದಲ್ಲಿ ವಿವಾಹ ಮತ್ತಿತರ ಸಂಪ್ರದಾಯಗಳು ನೆರವೇರುತ್ತವೆ. ಶವಸಂಸ್ಕಾರದ ಸಂದರ್ಭದಲ್ಲಿ ಮೃತನು ಬಳಸುತ್ತಿದ್ದ ಕೆಲವು ವಸ್ತುಗಳನ್ನು ಶವದೊಂದಿಗೆ ಇರಿಸುವ ಪದ್ಧತಿ ಬೋವಿಗಳಲ್ಲಿಯೂ ರೂಢಿಯಲ್ಲಿದೆ. ಇವರು ಭಗವತಿಯನ್ನು ವಿಶೇಷವಾಗಿ ಆರಾಧಿಸುತ್ತಾರೆ.

**ಭೈರ :** ಇವರು ಘಟ್ಟ ಪ್ರದೇಶಗಳಿಂದ ತುಳುನಾಡಿಗೆ ವಲಸೆ ಬಂದು ನೆಲೆನಿಂತವರು. ಬಿದಿರು, ಬೆತ್ತಗಳಿಂದ ಬುಟ್ಟಿ ಹೆಣೆಯುವುದು, ಜೇನು ಮತ್ತಿತರ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವುದು, ಸುಣ್ಣದಕಲ್ಲು ಸುಡುವುದು ಇವರ ಮೂಲ ವೃತ್ತಿಯಾಗಿದ್ದವು. ಕಾಲಭೈರವನನ್ನು ಇವರು ವಿಶೇಷವಾಗಿ ಆರಾಧಿಸುತ್ತಾರೆ. ಇವರ ಕನ್ನಡವು ವಿಶಿಷ್ಟವಾದ ಆಡು ಭಾಷೆಯಾಗಿದೆ. ಭೈರರಲ್ಲಿ ಕುಂಬ್ರಿ, ಒಟ್ಟೆಮಂಡ್ರ (ಒತ್ತೆ ಮುಂಡೂರು),

ಕಳ್ಯಾರು, ಬಾಳೆಪುಣಿ, ಕಲ್ಲಪಾಪು, ಚಾಳ್ಯ, ಗುಂಡ, ನೆಕ್ರಾಜೆ, ಪೆರಾರ್ತೆ ಬೈಲು, ಬೆಳ್ಳಾರೆ, ಪೆರ್ವಾಯ, ನಂದರು ಹಾಗೂ ಕನ್ನಡ ಎಂಬ ೧೩ ಬಳಿಗಳಿವೆ. ಇವರಲ್ಲಿ ಮುಖಂಡನು ತನ್ನ ನೆರವಿಗಾಗಿ ಗುರ್ಕಾರ ಮತ್ತು ಬುದ್ಧಿವಂತ, ಸಹಾಯಕ ಬುದ್ಧಿವಂತ (ಒತ್ತುಗೌಡ), ಮೊಕರಿ (ಸಭೆಯ ವಿಚಾರ ತಿಳಿಸುವವ)ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಒಕ್ಕಲನ್ನು ಅನ್ವಯಿಸಿ ೯ ಒಕ್ಕಲು ಗುರ್ಕಾರ, ೧೮ ಒಕ್ಕಲ ಗುರ್ಕಾರ, ಗುಡಿಗುರ್ಕಾರ, ಪೆರ್ವಾಯ ಗುರ್ಕಾರ ಎಂದೂ ವಿಭಾಗಿಸಲಾಗಿರುತ್ತದೆ.

**ಭಂಡಾರಿ :** ಕೇಶಕರ್ತನ ಕಾರ್ಯಕ್ಕೆ ಅಗತ್ಯವಾದ ಕತ್ತಿ, ಕತ್ತರಿ ಇತ್ಯಾದಿಗಳನ್ನಿಡುವ ಪೆಟ್ಟಿಗೆಗೆ ಭಂಡಾರ ಎಂಬ ಹೆಸರಿದೆ. ಅಂತಹ ಭಂಡಾರ ಹಿಡಿದವನಿಗೆ ಭಂಡಾರಿ ಎಂಬ ಹೆಸರಾಗಿದೆ. ಕ್ಷೌರ ಮಾಡುವುದು ಇವರ ಕುಲವೃತ್ತಿಯಾದ್ದರಿಂದ ಇವರಿಗೆ ಕ್ಷೌರಿಕ ಎಂಬ ಹೆಸರೂ ಇದೆ.ಅಳಿಯ ಸಂತಾನ ಪದ್ಧತಿಯ ಇವರಲ್ಲಿ ಗುಜ್ಜರನ್ನಾಯ, ಬಂಗಾರನ್ನಾಯ, ಕುಂದರನ್ನಾಯ, ಉಪ್ಪರನ್ನಾಯ ಮೊದಲಾದ ಬಳಿಗಳಿವೆ. ಅಳಿಯಕಟ್ಟಿಗೆ ಸಂಬಂಧಿಸಿದ ಇತರ ಜಾತಿಯವರು ಕ್ಷೌರಿಕರು ಹಾಗೂ ಅಗಸರನ್ನು ತಮ್ಮ ಶುಭಾಶುಭ ಕಾರ್ಯಗಳಲ್ಲಿನ ಶುದ್ಧತೆಯ ಆಚರಣೆಗಾಗಿ ಕರೆಸಿಕೊಳ್ಳುವ ಪದ್ಧತಿ ಇದೆ. ತೆನೆಹಬ್ಬ, ಕೆಡ್ಡಸ, ದೀಪಾವಳಿ, ಯುಗಾದಿ ಮೊದಲಾದ ಹಬ್ಬಗಳನ್ನು ಭಂಡಾರಿ ಸಮುದಾಯದವರೂ ಆಚರಿಸುತ್ತಾರೆ. ಇವರಲ್ಲಿ ಶವಕ್ಕೆ ಅಗ್ನಿಸಂಸ್ಕಾರ ಮಾಡುವ ಪದ್ಧತಿ ಇದೆ. ಊರಿನ ಇತರರು ಪೂಜಿಸುವ ದೇವರು ಹಾಗೂ ದೈವಗಳಿಗೇ ಇವರೂ ನಡೆದುಕೊಳ್ಳುತ್ತಾರೆ.

**ಮರಾಠ :** ಮರಾಠ ಅಥವಾ ಮರಾಠ ಕ್ಷತ್ರಿಯರು ಮಹಾರಾಷ್ಟ್ರದಿಂದ ಬೇಕಲ ಕೋಟೆಗೆ, ಬಳಿಕ ತುಳುನಾಡಿಗೆ ಬಂದು ನೆಲೆಸಿದವರು. ಸಾಂಪ್ರದಾಯಿಕವಾಗಿ ಇವರು ಕೃಷಿ ಕಸುಬು ಮಾಡುವವರು. ಪವಾರ್, ಬಹುಮಾನ್, ಲಾಡ್, ಬೋಂಸ್ಲೆ, ಚವ್ಹಾಣ ಮೊದಲಾದ ಉಪನಾಮಗಳು ಇವರಲ್ಲಿ ಇವೆ. ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇವರಲ್ಲಿ ಮರಾಠಿ ಮಾತನಾಡುವ ಮರಾಠಿ ಮತ್ತು ಕನ್ನಡ ಮಾತನಾಡುವ ಆರ್ಯ ಮರಾಠ ಎಂಬ ಎರಡು ಪ್ರಭೇದಗಳಿವೆ. ಮರಾಠರಲ್ಲಿ ಮಗು ಹುಟ್ಟಿದ ೧೧ ದಿನಕ್ಕೆ ದೇವಸ್ಥಾನದಿಂದ ತಂದ ತೀರ್ಥವನ್ನು ಸ್ವೀಕರಿಸಿ, ಮಡಿವಾಳ್ತಿಯು ತಂದುಕೊಟ್ಟ ಮಡಿವಸ್ತ್ರ ಮುಟ್ಟುವ ಮೂಲಕ ಶುದ್ಧವಾಗುವ ಕ್ರಮ ಅನುಸರಿಸುತ್ತಾರೆ. ಋತುಮತಿಯಾದಾಕೆಯನ್ನು ಮೂರು ದಿನ ಪ್ರತ್ಯೇಕ ಇರಿಸುತ್ತಾರೆ. ವೈದಿಕ ಸಂಪ್ರದಾಯದಂತೆ ವಿವಾಹ, ಶವಸಂಸ್ಕಾರ ವಿಧಿಗಳು ನಡೆಯುತ್ತವೆ. ತಪ್ಪು ಮಾಡಿದವರಿಗೆ ವಿಧಿಸುತ್ತಿದ್ದ 'ಸುಡುಸುದ್ಧ' ಕ್ರಮ ಇವರಲ್ಲಿಯೂ ಇದ್ದಿತು. ಮರಾಠಿ ಕ್ಷತ್ರಿಯರು ಇತರ ಹಿಂದೂಗಳು ಆಚರಿಸುವ ಯುಗಾದಿ, ದೀಪಾವಳಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಪಿತೃಪಕ್ಷದಲ್ಲಿ ಪುರೋಹಿತರಿಂದ ಹೋಮ ಇತ್ಯಾದಿ ಮಾಡಿಸುತ್ತಾರೆ. ಅಂಬಾ ಭವಾನಿ ಇವರ ಕುಲದೇವತೆ. ಗುಳಿಗ, ನಾಗ ಮತ್ತಿತರ ದೈವಗಳಿಗೂ ಇವರು ನಡೆದುಕೊಳ್ಳುತ್ತಾರೆ.

**ಮಲೆಕುಡಿಯ :** ಮಲೆಕುಡಿಯರು ಮೂಲತ: ಮಲೆಗಳನ್ನು ಆಶ್ರಯಿಸಿ ಬದುಕುತ್ತಿದ್ದವರು. ಕೆಲವು ದಶಕಗಳಿಂದೀಚೆಗೆ ಕಾಡು ಬಿಟ್ಟು ನಾಡಿಗರಾಗಿದ್ದಾರೆ. ಅರಣ್ಯ ಪರಿಸರದಲ್ಲಿ ಬೇಟೆ ಆಡಿ ಹಾಗೂ ಗೆಡ್ಡೆಗೆಣಸು ತಿಂದು ಜೀವನ ನಡೆಸುತ್ತಿದ್ದ ಇವರು ಹೊರಗಿನ ಜನಸಂಪರ್ಕ ಆದಮೇಲೆ ಬೆತ್ತದ ಹೆಣಿಗೆ, ಕಾಡುತ್ಪನ್ನಗಳ ಸಂಗ್ರಹದ ಮಾರಾಟ, ಕೃಷಿ, ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಇತ್ಯಾದಿಗಳಲ್ಲಿ ತೊಡಗಿಕೊಂಡಿದ್ದಾರೆ. ಬಂಗೇರ, ಬಳಸ್ಯರೆ, ಮೂಲ್ಯರೆ, ಗುಂಡೇರಿ ಮೊದಲಾದ ಬರಿ(ಳಿ)ಗಳು ಇವರಲ್ಲಿ ಇದ್ದು, ಒಂದೇ ಬರಿಯಲ್ಲಿ ವಿವಾಹ ನಿಷಿದ್ಧವಾಗಿದೆ. ಇವರು ಅಳಿಯಕಟ್ಟು ಸಂಪ್ರದಾಯದವರು. ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಮುಖ್ಯಸ್ಥನನ್ನು ಗೌಡ್ರು ಎಂದು ಕರೆಯುತ್ತಾರೆ. ಪರಮೇಶ್ವರನು ತಮ್ಮ ಕುಲದೇವರು ಎಂದು ನಂಬಿರುವ ಮಲೆಕುಡಿಯರು ಪಂಜುರ್ಲಿ, ವರ್ನಾರಪಂಜುರ್ಲಿ, ಕಲ್ಲುರ್ಟಿ, ಗುಳಿಕ ಮೊದಲಾದ ಭೂತದೈವಗಳನ್ನೂ ಆರಾಧಿಸುತ್ತಾರೆ. ತಿರುಪತಿಯ ಭಕ್ತರೂ ಆದ ಇವರು ದಾಸಯ್ಯನನ್ನು ಕರೆಸಿ, ವೆಂಕಟರಮಣನನ್ನು ಪೂಜಿಸುವ ಹರ್‌ಸಾಯವನ್ನೂ (ಹರಿಸೇವೆ) ಮಾಡುತ್ತಾರೆ.

**ಮುಗೇರ :** ತುಳುನಾಡಿನಾದ್ಯಂತ ಕಾಣಬರುವ ಮುಗೇರರು ಹಿಂದೆ ಊರ ಹೊರಗೆ, ಕಾಡಿನ ಪರಿಸರದ ಗುಡ್ಡದ ಬದಿಗಳಲ್ಲಿ ವಾಸಿಸುತ್ತಿದ್ದವರು. ಬೇಟೆ ಆಡುವುದು, ಕೃಷಿ ಕೂಲಿ ಮಾಡುವುದು ಮೊದಲಾದವು

ಇವರ ಮುಖ್ಯ ವೃತ್ತಿಗಳಾಗಿದ್ದವು. ಇವರ ಮಾತೃಭಾಷೆ ತುಳು. ಮುಗೇರರನ್ನು ಪ್ರಾದೇಶಿಕವಾಗಿ ಮೇರ, ಮುಗ್ಗೇರ, ಮೊಗೇರ, ಮುಗರ ಮೊದಲಾದ ಹೆಸರುಗಳಿಂದಲೂ ಗುರುತಿಸುತ್ತಾರೆ. ಮುಗೇರ ಜಾತಿಯವರಲ್ಲಿ ಹುಟ್ಟುವ ಅವಳಿಗಳಿಗೆ ಸಾಮಾನ್ಯವಾಗಿ ಮುದ್ದ–ಕಳಲ ಎಂಬ ಹೆಸರಿಡುವುದು ಪದ್ಧತಿಯಾಗಿದೆ. ಮುಗೇರರಲ್ಲಿ ಅರ್ಪುದನ್ನ, ಉಪ್ಪೆನ್ನ, ಎರದಣ್ಣ, ಕೊರ್ಮೆರ್, ಬಂಗೇರ, ಮಂಜದಣ್ಣ, ಮಾರದಣ್ಣ, ಮರ್ದೆರ್ ಮೊದಲಾದ ಬಳಿಗಳಿವೆ. ಇವರು ಅಳಿಯಕಟ್ಟು ಪದ್ಧತಿಯವರು.ಸಾಂಸ್ಕೃತಿಕ ವೀರರಾದ ಮುಗೇರ್ಲು (ಮುದ್ದುಕ್ಕಳ) ದೈವಗಳನ್ನು ಇವರು ತಮ್ಮ ಹಿರಿಯರೆಂದು ನಂಬಿ, ಅವರ ಪ್ರತೀಕವಾಗಿ ಬಿಲ್ಲು–ಬಾಣ ಹಾಗೂ ಕತ್ತಿಗಳನ್ನು ಇಟ್ಟು ಪೂಜಿಸುತ್ತಾರೆ. ಮುಗೇರ್ಲ ಕೋಲವನ್ನು ವಾರ್ಷಿಕವಾಗಿ ಆಚರಿಸುತ್ತಾರೆ.

**ಮೇರ :** ಬುಟ್ಟಿ ಹೆಣೆಯುವುದು, ಕೃಷಿಕೂಲಿ ಮೊದಲಾದುವು ಇವರ ಮೂಲಕಸುಬಾಗಿದ್ದವು. ಅಳಿಯಸಂತಾನ ಪದ್ಧತಿಯವರಾದ ಮೇರರಲ್ಲಿ ಗಂಗರ್, ತೋಳಾರ್, ಬೇಸರ, ಐರು, ಮಂಜರ್, ಸಿರಿಯನ್, ಹಾವಿನ್, ಕಲ್ಲಿನ್, ಮಣ್ಣಿನ್, ತಾಯಟ್, ಬಿಲ್ಲಿನ್, ಮಿಂಚಿನ್, ಕಂಚಿನ್ ಶೆಟ್ಟಿ ಮೊದಲಾದ ಬಳಿಗಳಿವೆ. ಮೇರ ಹಾಗೂ ಮುಗೇರ ಎರಡೂ ಒಂದೇ ಎಂಬ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಮೇರರಲ್ಲಿ ಜಾತಿ ಪಂಚಾಯಿತಿ ಇದ್ದು, ಕುಲದ ಮುಖ್ಯಸ್ಥನಿಗೆ ಕಾಪಾ ಎಂಬ ಹೆಸರು ಕೆಲವೆಡೆ ಇದೆ. ಕಾಡ್ಯನಾಟದ ಹೆಸರಲ್ಲಿ ಸರ್ಪಾರಾಧನೆ ನಡೆಸುವುದು ಇವರ ವಿಶೇಷ ಸಂಪ್ರದಾಯವಾಗಿದೆ. ಕಾಡ್ಯನಾಟದ ಹಾಡಿನಲ್ಲಿ ಮೇರರ ಹುಟ್ಟಿನ ಐತಿಹ್ಯವೂ ಇದೆ. ಮೇರರು ಹಿಂದಿನ ಕಾಲದಲ್ಲಿ ಶವವನ್ನು ಹೂಳುತ್ತಿದ್ದರೆಂದೂ, ಈಚೆಗೆ ಸುಡುವುದು ರೂಢಿಯಾಗಿದೆ ಎಂದೂ ಹೇಳಲಾಗಿದೆ.

**ಮೊಗವೀರ :** ಮೊಗವೀರರು (ತುಳುವಿನಲ್ಲಿ ಮರಕಲರು) ಮೀನುಗಾರಿಕೆಯನ್ನು ಕುಲಕಸುಬಾಗಿ ಹೊಂದಿದವರು. ಇವರ ಮಾತೃಭಾಷೆ ತುಳು. ಇವರಲ್ಲಿ ಅಮೀನ್, ಪುತ್ರನ್, ಸಾಲ್ಯಾನ್, ಕರ್ಕೇರ, ತಿಂಗಳಾಯ, ಕಾಂಚನ್, ವೀಂಡನ್, ಸುವರ್ಣ, ಕೋಟ್ಯಾನ್, ಬಂಗೇರ, ಕುಂದರ್, ಕಂಗೆನ್ ಮೊದಲಾದ ಬಳಿಗಳಿವೆ. ಒಂದೇ ಬಳಿಯಲ್ಲಿ ವಿವಾಹ ನಿಷಿದ್ಧವಾಗಿದೆ. ಇವರು ಅಳಿಯಸಂತಾನ ಕಟ್ಟಳೆಯವರು. ವಿವಾಹಾದಿಗಳು ಸಮಾಜದ ಗುರಿಕಾರರ ನೇತೃತ್ವದಲ್ಲಿ ನಡೆಯುವುದು ಪದ್ಧತಿಯಾಗಿದೆ. ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ತುಳು ಪದ್ಧತಿಯಂತೆ ಶಾಸ್ತ್ರಾಚರಣೆಗಳನ್ನು ಮಾಡುತ್ತಾರೆ. ಇವರಲ್ಲಿ ಶವಕ್ಕೆ ಅಗ್ನಿಸಂಸ್ಕಾರ ಮಾಡುತ್ತಾರೆ. ಮೊಗವೀರರು ಇತರರ ಹಾಗೆ ಅಷ್ಟಮಿ, ಚೌತಿ, ದಸರ, ದೀಪಾವಳಿ, ಯುಗಾದಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ ಮುಂಗಾರು ಮಳೆ ಮುಗಿದು, ಆಗಸ್ಟ್‌ನಲ್ಲಿ ಮೀನುಗಾರಿಕೆ ಪ್ರಾರಂಭಿಸುವ ಮುನ್ನ ಕದ್ರಿಯ ಜೋಗಿ ಮಠದ ಗುರುಗಳ ನೇತೃತ್ವದಲ್ಲಿ ಸಮುದ್ರಕ್ಕೆ ಹಾಲು ಎರೆವ ಆಚರಣೆ ಮೊಗವೀರರಲ್ಲಿದೆ. ಸಾಮಾನ್ಯವಾಗಿ ಇವರು ಬಬ್ಬರ್ಯ ದೈವವನ್ನು ಆರಾಧಿಸುತ್ತಾರೆ.

**ರಾಣೆ :** ಉಚ್ಚಂಗಿ ಮಾರಮ್ಮನನ್ನು ಕುಲದೇವತೆಯೆಂದು ಪೂಜಿಸುತ್ತಿರುವುದರಿಂದ ಇವರು ಬಳ್ಳಾರಿ ಜಿಲ್ಲೆಯ ಉಚ್ಚಂಗಿ ಪ್ರದೇಶದಿಂದ ವಲಸೆ ಬಂದಿರಬಹುದೆಂದು ಊಹಿಸಲಾಗಿದೆ. ಇವರು ರಾಣೆಬೆನ್ನೂರಿನಿಂದ ಬಂದವರೆಂಬ ಅಭಿಪ್ರಾಯವೂ ಇದೆ. ಟಿಪ್ಪುವಿನ ಸೈನ್ಯದೊಂದಿಗೆ ಸೈನಿಕರಾಗಿ ಬಂದವರು ಬಳಿಕ ಕಾರ್ಕಳ, ಬೈಲೂರು, ಮೂಡಬಿದರೆ, ಕಾಂತಾವರ, ಕಿನ್ನಿಗೋಳಿ ಮೊದಲಾದೆಡೆ ನೆಲೆಸಿದರೆನ್ನಲಾಗಿದೆ. ಇವರ ಮನೆ ಮಾತು ಕನ್ನಡ. ಇವರಲ್ಲಿ ಜಾತಿ ಕೂಟವಿದೆ. ಜಾತಿ ಮುಖ್ಯಸ್ಥರಾಗಿ ಜಾತಿಗೌಡ, ವತ್ತಿನಗೌಡ, ವತ್ತಿನ ಯಜಮಾನ, ಬಿರಾಣಿಯರಿದ್ದು ಅವರು ನ್ಯಾಯ ತೀರ್ಮಾನ ಇತ್ಯಾದಿ ಕಾರ್ಯಗಳನ್ನು ನಡೆಸುತ್ತಾರೆ. ಕಾರ್ಕಳದ ಉಚ್ಚಂಗಿ ದೇವಸ್ಥಾನದಲ್ಲಿ ಇವರ ಜಾತಿಕೂಟ (ಸಭೆ) ಸೇರುತ್ತದೆ. ನಿರ್ದಿಷ್ಟ ಶುಲ್ಕ ನೀಡಿ ಜಾತಿಯ ಪ್ರಾಯಸ್ಥ ವ್ಯಕ್ತಿ ಕೂಟದ ಸದಸ್ಯನಾಗುವ ವ್ಯವಸ್ಥೆ ಇದೆ. ರಾಣೆಯರಲ್ಲಿ ಪೂಜಾರಿ ಬಳಿ, ಗೌಡನ ಬಳಿ, ಪಾತ್ರಿಯ ಬಳಿ, ವತ್ತಿನ ಗೌಡನ ಬಳಿ ಹಾಗೂ ಬಿರಾಣಿ ಬಳಿ ಎಂಬ ಬಳಿಗಳಿವೆ. ಒಂದೇ ಬಳಿಯಲ್ಲಿ ವಿವಾಹ ಸಂಬಂಧ ಮಾಡುವಂತಿಲ್ಲ. ಇವರಲ್ಲಿ ದಶಕಗಳ ಹಿಂದೆ ದೇವದಾಸಿ ಪದ್ಧತಿ ಇದ್ದಿತೆಂದೂ ಕ್ರಮೇಣ ಅದನ್ನು ತೊಡೆದು ಹಾಕಲಾಗಿದೆ ಎಂದೂ ತಿಳಿದುಬರುತ್ತದೆ. ಇವರಲ್ಲಿ ತಾಯಿ ಅಥವಾ ಅಜ್ಜಿ ೧೨ನೇ ದಿನ ಮಗುವಿಗೆ ನಾಮಕರಣ ಮಾಡಿ ತೊಟ್ಟಿಲಿಗೆ ಹಾಕಿ ತೂಗುವ, ೧೬ನೇ ದಿನ ತಮ್ಮ

ದೇವಸ್ಥಾನದಿಂದ ತೀರ್ಥ ತಂದು ಮನೆಗೆ ಸಿಂಪಡಿಸುವ ಆಚರಣೆ ಮೂಲಕ ಅಥವಾ ಬ್ರಾಹ್ಮಣ ಭಟ್ಟರ ಮೂಲಕ ಸೂತಕ ಕಳೆದುಕೊಳ್ಳುವ ಪದ್ಧತಿ ಇದೆ.

**ವಿಶ್ವಕರ್ಮ :** ವಿಶ್ವಬ್ರಾಹ್ಮಣ, ಆಚಾರಿ, ಪಾಂಚಾಳ ಮೊದಲಾದ ಹೆಸರುಗಳೂ ಇರುವ ವಿಶ್ವಕರ್ಮರು ತಮ್ಮನ್ನು ವಿಶ್ವಕರ್ಮ ಸೂತ್ರದ ಮಂತ್ರ ದೃಷ್ಟಾರ ಭೌವನಾ ಋಷಿಯ ವಂಶೀಕರೆಂದು ಗುರುತಿಸಿಕೊಳ್ಳುತ್ತಾರೆ. ಜಿಲ್ಲೆಯಲ್ಲಿ ಗ್ರಾಮಕ್ಕೊಂದರಂತೆ ಈ ಜಾತಿಯವರ ಕೂಡುವಳಿಕೆ ಇದ್ದು, ಅದರ ಮುಖ್ಯಸ್ಥನನ್ನು ಗುರಿಕಾರನೆಂದು ಕರೆಯಲಾಗುತ್ತದೆ. ಆತ ಜಾತಿ ಪಂಚಾಯಿತಿಯನ್ನು ನಡೆಸುವ ಅಧಿಕಾರವನ್ನೂ ಹೊಂದಿದ್ದನು. ವಿಶ್ವಕರ್ಮರಲ್ಲಿ ಸಾನಗ, ಸನಾತನ, ಅಹಭೂವನ, ಪ್ರತ್ನಸ ಮತ್ತು ಸುಪರ್ಣಸ ಎಂಬ ಪಂಚ ಗೋತ್ರಗಳಿದ್ದು, ಇವರು ಕ್ರಮವಾಗಿ ಕಬ್ಬಿಣ, ಮರ, ಕಂಚು, ಶಿಲೆ ಹಾಗೂ ಚಿನ್ನದ ವೃತ್ತಿಗಳನ್ನು ಸಾಂಪ್ರದಾಯಿಕವಾಗಿ ಮಾಡುವವರಾಗಿದ್ದಾರೆ (ಆದರೆ, ತುಳುನಾಡಿನ ವಿಶ್ವಕರ್ಮರು ಕಂಚಿನ ಕೆಲಸವನ್ನು ಮಾಡುತ್ತಿಲ್ಲ ಎನ್ನಲಾಗಿದೆ). ಇವರು ಮಕ್ಕಳಕಟ್ಟು ಪದ್ಧತಿಯನ್ನು ಪಾಲಿಸುತ್ತಾರೆ. ಹುಟ್ಟು, ಸಾವು ಮತ್ತು ಮೈನೆರೆದ ಸಂದರ್ಭಗಳಲ್ಲಿ ನಿಗದಿತ ದಿನಗಳವರೆಗೆ ಮೈಲಿಗೆ ಆಚರಿಸುತ್ತಾರೆ. ಸ್ವಜಾತಿ ಪುರೋಹಿತರು ಇವರ ಧಾರ್ಮಿಕ ವಿಧಿಗಳನ್ನು ನಡೆಸಿಕೊಡುತ್ತಾರೆ. ಸ್ಥಳೀಯ ಭೂತಗಳಾದ ಕಲ್ಕುಡ–ಕಲ್ಲುರ್ಟಿ, ಪಂಜುರ್ಲಿ ಮೊದಲಾದ ದೈವ–ದೇವರುಗಳನ್ನು ಆರಾಧಿಸುತ್ತಾರೆ. ಕಾಳಮ್ಮ ಅಥವಾ ಕಾಳಿಕಾಂಬೆಯನ್ನು ಕುಲದೇವತೆಯೆಂದು ಪೂಜಿಸುತ್ತಾರೆ; ವಿಶ್ವಕರ್ಮನನ್ನು ಪರಬ್ರಹ್ಮನೆಂದು ನಂಬಿದ್ದಾರೆ. ಶಾಕ್ತಪಂಥದವರಾದ ಇವರು ನವರಾತ್ರಿಯಲ್ಲಿ ವಿಶೇಷ ಪೂಜೆ–ಆರಾಧನೆ ನಡೆಸುತ್ತಾರೆ. ತಿರುಪತಿ ತಿಮ್ಮಪ್ಪನಿಗೆ ಮುಡಿಪು ಕಟ್ಟುವ ಪದ್ಧತಿಯೂ ಇದೆ. ವೈದಿಕ ಸಂಪ್ರದಾಯದಂತೆ ಷೋಡಶ ಕರ್ಮಗಳನ್ನು ಆಚರಿಸುತ್ತಾರೆ.

**ವೈದ್ಯ :** ಉಡುಪಿ, ಕುಂದಾಪುರ ಪರಿಸರದಲ್ಲಿ ನೆಲೆ ನಿಂತಿರುವ ವೈದ್ಯರು ಭಾಗವತ ಸಂಪ್ರದಾಯದ ಸ್ಮಾರ್ತ ವರ್ಗಕ್ಕೆ ಸೇರಿದವರು. ಬಾಳೆಕುದುರುವಿನಲ್ಲಿ ಇವರ ಗುರುಮಠವಿದೆ. ಆರಾಧನೆಯಲ್ಲಿ ಬಳಸುವ ಕಂಚಿನ ಡಮರುವಾದ್ಯವನ್ನು ಇವರು ತಮ್ಮ ಆರಾಧ್ಯ ದೈವವೆಂದೇ ಭಾವಿಸಿ ಪೂಜಿಸುತ್ತಾರೆ. ನಾಗಮಂಡಲ, ಢಕ್ಕೆಬಲಿಗಳನ್ನು ನಡೆಸಿಕೊಡುವ ಇವರನ್ನು ಡಮರು ಮೇಳದವರೆಂದು ಕರೆಯುವುದೂ ಇದೆ. ಹೀಗೆ ಆರಾಧನೆಯಲ್ಲಿ ಪೂಜಾರಿಯಾಗಿರುವುದಲ್ಲದೆ, ಕೆಲವೊಂದು ಕಾಯಿಲೆಗಳಿಗೆ ಔಷಧಿ ನೀಡುವ ಅಭ್ಯಾಸವೂ ಇದ್ದುದರಿಂದಲೇ ಇವರಿಗೆ ವೈದ್ಯರೆಂದು ಹೆಸರಾಗಿದೆ ಎನ್ನಲಾಗಿದೆ.

**ಸಾರಸ್ವತ, ಗೌಡ ಸಾರಸ್ವತ ಬ್ರಾಹ್ಮಣ :** ಸಾರಸ್ವತರು ಸುಮಾರು ೧೭–೧೮ನೇ ಶತಮಾನದಲ್ಲಿ ಗೋವಾ ಭಾಗದಿಂದ ತುಳುನಾಡಿಗೆ ವಲಸೆ ಬಂದವರು. ಸಾರಸ್ವತರು ಶೈವ ಸಂಪ್ರದಾಯವರಾಗಿದ್ದು ಶಂಕರಾಚಾರ್ಯರ ಅನುಯಾಯಿಗಳಾಗಿರುವರು. ಗೌಡ–ಸಾರಸ್ವತರು ವೈಷ್ಣವ ಸಂಪ್ರದಾಯವರಾಗಿದ್ದು ಮಧ್ವಾಚಾರ್ಯರ ದ್ವೈತ ಸಂಪ್ರದಾಯದ ಅನುಯಾಯಿಗಳಾಗಿರುವರು. ಇವರಲ್ಲಿ ಚಿತ್ರಾಪುರ ಸಾರಸ್ವತ, ಗೌಡ ಸಾರಸ್ವತ, ಕುಡಾಲ ದೇಶಸ್ಥ ಸಾರಸ್ವತ ಎಂಬ ವಿಭಾಗಗಳಿವೆ. ರತ್ನಗಿರಿ ಜಿಲ್ಲೆಯ ಭಾಲಾವಳಿ ಎಂಬಲ್ಲಿಂದ ಬಂದ ರಾಜಾಪುರ ಸಾರಸ್ವತರಲ್ಲಿ ಭಾಲಾವಳಿಕಾರರೆಂಬ ಭೇದವೂ ಇದೆ. ಗೌಡ ಸಾರಸ್ವತರಲ್ಲಿ ಮುಂಡಾರೆ ಕೊಂಕಣ, ವೀಳ್ಯದೆಲೆ ಕೊಂಕಣ, ವೈಶ್ಯಕೊಂಕಣ ಮೊದಲಾದ ಉಪಪಂಗಡದವರಿದ್ದಾರೆ.

ಚಿತ್ರಾಪುರದವರಿಗೆ ಚಿತ್ರಾಪುರ ಮಠ, ಗೌಡಸಾರಸ್ವತರಿಗೆ ಕಾಶೀಮಠ, ರಾಜಾಪುರದವರಿಗೆ ಕವಳೆ (ಗೋವಾ) ಹಾಗೂ ಕುಡಾಳರಿಗೆ ಪರ್ತಗಾಳಿ ಮಠ (ಗೋವಾ)ಗಳೆಂಬ ಪ್ರತ್ಯೇಕ ಮಠಗಳಿವೆ. ಚಿತ್ರಾಪುರ ಮತ್ತು ಗೌಡ ಸಾರಸ್ವತರಿಗೆ ಕೊಂಕಣಿ ಹಾಗೂ ರಾಜಾಪುರ ಮತ್ತು ಕುಡಾಲರಿಗೆ ಮರಾಠಿ ಮಿಶ್ರಿತ ಕೊಂಕಣಿ ಮಾತೃಭಾಷೆಯಾಗಿದೆ. ಕೃಷಿ, ವ್ಯಾಪಾರ, ಶಿಕ್ಷಣಾದಿ ಕ್ಷೇತ್ರಗಳಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪುರೋಹಿತ ವರ್ಗದವರನ್ನು ಹೊರತುಪಡಿಸಿ ಉಳಿದವರು ಮಿಶ್ರಾಹಾರ ಪದ್ಧತಿ ಹೊಂದಿದವರು. ಆದರೆ, ವೈದಿಕಾಚರಣೆಗಳಲ್ಲಿ ಶುದ್ಧ ಸಸ್ಯಾಹಾರ ಬಳಸುತ್ತಾರೆ. ಇವರ ವಿವಾಹ ಸಂಪ್ರದಾಯಗಳಲ್ಲಿ ಸೋದರ ಮಾವ ಭಾಗವಹಿಸಲೇಬೇಕೆಂಬ ನಿಬಂಧನೆ ಇದೆ.

**ಸೇರೆಗಾರ :** ಉಡುಪಿ ಜಿಲ್ಲೆಯ ಕಲ್ಯಾಣಪುರ, ಬೈಂದೂರು ಭಾಗದಲ್ಲಿ ಕಂಡುಬರುವ ಇವರಿಗೆ ರಾಮಕ್ಷತ್ರಿಯ, ಕೋಟೆಯವರು, ಕೋಟೆ ಕ್ಷತ್ರಿಯ ಸೇರ್ವೆಗಾರ ಮೊದಲಾದ ಹೆಸರುಗಳಿವೆ. ಘಟ್ಟದ ಮೇಲಿನಿಂದ ವಲಸೆ ಬಂದ ಇವರು ಮೂಲತ: ಸೈನಿಕರಾಗಿದ್ದು ಬಳಿಕ ಕೋಟೆಗಳ ರಕ್ಷಕರಾಗಿ ನೆಲೆನಿಂತವರು. ವಿಶ್ವಾಮಿತ್ರ, ಭಾರದ್ವಾಜ ಮೊದಲಾದ ಗೋತ್ರಗಳಿವೆ. ಜಾತಿ ಮುಖಂಡನ ಮಾರ್ಗದರ್ಶನದಲ್ಲಿ ವಿವಾಹಾದಿ ಶಾಸ್ತ್ರಗಳು ವೈದಿಕ ಸಂಪ್ರದಾಯದಂತೆ ಜರುಗುತ್ತವೆ.

**ಹರೇಯ :** ಸುಮಾರು ೫೦೦ ವರ್ಷಗಳ ಹಿಂದೆ ಕುಂದಾಪುರ ತಾಲೂಕಿನ ಹೆಂಗವಳ್ಳಿ ಗ್ರಾಮದ ತೊಂಭತ್ತು ಮನೆತನದವರು ದೈವದ ನೇಮದಲ್ಲಿ ಗೆಂಡಸೇವೆ ನಡೆಸುವಾಗ ಜಿಂಕೆಚರ್ಮದಲ್ಲಿ ಮಾಡಿದ ಹರೆವಾದ್ಯ ನುಡಿಸುವುದು, ಕೃಷಿ ಕಾರ್ಯ ಮಾಡುವುದು ಮೊದಲಾದ ಕೆಲಸಗಳಲ್ಲಿ ಹರೇಯರು ನಿರತರಾಗಿದ್ದರೆಂದೂ, ಮುಂದೆ ಬೆಳ್ಳಾಲ ಮನೆತನದವರು ಅವರನ್ನು ಕರೆತಂದು, ಉಂಬಳಿ ನೀಡಿ ಬೆಳ್ಳಾಲ ಪರಿಸರದಲ್ಲಿ ನೆಲೆ ನಿಲ್ಲಿಸಿದರೆಂದೂ ಹೇಳಲಾಗಿದೆ. ಹೀಗೆ ಹರೆ ವಾದ್ಯ ನುಡಿಸುವುದು ಕುಲಕಸುಬು ಆಗಿದ್ದುದರಿಂದ ಇವರಿಗೆ ಈ ಹೆಸರು ಬಂದಿದೆ ಎಂದೂ, ಹರೆಯನ್ನು ಇವರು ದೇವರೆಂದೇ ಪೂಜಿಸುತ್ತಾರೆಂದೂ ತಿಳಿದುಬರುತ್ತದೆ. ಕುಂದಗನ್ನಡವು ಹರೇಯರ ಮಾತೃಭಾಷೆಯಾಗಿದೆ. ಇವರಲ್ಲಿ ಗಂಗರ, ಶೆಟ್ಟರ, ತೋಳಾರ ಇತ್ಯಾದಿ ಬಳಿಗಳಿದ್ದು, ಅಳಿಯಕಟ್ಟಿನ ಪದ್ಧತಿಗಳಂತೆ ಆಚಾರ ಸಂಪ್ರದಾಯಗಳನ್ನು ನಡೆಸುತ್ತಾರೆ. ಈಚೆಗಿನ ಕಾರಣಾಂತರಗಳಿಂದ ಈ ಸಮುದಾಯದವರು ಇತರ ಸೂಕ್ತ ಜಾತಿಯವರೊಂದಿಗೆ ವೈವಾಹಿಕ ಸಂಬಂಧಗಳನ್ನು ಮಾಡುತ್ತಿದ್ದಾರೆ.

**ಹಸಲ :** ಕೊಲ್ಲೂರು, ಮಡಾಮಕ್ಕಿ, ಹಳ್ಳಿಹೊಳೆ, ಮೊದಲಾದೆಡೆ ಇವರು ಹೆಚ್ಚಾಗಿ ಕಾಣಬರುತ್ತಾರೆ. ಕಾಡಿನಲ್ಲಿ ವಾಸಿಸುತ್ತಿದ್ದುದರಿಂದ ಇವರಿಗೆ ಮಲೆಯ ಹಸ್ಲರೆಂಬ ಹೆಸರೂ ಇದೆ. ರಾಮಾಯಣದ ಕತೆಯ ಹಿನ್ನೆಲೆಯಲ್ಲಿ ತಾವು ಕುಶನ ವಂಶಸ್ಥರೆಂದು ಹೇಳಿಕೊಳ್ಳುವ ಇವರು ತಮ್ಮನ್ನು ರಾಮಕ್ಷತ್ರಿಯ, ಭಿಲ್ಲ ಕ್ಷತ್ರಿಯ, ಕೋಟೆಯವರು ಇತ್ಯಾದಿ ಹೆಸರುಗಳಿಂದಲೂ ಕರೆದುಕೊಳ್ಳುತ್ತಾರೆ. ಹಸಲರಲ್ಲಿ ಗೊಡ್ಡ ಹಸಲ, ಮುಗೇರ ಹಸಲ, ಕರಿಮುಗೇರ ಹಸಲ, ಬೆಳ್ಳಿ ಹಸಲ ಮೊದಲಾದ ಪಂಗಡಗಳಿವೆ. ಅಡಕೆ ಮರದ ಕೊನೆಗಳಿಗೆ ಹಾಳೆ ಕಟ್ಟುವುದು, ಜೇನುಬೇಟೆ, ಮರ ಕೊಯ್ಯುವುದು, ಬುಟ್ಟಿ ಹೆಣೆಯುವುದು, ತಾಳೆಮರದಿಂದ ಹೆಂಡ ಇಳಿಸುವುದು, ಕೃಷಿ ಕಾರ್ಯ ಮೊದಲಾದುವು ಇವರ ಸಾಂಪ್ರದಾಯಿಕ ವೃತ್ತಿಗಳಾಗಿದ್ದವು. ಇವರಲ್ಲಿ ತುಳು ಮನೆಮಾತಿನವರು ಅಳಿಯಕಟ್ಟು ಪದ್ಧತಿಯನ್ನು, ಕನ್ನಡ ಮಾತನಾಡುವವರು ಮಕ್ಕಳಕಟ್ಟು ಪದ್ಧತಿಗಳನ್ನು ಅನುಸರಿಸುತ್ತಾರೆ. ಇವರಲ್ಲಿ ಕುಲದ ಮುಖ್ಯಸ್ಥನಿಗೆ ಕೋಲುಗಾರ ಅಥವಾ ಕೊಂಡಗಾರ ಎಂಬ ಹೆಸರಿದೆ. ಕುಂದಗನ್ನಡವು ಇವರ ಮನೆಮಾತಾಗಿದೆ. ಹಸ್ಲ (ಹಸಲ) ಎಂಬುದನ್ನು ತಮ್ಮ ಹೆಸರಿನ ಕೊನೆಗೆ ಉಪನಾಮವಾಗಿ ಬಳಸುತ್ತಾರೆ.

**ಹೆಗ್ಗಡೆ :** ಹೆಗ್ಗಡೆಗಳು ವಿಜಯನಗರ ಸಾಮ್ರಾಜ್ಯದ ಅರಸರ ದಳಪತಿಗಳಾಗಿದ್ದವರು ಹಾಗೂ ಅವರ ಪ್ರತಿನಿಧಿಗಳಾಗಿ ತುಳುನಾಡಿನಲ್ಲಿ ನೇಮಿಸಲ್ಪಟ್ಟವರು. ಕೃಷಿ ಇವರ ಮುಖ್ಯವೃತ್ತಿಯಾಗಿದ್ದಿತು. ಆಯಾ ಊರಿನ ಮುಡ್ಪುರಿ ಮನೆಯ (ಗುತ್ತಿನ ಮನೆ) ಹೆಗ್ಗಡೆಯವರ ಮುಂದಾಳತ್ವದಲ್ಲಿ ಜಾತಿ ಪಂಚಾಯಿತಿ ಮತ್ತಿತರ ಕಾರ್ಯಕ್ರಮಗಳು ನೆರವೇರುತ್ತಿದ್ದವು. ಬಾಳೆ ಬಳಿ, ಹಡ್ಲುಬಳಿ, ಕಂದ್ಲುಬಳಿ, ತೋಳಾರ ಬಳಿ, ಕೌಡ್ಜಿ ಬಳಿ, ಗಂಗರ್ ಬಳಿ, ದಂಡಿಗಾನ್ ಬಳಿ, ಹೆಗ್ಗಣ ಬಳಿ ಇವರ ಬಳಿಗಳಾಗಿವೆ. ಕನ್ನಡ ಇವರ ಮನೆ ಮಾತು. ಇವರು ಅಳಿಯಕಟ್ಟು ಪದ್ಧತಿಯವರು.

**ಹೊಲೆಯ :** ಇವರು ಗೊರಬೆ ಮಾಡುವುದು, ಕೃಷಿಕೂಲಿಯಂತಹ ವೃತ್ತಿಯನ್ನು ಅವಲಂಬಿಸಿದ್ದವರು. ಅಳಿಯಕಟ್ಟು ಪದ್ಧತಿಯ ಇವರಲ್ಲಿ ಬಲ್ಲಾಳ್‍ದನ್ನ, ಕರ್ಕೊಡೆದನ್ನ, ಕುಮಾರ್‍ದನ್ನ, ಉಮರ್‍ದನ್ನ ಮೊದಲಾದ ಬಳಿಗಳು ಇವೆ. ಇವರ ಮನೆ ಮಾತು ತುಳು. ಹುಟ್ಟು, ಸಾವು ಮೊದಲಾದವುಗಳಲ್ಲಿ ಇತರರ ಹಾಗೆ ನಿರ್ದಿಷ್ಟ ದಿನಗಳವರೆಗೆ ಅಮೆ ಆಚರಿಸುತ್ತಾರೆ. ಪುರೋಹಿತ ವರ್ಗವಿಲ್ಲ. ವಿವಾಹ ಆಚರಣೆಗಳನ್ನು ಇವರ ಗುರಿಕಾರರು ಅಥವಾ ಮೂಲದ ಹೊಲೆಯರು ನಡೆಸಿಕೊಡುತ್ತಾರೆ. ಶವವನ್ನು ಸುಡುತ್ತಾರೆ. ಇತರರ

ಹಾಗೆ ಮಿಂದುಟ್ಟು ದೀಪಾವಳಿ ಮತ್ತಿತರ ಹಬ್ಬಗಳನ್ನಾಚರಿಸುತ್ತಾರೆ. ವಿವಾಹ, ಹಬ್ಬ-ಹುಣ್ಣಿಮೆಗಳಲ್ಲಿ ದುಡಿ ನುಡಿಸುತ್ತಾ ಪಾಡ್ದನ ಹಾಡುವ ಹವ್ಯಾಸ ಇವರಲ್ಲಿದೆ. ಕರಂಗೋಲ್ ಕಟ್ಟುವುದು (ಕುಣಿತ) ಇವರ ವಿಶೇಷ ಕಲಾ ಸಂಪ್ರದಾಯವಾಗಿದೆ. ಇವರ ಗುಡಿಸಲುಗಳನ್ನು ಕೇಲ್ ಅಥವಾ ಬುಡರಾ (ರೋ) ಎಂದು ಕರೆಯುವುದುಂಟು.

## ಧರ್ಮಗಳು

### ಹಿಂದೂ

ಪ್ರಾಚೀನ ಕಾಲದಿಂದಲೇ ತುಳುನಾಡಿನಲ್ಲಿ ಹಿಂದೂ ಧರ್ಮ ಅಸ್ತಿತ್ವದಲ್ಲಿದ್ದುದನ್ನು ಅಧ್ಯಯನಕಾರರು ಗುರುತಿಸಿದ್ದಾರೆ. ಗ್ರೀಸ್‌ನ ಆಕ್ಸಿರಿಂಕಸ್‌ನಲ್ಲಿ ದೊರೆತ ಗ್ರೀಕ್ ಪ್ರಹಸನದಲ್ಲಿ ಪ್ರಸ್ತಾಪವಾಗಿರುವ ಸೋಮೇಶ್ವರ ದೇವಾಲಯವು ಈಗಿನ ಉದ್ಯಾವರದ ಶಂಭುಕಲ್ಲು ಈಶ್ವರ ದೇವಾಲಯವಾಗಿದೆ ಎಂದು ಪಿ.ಗುರುರಾಜಭಟ್ಟರು ಅಭಿಪ್ರಾಯಪಟ್ಟಿದ್ದಾರೆ. ಏಳನೇ ಶತಮಾನದ ವಡ್ಡರ್ಸೆ ಶಾಸನದಲ್ಲಿ ಬ್ರಾಹ್ಮಣರಿಗೆ ಭೂದಾನ ನೀಡಿದ ಉಲ್ಲೇಖವಿದೆ. ಬೆಳ್ಮಣ್ಣುವಿನ ದುರ್ಗಾಪರಮೇಶ್ವರಿ ದೇವಾಲಯದಲ್ಲಿನ ಎಂಟನೇ ಶತಮಾನದ ಮಧ್ಯಭಾಗದ ಪ್ರಾಚೀನ ಕನ್ನಡ ತಾಮ್ರ ಶಾಸನದಿಂದ ಎರಡನೇ ಆಳುವರಸನು ಶೈವಧರ್ಮಕ್ಕೆ ಪ್ರೋತ್ಸಾಹ ಕೊಟ್ಟದ್ದು ಹಾಗೂ ಕಾಂತಾಪುರ (ವರ), ಚೊಕ್ಕಪಾಡಿ ಮತ್ತು ಬೆಳ್ಮಣುಗಳ ಪರಿಸರದಲ್ಲಿ ಶೈವಬ್ರಾಹ್ಮಣರಿದ್ದದ್ದು ತಿಳಿದುಬರುತ್ತದೆ. ಕೆಳದಿ ಅರಸರೊಂದಿಗೆ ವೀರಶೈವ ಮತ ಜಿಲ್ಲೆಗೆ ಪಾದಾರ್ಪಣ ಮಾಡಿತು. ಇದರ ಫಲವಾಗಿ ಜಿಲ್ಲೆಯ ಹಲವೆಡೆ ಜಂಗಮ ಮಠ ಮತ್ತು ವೀರಭದ್ರ ದೇವಾಲಯಗಳು ರಚಿತವಾದವು. ಇವುಗಳ ಅನುಕೂಲಕ್ಕಾಗಿ ಗದ್ದೆಗಳ ದತ್ತಿ, ಕೆರೆಗಳ ನಿರ್ಮಾಣ ಇತ್ಯಾದಿಗಳಾದವು. ಕಡಂದಲೆಯ ಸುಬ್ರಹ್ಮಣ್ಯ ದೇವಾಲಯಕ್ಕೆ ಸಿರಿಎರೆ ಬೊಯ್ಗವರ್ಮ ಎಂಬ ಅರಸನು ಪರಿಪಾಳಿ ಕ್ಷೇತ್ರವನ್ನು ದಾನವಾಗಿ ನೀಡಿದ್ದನ್ನು ಒಂಭತ್ತನೇ ಶತಮಾನದ ಶಾಸನವು ತಿಳಿಸುತ್ತದೆ. ೯-೧೦ನೇ ಶತಮಾನದ ಹೊತ್ತಿಗೆ ಇನ್ನೂ ಹಲವೆಡೆ ಶೈವದೇವಾಲಯಗಳು ಸಾಕಷ್ಟು ಸಂಖ್ಯೆಯಲ್ಲಿ ರಚನೆಯಾಗಿದ್ದವು. ಉಡುಪಿಯ ಅನಂತೇಶ್ವರ, ಬ್ರಹ್ಮಾವರದ ಮಹಾಲಿಂಗೇಶ್ವರ, ಕೋಟೇಶ್ವರದ ಕೋಟಿನಾಥ ಮೊದಲಾದವು ಇದರ ಕೆಲವು ನಿದರ್ಶನಗಳಾಗಿವೆ. ಹಟ್ಟಿಯಂಗಡಿಯ ಲೋಕನಾಥೇಶ್ವರ ದೇವಾಲಯದಲ್ಲಿ ದೊರೆತ ಶಾಸನವೊಂದರಲ್ಲಿ ಆ ಊರಿನ ಹೆಸರು ಪಟ್ಟಿಯನಗರ ಎಂದಿರುವುದರಿಂದ ಆ ಊರು ಎಂಟನೇ ಶತಮಾನದಷ್ಟು ಪ್ರಾಚೀನವಾದುದೆಂದು ತಿಳಿದುಬರುತ್ತದೆ. ಉಡುಪಿಯ ಅನಂತೇಶ್ವರ ದೇವಾಲಯದ ಆವರಣದ ಚಿಕ್ಕಗುಡಿಯಲ್ಲಿನ ಲಕುಲೀಶ ಮೂರ್ತಿ, ಉದ್ಯಾವರದಲ್ಲಿ ದೊರೆತ ೧೦೫೮ರ ಶಾಸನದಲ್ಲಿನ ಗೊರವನ ಉಲ್ಲೇಖಗಳು ಈ ಪ್ರಾಂತ್ಯದಲ್ಲಿ ಲಕುಲೀಶ, ಪಾಶುಪತ ಮತ್ತು ಕಾಳಾಮುಖ ಶೈವಪಂಥಗಳೂ ಪ್ರಚುರದಲ್ಲಿದ್ದುದರ ಕುರುಹುಗಳಾಗಿವೆ. ಶಿವಪುರದ ಶಂಕರದೇವಾಲಯವನ್ನು ೧೪೧೦ರಲ್ಲಿ ಜೀರ್ಣೋದ್ಧಾರ ಮಾಡಿದ ಸಂಗತಿ ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಅದರಲ್ಲಿನ ಶಿವಲಿಂಗದ ಪಾಣಿಪೀಠದ ಲಕ್ಷಣಗಳಿಂದ ಅದು ಸುಮಾರು ೧೦-೧೧ನೇ ಶತಮಾನದಷ್ಟು ಪ್ರಾಚೀನದ್ದಿರಬಹುದೆಂದು, ದೇವಾಲಯವು ಅದಕ್ಕೂ ಹಿಂದಿನ ಕಾಲದಿಂದ ಇದ್ದಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕಾಂತಾವರದ ಕಾಂತೇಶ್ವರ ದೇವಾಲಯವನ್ನು ಈಸ್ಟ್ ಇಂಡಿಯಾ ಕಂಪನಿಯವರ ಅಪ್ಪಣೆಯಂತೆ ರೇವನ ಷಾ ಸಾಹೇಬನ ಅಧಿಕಾರದಲ್ಲಿ ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಿದ ಸಂಗತಿಯನ್ನು ೧೮೮೯ರ ಶಾಸನ ತಿಳಿಸುತ್ತದೆ.

ಸಾಲಿಗ್ರಾಮದಲ್ಲಿನ ಆದಿ ಕದಂಬ ಶೈಲಿಯ ದ್ವಿಬಾಹು ನರಸಿಂಹವಿಗ್ರಹವು ಸುಮಾರು ಐದನೇ ಶತಮಾನದ ಹೊತ್ತಿಗೇ ವೈಷ್ಣವ ಪಂಥವು ಜಿಲ್ಲೆಯಲ್ಲಿದ್ದುದರ ಕುರುಹು ಆಗಿದೆ. ಹಟ್ಟಿಯಂಗಡಿಯ ವೇಣುಗೋಪಾಲ, ಕಾರ್ಕಳದ ಅನಂತಪದ್ಮನಾಭ, ಮರವಂತೆಯ ಮರ(ವರಾಹ)ಸ್ವಾಮಿ, ಪೆರಂಪಳ್ಳಿಯ ಜನಾರ್ದನ, ಉಡುಪಿಯ ಪ್ರಖ್ಯಾತ ಶ್ರೀಕೃಷ್ಣ ಮೊದಲಾದ ಹಲವಾರು ದೇವಾಲಯಗಳಿಂದ ವೈಷ್ಣವ ಪಂಥವು ಜಿಲ್ಲೆಯಾದ್ಯಂತ ಬಹುವ್ಯಾಪಕವಾಗಿಯೂ ಪ್ರಭಾವಶಾಲಿಯಾಗಿಯೂ ಹರಡಿತ್ತೆಂದು ತಿಳಿಯಬಹುದಾಗಿದೆ. ಶೈವ ಮೂಲದ ದೇವಾಲಯಗಳು ವೈಷ್ಣವ ಪ್ರಭಾವದಿಂದ ಹರಿಹರ ಕ್ಷೇತ್ರಗಳಾಗಿ

ಮಾರ್ಪಟ್ಟಿದ್ದಕ್ಕೆ ಕುಂಭಾಸಿಯ ಹರಿಹರಕ್ಷೇತ್ರ ಒಂದು ನಿದರ್ಶನವಾಗಿದೆ. ಇಲ್ಲಿಯ ಕೆಲವು ದೇವತೆಗಳನ್ನು ವೈದಿಕ ದೇವತೆಗಳನ್ನಾಗಿ ಮಾಡಿಕೊಂಡದ್ದಲ್ಲದೆ ಕೆಲವನ್ನು ತಮ್ಮ ದೇವತೆಗಳ ರಕ್ಷಕಗಣಗಳನ್ನಾಗಿಯೂ ಮಾಡಿಕೊಂಡದ್ದಕ್ಕೆ ಪೊಳಲಿ, ಉಪ್ಪುಂದ, ನೀಲಾವರ ಮೊದಲಾದೆಡೆಯ ಶಾಸನಗಳಲ್ಲಿ ಸೂಚನೆಗಳಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಒಟ್ಟಾರೆ ವೈಷ್ಣವ ಪಂಥದ ಪ್ರಭಾವದಿಂದ ಕರಾವಳಿ ಕರ್ನಾಟಕದ ಬ್ರಾಹ್ಮಣರಲ್ಲಿ ಶಿವಶಕ್ತಿ ಆರಾಧಿಸುವ ಭಾಗವತರು ಹಾಗೂ ಕೃಷ್ಣಭಕ್ತಿಯ ಮಾಧ್ವರು ಎಂಬ ಎರಡು ಪ್ರಧಾನ ಪಂಗಡಗಳಾದವು (ಶಿವಳ್ಳಿ ಬ್ರಾಹ್ಮಣರು, ಪು.೪೪-೪೮). ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಮಾತೃ ದೇವತಾರಾಧನೆ ಅಥವಾ ಶಕ್ತಿ ದೇವತಾರಾಧನೆ ಪ್ರಭಾವಶಾಲಿಯಾಗಿದ್ದಿತು. ಕೊಲ್ಲೂರಿನ ಮೂಕಾಂಬಿಕೆ, ಪೆರಂಪಳ್ಳಿಯ ಮಹಿಷಾಸುರ ಮರ್ಧಿನಿ, ನೀಲಾವರದ ದುರ್ಗಾಭಗವತಿ, ಬಾರಕೂರಿನ ಸಪ್ತಮಾತೃಕೆಯರ ದೇವಾಲಯ ಮೊದಲಾದುವು ಈ ಸಂಬಂಧದ ಕೆಲವು ನಿದರ್ಶನಗಳು. ಶಕ್ತ್ಯಾರಾಧಕರಾದ ಕೌಲರು ನೆಲೆಸಿದ ಸ್ಥಳವೇ ಕೊಲ್ಲೂರು ಆಯಿತೆಂಬ ಅಭಿಪ್ರಾಯವಿದೆ. ಶಂಭುಕಲ್ಲಿನ ಗುಡ್ಡೆಯಲ್ಲಿನ ದುರ್ಗಾಪರಮೇಶ್ವರಿ ಗುಡಿಯು ಪ್ರಾಚೀನ ಶಕ್ತಿ ಆರಾಧನಾ ಸ್ಥಳವಾಗಿದ್ದು, ಇಲ್ಲಿ ಬ್ರಾಹ್ಮೀ, ಮಾಹೇಶ್ವರಿ ಮತ್ತು ವೈಷ್ಣವಿಯರ ಆಳೆತ್ತರದ ಮೃಣ್ಮಯ ಮೂರ್ತಿಗಳಿವೆ. ಹಟ್ಟಿಯಂಗಡಿ, ಬಾರಕೂರುಗಳಲ್ಲಿನ ದ್ವಿಬಾಹು ಗಣಪತಿ ಶಿಲ್ಪಗಳು ೫-೬ನೇ ಶತಮಾನದ ವೇಳೆಗೇ ಈ ಸೀಮೆಯಲ್ಲಿ ಗಾಣಪತ್ಯ ಪಂಥ ಪ್ರಚಾರದಲ್ಲಿದ್ದಿತೆಂಬುದನ್ನು ಸೂಚಿಸುತ್ತವೆ. ಕಾರ್ಕಳ, ನಾರಾವಿ, ಕುಂಭಾಸಿ, ಸೂರಾಲು ಮೊದಲಾದೆಡೆ ಕಾಣಬರುವ ಸೂರ್ಯ ದೇವಾಲಯಗಳು ಸೂರ್ಯಾರಾಧನೆ ರೂಢಿಯಲ್ಲಿದ್ದುದಕ್ಕೂ ದಾಖಲೆಗಳಾಗುತ್ತವೆ. ಈ ಪ್ರದೇಶದಲ್ಲಿ ಸ್ಕಂದ ಅಥವಾ ಸುಬ್ರಹ್ಮಣ್ಯನ ಆರಾಧನೆಯೂ ವ್ಯಾಪಕವಾಗಿದೆ. ಕಡಂದಲೆಯು ತುಳುನಾಡಿನ ಅತಿ ಪ್ರಾಚೀನ ಸ್ಕಂದಕ್ಷೇತ್ರವೆಂದೂ, ಅಲ್ಲಿನ ಸ್ಕಂದ ವಿಗ್ರಹ ಬಹು ಪ್ರಾಚೀನ ಶಿಲ್ಪ ಮಾದರಿಯಾಗಿದೆ ಎಂದೂ ಹೇಳಲಾಗಿದೆ. ವಿವಿಧ ಆಚಾರ್ಯರು ಪ್ರತಿಪಾದಿಸಿದ ತತ್ವ, ಸಿದ್ಧಾಂತಗಳಿಂದಾಗಿ ವೈದಿಕ ಧರ್ಮವು ಕಾಲಕಾಲಕ್ಕೆ ಅನೇಕ ಅವಸ್ಥೆಗಳನ್ನು ಪಡೆದುಕೊಂಡು ಬೆಳೆದಿದೆ. ಅವರಲ್ಲಿ ಶಂಕರರ ಅದ್ವೈತದ ಪ್ರಕಾರ ಆತ್ಮ ಮತ್ತು ಪರಮಾತ್ಮ ಇಬ್ಬರೂ ಒಂದೇ. ಅದು ಸತ್ಯ ಮತ್ತು ಸ್ವಯಂಪ್ರಕಾಶಕ. ಜಗತ್ತಿನಲ್ಲಿ ಬ್ರಹ್ಮ ಒಂದೇ ಸತ್ಯ, ಉಳಿದದ್ದು, ಮಿಥ್ಯ. ಈ ಸಿದ್ಧಾಂತ ಮಾಯಾವಾದ ಎಂದೂ ಹೆಸರಾಗಿದೆ. ಆದರೆ, ರಾಮಾನುಜಾಚಾರ್ಯ ಬ್ರಹ್ಮವೊಂದೇ ನಿಜವಾದರೂ ಜಗತ್ತಿನ ಜೀವಿಗಳೂ ಬ್ರಹ್ಮನದೇ ಅಂಶವಾದ್ದರಿಂದ ಈ ಜಗತ್ತು ಸುಳ್ಳಲ್ಲ ಎಂಬ ವಿಚಾರ ಮಂಡನೆಯೊಂದಿಗೆ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಈ ಎರಡೂ ಸಿದ್ಧಾಂತಗಳಿಗೆ ಭಿನ್ನವಾದ ದ್ವೈತ ಸಿದ್ಧಾಂತ ಮಧ್ವಾಚಾರ್ಯರದು. ಇವರ ಪ್ರಕಾರ ಜೀವಾತ್ಮ – ಪರಮಾತ್ಮ ಬೇರೆ ಬೇರೆ (ದ್ವೈತ). ಹರಿಯೇ ಸರ್ವೋತ್ತಮ. ಆತನ ಸಾಕ್ಷಾತ್ಕಾರವೇ ಮೋಕ್ಷ. ಪ್ರತಿಯೊಂದು ಜೀವಿಯೂ ಇತರ ಜೀವಿಯಿಂದ ಭಿನ್ನವಾದ ವ್ಯಕ್ತಿತ್ವ ಹೊಂದಿರುತ್ತದೆ. ಜೀವಾತ್ಮ ಮತ್ತು ಪರಮಾತ್ಮವೂ ಬೇರೆಬೇರೆ. ಜೀವ ಮತ್ತು ಜಡಗಳಲ್ಲಿ ಭೇದವಿದೆ; ದೇವ ಮತ್ತು ಜಡಗಳಲ್ಲಿ ಭೇದವಿದೆ. ಜಡಪದಾರ್ಥಗಳಲ್ಲಿಯೂ ಪರಸ್ಪರ ಭೇದವಿದೆ. ಈ ಪಂಚಭೇದಜ್ಞಾನವನ್ನು ಅರಿಯುವುದೇ ಮುಕ್ತಿ.

**ಅದ್ವೈತ**

ತುಳುನಾಡಿಗೂ ಶಂಕರಾಚಾರ್ಯರಿಗೂ ನಿಕಟವಾದ ಸಂಬಂಧವಿದೆ. ಇವರು ಕೇರಳದ ಕಾಲಡಿಯಲ್ಲಿ ಜನಿಸಿದರೂ, ಮುಂದೆ ತಮ್ಮ ತತ್ವ ಪ್ರಚಾರಕ್ಕಾಗಿ ಭಾರತಯಾತ್ರೆ ಕೈಗೊಂಡದ್ದು ತುಳುನಾಡಿನ ಮೂಲಕವಾಗಿ. ಅಲ್ಲದೇ, ತುಳುನಾಡಿನಲ್ಲಿ ವ್ಯಾಪಕವಾಗಿ ಸಂಚಾರ ಮಾಡಿ, ಅಪಾರ ಅನುಯಾಯಿಗಳನ್ನು ಪಡೆದಿರುವುದರಿಂದ ಅವರ ಹೆಸರೂ ಇಲ್ಲಿ ವಿಶೇಷ ಉಲ್ಲೇಖನೀಯವೆನಿಸಿದೆ. ಮಾರಣಕಟ್ಟೆಯ ಬ್ರಹ್ಮಲಿಂಗೇಶ್ವರ, ಮಲಯಾಳಿ ಯಕ್ಷಮ್ಮ, ಕೊಡಚಾದ್ರಿಯ ಶಿಲಾಮಂಟಪ, ಕೊಲ್ಲೂರು ಮೂಕಾಂಬಿಕೆ, ಸುಬ್ರಹ್ಮಣ್ಯದ ಉಮಾಮಹೇಶ್ವರ, ಕಡಬದ ಶ್ರೀಕಂತಸ್ವಾಮಿ ಮೊದಲಾದವುಗಳಿಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಶಂಕರರ ಹೆಸರು ಪ್ರಸ್ತಾಪವಾಗುತ್ತದೆ. ಉಡುಪಿಯ ಅನಂತೇಶ್ವರ ಹಾಗೂ ಚಂದ್ರಮೌಳೇಶ್ವರ ದೇವಾಲಯಗಳು ಆದಿಶಂಕರರಿಂದ ಪ್ರತಿಷ್ಠಾಪಿಸಲ್ಪಟ್ಟಿತೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ತುಳುನಾಡಿನ ಹವಿಕ, ಸ್ಥಾನಿಕ ಮೊದಲಾದ ಬ್ರಾಹಣ ಸಮುದಾಯದವರನ್ನು ತಮ್ಮ ಅನುಯಾಯಿಗಳನ್ನಾಗಿ ಮಾಡಿಕೊಂಡುದಲ್ಲದೆ ಅವರಿಗಾಗಿ ಶಿವಳ್ಳಿ ಮೊದಲಾದೆಡೆ ಮಠಗಳನ್ನೂ

ಸ್ಥಾಪಿಸಿದರು. ಕೊಲ್ಲೂರಿನ ದೇವಾಲಯದಲ್ಲಿ ಮೊದಲಿಗೆ ದೇವಿಯ ಲಿಂಗ ಮಾತ್ರ ಇದ್ದು, ಅಲ್ಲಿ ತಾಮಸ ರೀತಿಯ ಪೂಜಾದಿಗಳು ನಡೆಯುತ್ತಿದ್ದವು. ಶಂಕರಾಚಾರ್ಯ ಶ್ರೀಚಕ್ರ ಯಂತ್ರದೊಂದಿಗೆ ಪಂಚಲೋಹದ ಮೂರ್ತಿ ಪ್ರತಿಷ್ಠಾಪಿಸಿ, ಸಾತ್ವಿಕ ಪೂಜಾಪದ್ಧತಿ ಜಾರಿಗೆ ತಂದರೆಂದು ಪ್ರತೀತಿಯಿದೆ.

## ದ್ವೈತ

ಈ ಮೂವರು ಆಚಾರ್ಯರಲ್ಲಿ ಮಧ್ವಾಚಾರ್ಯರು (೧೨೦೦–೧೨೮೦) ಮೂಲತ: ತುಳುನಾಡಿನವರೇ ಎಂಬುದು ವಿಶೇಷ. ಉಡುಪಿ ಹತ್ತಿರದ ಪಾಜಕದಲ್ಲಿ (ಬೆಳ್ಳೆಗ್ರಾಮ) ಕ್ರಿ.ಶ. ೧೨೦೦ರಲ್ಲಿ ಜನಿಸಿದ ಇವರ ಬಾಲ್ಯದ ಹೆಸರು ವಾಸುದೇವ ಹಾಗೂ ಶಿಕ್ಷಣ ನಡೆದದ್ದು ಉಡುಪಿಯಲ್ಲಿ. ಪೂರ್ಣಪ್ರಜ್ಞ ಎಂದು ಸನ್ಯಾಸಾಶ್ರಮ ಸ್ವೀಕರಿಸಿದಾಗ ಧರಿಸಿದ ಹೆಸರು ಮುಂದೆ ಪಟ್ಟಾಧಿಕಾರಕ್ಕೆ ಬಂದಾಗ ಆನಂದತೀರ್ಥ ಎಂದಾಯಿತು. ಇವರು ಕುಂಬಳೆ, ವಿಷ್ಣುಮಂಗಲ, ಅನಂತಶಯನ, ಕನ್ಯಾಕುಮಾರಿ, ರಾಮೇಶ್ವರ, ಬದರೀ, ಬಂಗಾಳ, ಒರಿಸ್ಸಾ, ಆಂಧ್ರ, ಕಳಿಂಗ, ಗೋವಾ ಮೊದಲಾದೆಡೆ ಸಂಚರಿಸಿ ತಮ್ಮ ದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಿದರು. ಉಡುಪಿಯಲ್ಲಿ ಶ್ರೀಕೃಷ್ಣನ ಪ್ರತಿಷ್ಠಾಪನೆ ಮಾಡಿದ್ದಲ್ಲದೆ, ಎಂಟು ಮಂದಿ ಶಿಷ್ಯರಿಗೆ ಸನ್ಯಾಸವಿತ್ತು. ಪರ್ಯಾಯದಲ್ಲಿ ಕೃಷ್ಣನ ಪೂಜಾದಿಗಳನ್ನು ನಡೆಸುವ ಕಾರ್ಯವನ್ನು ಯತಿಗಳಿಗೆ ವಹಿಸಿಕೊಟ್ಟರು. ಸುಬ್ರಹ್ಮಣ್ಯದಲ್ಲಿ ಮತ್ತೊಂದು ಮಠ ಸ್ಥಾಪಿಸಿ, ಅದರ ಪೀಠಾಧಿಕಾರವನ್ನು ತಮ್ಮನಾದ ವಿಷ್ಣುತೀರ್ಥಾಚಾರ್ಯಗೆ ವಹಿಸಿದರು. ಮಧ್ವಾಚಾರ್ಯರು ಬಾದರಾಯಣ ಸೂತ್ರಗಳಿಗೆ ತಮ್ಮ ದ್ವೈತ ಸಿದ್ಧಾಂತದ ಹಿನ್ನೆಲೆಯಲ್ಲಿ ಭಾಷ್ಯವನ್ನು, ಭಾರತ ತಾತ್ಪರ್ಯ ನಿರ್ಣಯವೇ ಮೊದಲಾದ ಗ್ರಂಥಗಳನ್ನು ರಚಿಸಿದ್ದಾರೆ. ಶೈವರ ಪ್ರಧಾನ ಕೇಂದ್ರವಾಗಿದ್ದ ಶಿವಳ್ಳಿಯು ಮುಂದೆ ಮಾಧ್ವ ಪಂಥದವರ ಪ್ರಮುಖ ನೆಲೆಯಾಗಿ ರೂಪುಗೊಂಡದ್ದರ ಪರಿಣಾಮವಾಗಿ ಆ ಮತ ಸ್ವೀಕರಿಸಿದ ತುಳು ಬ್ರಾಹ್ಮಣರಿಗೆ ಶಿವಳ್ಳಿ ಬ್ರಾಹ್ಮಣರೆಂದೂ ಹೆಸರಾಗಿದೆ. ಈ ಅನುಯಾಯಿಗಳು ಮಧ್ವರ ನಿರ್ದೇಶನದಂತೆ ತಮ್ಮ ದೇಹದ ಮೇಲೆ ಪಂಚಮುದ್ರೆ, ಗೋಪಿಚಂದನ ನಾಮಗಳನ್ನು ವಿಶೇಷವಾಗಿ ಧಾರಣೆ ಮಾಡುತ್ತಾರೆ. ಮಧ್ವ ತತ್ವಾನುಯಾಯಿಗಳಾದವರಿಂದ ದಾಸಕೂಟಗಳು ರಚನೆಯಾಗಿವೆ. ವಿಜಯದಾಸ, ಕನಕದಾಸ, ಪುರಂದರದಾಸರಂತಹ ಖ್ಯಾತ ಅನುಭಾವಿ ಕೀರ್ತನಕಾರರು ಈ ಪಂಥಕ್ಕೆ ಸೇರಿದವರಾಗಿದ್ದರು. ರಾಮಾನುಜರ ಹಾಗೆ ಮಧ್ವಾಚಾರ್ಯರ ತತ್ವ ಪ್ರಚಾರಗಳು ಉತ್ತರಭಾರತದಲ್ಲಿ ಭಕ್ತಿ ಪಂಥದ ಬೆಳವಣಿಗೆಗೆ ಕಾರಣವಾಗಿವೆ. ಬಂಗಾಳದಲ್ಲಿ ಪ್ರಸಿದ್ಧರಾದ ಚೈತನ್ಯರು ದೀಕ್ಷೆ ಪಡೆದದ್ದು ಒಬ್ಬ ಮಾಧ್ವಮತದ ಗುರುವಿನಿಂದಲೇ. ಚೈತನ್ಯರು ಉಡುಪಿಗೆ ಬಂದು ಆಚಾರ್ಯಮಧ್ವರು ಕೃಷ್ಣಗುಡಿಯಲ್ಲಿ ಹಚ್ಚಿದ್ದ ನಂದಾದೀಪದಿಂದ ತಾನೊಂದು ಹಣತೆಯನ್ನು ಹಚ್ಚಿ ಅದನ್ನು ವೃಂದಾವನದಲ್ಲಿ ಸ್ಥಾಪಿಸಿದರು. ಬಂಗಾಲದಲ್ಲಿ ಮಾಧ್ವಗೌಡೀಯ ಮಠದ ಯತಿಗಳಾಗಿದ್ದ ಎ.ಸಿ. ಭಕ್ತವೇದಾಂತ ಪ್ರಭುಪಾದರೇ ಮುಂದೆ ವಿಶ್ವವಿಖ್ಯಾತವಾದ ಅಂತಾರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಸ್ಥೆ (ISKCON)ಯನ್ನು ಸ್ಥಾಪಿಸಿದರು. ಗುಜರಾತಿನ ವೈಷ್ಣವ ಮತವೂ ಮಾಧ್ವ ತತ್ವದ ಪ್ರಭಾವಕ್ಕೆ ಒಳಗಾಗಿದ್ದಿತು.

## ಬೌದ್ಧ

ದಕ್ಷಿಣಕನ್ನಡದ ಹಾಗೆ ಉಡುಪಿ ಭಾಗದಲ್ಲಿಯೂ ಬೌದ್ಧ ಧರ್ಮ ವ್ಯಾಪಕವಾಗಿ ಹರಡಿದ್ದಿತು ಎಂಬುದಕ್ಕೆ ಮೂಳೂರಿನಲ್ಲಿ ದೊರೆತಿರುವ ೧೦ನೇ ಶತಮಾನದ ಕೃಷ್ಣಶಿಲೆಯ ಬುದ್ಧನ ಮೂರ್ತಿ, ಬಾರಕೂರಿನಲ್ಲಿನ ಬುದ್ಧ ವಿಗ್ರಹ, ಅಂಕದಕಟ್ಟೆ (ಕುಂದಾಪುರ)ಯಲ್ಲಿನ ಬೌದ್ಧ ಚೈತ್ಯಾಲಯದ ಅವಶೇಷಗಳು ಸಾಕ್ಷ್ಯಗಳಾಗುತ್ತವೆ. ತುಳುನಾಡಿನಲ್ಲಿನ ದುರ್ಗಾಪರಮೇಶ್ವರಿ ದೇವಲಗಳೂ, ಶಾಸ್ತಾವು ಕಲ್ಲುಗಳೂ ಬೌದ್ಧಧರ್ಮದವರ ಪೂಜಾಸ್ಥಳಗಳಾಗಿದ್ದಿರಬಹುದೆಂಬುದು ಭಾಸ್ಕರ ಆನಂದ ಸಾಲೆತ್ತೂರೆ ಅವರ ಅಭಿಪ್ರಾಯವಾಗಿದೆ. ಬೌದ್ಧರಲ್ಲಿ ಮಹಾಯಾನ, ಹೀನಯಾನ ಎಂಬ ಶಾಖೆಗಳಿವೆ. ಮಹಾಯಾನವು ಹಿಂದೂ ಧರ್ಮದ ಪ್ರೇರಣೆಯಿಂದ ಹುಟ್ಟಿಕೊಂಡ ಬೌದ್ಧ ಆರಾಧನಾ ಪಂಥವಾಗಿದೆ. "ಬುದ್ಧನು ಉಪದೇಶಿಸಿದ ಅಷ್ಟಪಥ ಧರ್ಮವನ್ನು ಬಿಟ್ಟು, ಬುದ್ಧನನ್ನು ದೇವರ ಅವತಾರವೆಂದು ಹೇಳಿ, ಆದಿ ಬುದ್ಧನೊಂದಿಗೆ ಇನ್ನೂ ಬುದ್ಧರಾಗಲಿಕ್ಕಿರುವ ಬೋಧಿಸತ್ವರೆಂಬ ದೇವತಾ ಸಮಾನರಾದ ಕಾಲ್ಪನಿಕ ಮಹಾವ್ಯಕ್ತಿಗಳನ್ನು ಪೂಜಿಸಿ, ಅವರ ಪ್ರಸಾದದಿಂದ ಮೋಕ್ಷವನ್ನು ಸಂಪಾದಿಸಲೆಳಸುವುದೇ ಮಹಾಯಾನ" ಪಂಥ.

ಮಹಾಯಾನ ದೇವತಾ ಮಂದಿರಗಳಲ್ಲಿ ಕೆಲವು ಕಾಲದ ಬಳಿಕ ಬೋಧಿಸತ್ವರಾದ ಅವಲೋಕಿತೇಶ್ವರ ಅಥವಾ ಲೋಕೇಶ್ವರ ಮತ್ತು ತಾರಾಭಗವತಿಯರನ್ನು ಪೂಜಿಸುವುದು ರೂಢಿಯಾಯಿತು. ಮಂಗಳೂರಿನ ಕದಿರೆಯು ಈ ಮಹಾಯಾನ ಮತದ ಕೇಂದ್ರವಾಗಿದೆ. ಇಲ್ಲಿನ ಮಂಜುನಾಥ ದೇವಾಲಯವು ಮಹಾಯಾನದ ಬೌದ್ಧವಿಹಾರವಾಗಿದ್ದಿತು.

**ನಾಥಪಂಥ**

ನಾಥಪಂಥಕ್ಕೆ ತುಳುನಾಡಿನಲ್ಲಿ ಮಂಗಳೂರಿನ ಕದ್ರಿಯು ಮೂಲ ನೆಲೆಯಾಗಿದ್ದು, ವಿಟ್ಲ, ಗುರುಪುರ, ಪುತ್ತೂರು, ಸೂಡ ಹಾಗೂ ಕುಟಚಾದ್ರಿಗಳಲ್ಲಿ ಶಾಖಾಮಠಗಳಿವೆ. ಹೀಗೆಯೇ, ಕುಂದಾಪುರ ತಾಲೂಕಿನ ಎಡಮೊಗೆಯಲ್ಲಿ ಒಂದು ಮಠವಿದ್ದು, ಅದನ್ನು ಹಲವರಿಮಠ ಎಂದು ಗುರುತಿಸಲಾಗುತ್ತಿದೆ. ಧರ್ಮನಾಥ ಪರಂಪರೆಗೆ ಸೇರಿದ ಈ ಮಠಕ್ಕೆ ಪ್ರಾಚೀನ ಇತಿಹಾಸವಿದೆ ಎಂದು ಹೇಳಲಾಗಿದೆ. ನಾಥಪಂಥವು ಬೌದ್ಧರ ಮಹಾಯಾನ ಹಾಗೂ ಶೈವ ತಾಂತ್ರಿಕ ಮಾರ್ಗಗಳಿಂದ ರೂಪಿತವಾದ ಒಂದು ಪಂಥವಾಗಿದೆ. ಎಂಟನೇ ಶತಮಾನದಲ್ಲಿ ಬೌದ್ಧಮತವು ಕ್ಷೀಣಿಸಿದ್ದಾಗ ನಾಥಪಂಥವು ಹುಟ್ಟಿ, ಬಲವಾಗಿ ಬೆಳೆಯಿತು. ಇದನ್ನು ಉತ್ತರ ಭಾರತದ ಪಾರ್ಶ್ವನಾಥನೆಂಬ ರಾಜಕುಮಾರ ಸ್ಥಾಪಿಸಿದನೆಂದೂ, ಮತ್ಸ್ಯೇಂದ್ರನಾಥ ಮತ್ತು ಗೋರಕನಾಥರು ಅದನ್ನು ಭಾರತದಾದ್ಯಂತ ಪ್ರಚುರಪಡಿಸಿದರೆಂದು ನಂಬಲಾಗಿದೆ. ಲೌಕಿಕ ಬಯಕೆಗಳನ್ನು ಬಿಟ್ಟು, ಸನ್ಯಾಸ ಸ್ವೀಕರಿಸಿ, ಯೋಗಸಾಧನೆ ಮಾಡುವುದೇ ಮುಕ್ತಿಸಾಧಕವೆಂದು ನಾಥಪಂಥೀಯರು ನಂಬುತ್ತಾರೆ. ಮತ್ಸೇಂದ್ರನಾಥನು ನಿಧನಾನಂತರ ಲೋಕೇಶ್ವರನಲ್ಲಿ ಐಕ್ಯನಾದನೆಂಬ ನಂಬಿಕೆಯಿಂದ ಆತನ ಅನುಯಾಯಿಗಳಾದ ಜೋಗಿಗಳು ಲೋಕೇಶ್ವರನನ್ನು ಪೂಜಿಸುತ್ತಾರೆ. ಜೋಗಿಯರು ಶಿವನೊಂದಿಗೆ ಭೈರವ ಹಾಗೂ ಶಕ್ತಿ (ದೇವಿ)ಯನ್ನು ಪೂಜಿಸುತ್ತಾರೆ.

**ಜೈನ**

ದಕ್ಷಿಣಕನ್ನಡ ಜಿಲ್ಲೆಯ ಮೂಡಬಿದರೆಯ ಹಾಗೆ ಉಡುಪಿ ಜಿಲ್ಲೆಯ ಕಾರ್ಕಳ, ವೇಣೂರು ಹಾಗೂ ವರಂಗಗಳು ರಾಜ್ಯಮಟ್ಟದಲ್ಲಿ ಗುರುತಿಸುವಂತಹ ಜೈನ ಕೇಂದ್ರಗಳಾಗಿವೆ. ಎರಡನೇ ಶತಮಾನದಲ್ಲಿ ಜೈನವರ್ತಕರು ಪಾಂಡ್ಯ ದೇಶದಿಂದ ಕೇರಳಮಾರ್ಗವಾಗಿ ಬಾರಕೂರಿಗೆ ಬರುವ ಮೂಲಕ ತುಳುನಾಡಿಗೆ ಜೈನಧರ್ಮದ ಪ್ರವೇಶವಾಯಿತೆಂಬುದು ಎಂ.ಗೋವಿಂದಪೈ ಮತ್ತಿತರ ಕೆಲ ಸಂಶೋಧಕರ ಅಭಿಪ್ರಾಯವಾಗಿದೆ. ಪಿ.ಎನ್.ನರಸಿಂಹಮೂರ್ತಿ ಅವರು ಶೋಧಿಸಿದ ಐದನೇ ಶತಮಾನದ ಮುರಕಲ್ಲಿನ ಮೃತ್ಪಾತ್ರೆಯ ಮೇಲೆ ಜೈನರ ಯಾಪನೀಯ ಪಂಥದ ಉಲ್ಲೇಖವಿದೆ. ಏಳನೇ ಶತಮಾನದ ಹೊತ್ತಿಗೆ ಆಳುಪರ ಆಶ್ರಯವು ಜೈನಧರ್ಮಕ್ಕೆ ದೊರೆತಿದ್ದಿತು. ಆಳುಪರ ಬಳಿಕ ಅಧಿಕಾರಕ್ಕೆ ಬಂದ ಜೈನ ಅರಸರು ಜೈನ ಹಾಗೂ ಹಿಂದೂ ಧರ್ಮಗಳೆರಡಕ್ಕೂ ಸಮಾನ ಪ್ರೋತ್ಸಾಹ ಕೊಟ್ಟರು. ಅವರು ಜೈನ ತೀರ್ಥಂಕರರನ್ನಲ್ಲದೆ ಹಿಂದೂ ದೇವರುಗಳನ್ನೂ ಪೂಜಿಸಿದರು. ಹೀಗಾಗಿ, ಬಸದಿಗಳ ಹಾಗೆ ಹಿಂದೂ ದೇವಾಲಯಗಳನ್ನು ನಿರ್ಮಿಸಿದರು ಹಾಗೂ ಅವಕ್ಕೆ ದಾನ-ದತ್ತಿಗಳನ್ನು ನೀಡಿದರು. ವರಂಗವು ರಾಜ್ಯದ ಅತ್ಯಂತ ಪ್ರಾಚೀನ ಜೈನ ಕ್ಷೇತ್ರಗಳಲ್ಲಿ ಒಂದೆನಿಸಿದೆ.ಲಲಿತ ಕೀರ್ತಿ ಮುನಿ ಪರಂಪರೆಯ ಕಾರ್ಕಳ ಮಠ ಹಾಗೂ ಚಾರುಕೀರ್ತಿ ಮುನಿ ಪರಂಪರೆಯ ಮೂಡಬಿದರೆ ಮಠಗಳು ಜೈನರ ಪ್ರಮುಖ ಧಾರ್ಮಿಕ ತಾಣಗಳಾಗಿವೆ. ಜೈನ ಮುನಿಗಳು ತಮ್ಮ ಬದುಕು ಹಾಗೂ ಪ್ರವಚನಗಳಿಂದ ಸಾಮಾಜಿಕರನ್ನು ಧಾರ್ಮಿಕ ಕಾರ್ಯಗಳತ್ತ ಸೆಳೆಯುತ್ತಿದ್ದರು. ಉತ್ತಮಸೆಟ್ಟಿ ಎಂಬ ಜೈನ ಶ್ರೇಷ್ಠಿಯು ಮುನಿಯ ಉಪದೇಶದಿಂದ ಸಲ್ಲೇಖನ ವ್ರತ ಕೈಗೊಂಡು, ಸಮಾಧಿ ಮರಣ ಹೊಂದಿದುದಕ್ಕೆ ಮೂಡುಬಿದರೆಯ ಸೆಟ್ರ ಬಸದಿಯಲ್ಲಿರುವ ನಿಷಿಧಿ ಶಾಸನ ಸಾಕ್ಷಿಯಾಗಿದೆ. ಇದೇ ಮೂಡುಬಿದರೆಯ ಎರಡು ಕೇರಿಗಳವರು ದೀಪಾವಳಿ ಹಬ್ಬದಲ್ಲಿ ಮೋಜಿಗಾಗಿ ಹೊಡೆದಾಡಿ ರಕ್ತಹರಿಸುತ್ತಿದ್ದುದನ್ನು ಕಂಡ ಜೈನ ಮುನಿಯೊಬ್ಬರು ತನ್ನ ಪರಿವಾರ ಸಮೇತ ಉಪವಾಸ ಮಾಡಿ ಜನರನ್ನು ಪರಿವರ್ತಿಸಿದ್ದರು. ಅದರಿಂದಾಗಿ ಬಸದಿಯಲ್ಲಿ ಲಕ್ಷದೀಪೋತ್ಸವದ ಮೂಲಕ ಹಬ್ಬ ಮಾಡುವುದಾಗಿ ಜನ ಪ್ರತಿಜ್ಞೆ ಕೈಗೊಂಡ ವಿಚಾರವೂ ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ (ಕಾರ್ಕಳ

ಒಂದು ಪ್ರಾದೇಶಿಕ ಅಧ್ಯಯನ, ಪು.೩೮). ಕಾರ್ಕಳ, ವೇಣೂರಿನಲ್ಲಿನ ಗೊಮ್ಮಟಶಿಲ್ಪಗಳು ಉಲ್ಲೇಖನೀಯ ವಾಗಿವೆ. ಹಿರಿಯಂಗಡಿಯು ಜೈನಧರ್ಮದ ಕೇಂದ್ರವಾಗಿದ್ದಿತು. ಹಟ್ಟಿಯಂಗಡಿಯ ಚಂದ್ರನಾಥ ಬಸದಿ ಸುಮಾರು ಎಂಟನೇ ಶತಮಾನದಷ್ಟು ಪುರಾತನವಾದುದು. ಜೈನಧರ್ಮದ ಪ್ರಕಾರ ಜನ್ಮಾಂತರದ ಕರ್ಮಗಳಿಗನುಗುಣವಾಗಿ ಆತ್ಮನು ರೂಪಧಾರಣೆ ಮಾಡುತ್ತಾನೆ. ದೇವ, ಮಾನವ, ನರಕ, ತಿರ್ಯಗ್ ಎಂಬ ಚತುರ್ಗತಿಗಳಲ್ಲಿ ಮನುಷ್ಯ ಗತಿಯು ಶ್ರೇಷ್ಠವಾದುದು. ದೇವಗತಿಗೆ ಹೋಗಿ ಸುಖ ಅನುಭವಿಸಿದರೂ ಅಲ್ಲಿ ಆತ್ಮನಿಗೆ ಬಿಡುಗಡೆಯಿಲ್ಲ. ಏಕೆಂದರೆ, ಮನುಷ್ಯ ಜನ್ಮದಲ್ಲಿ ಮಾತ್ರ ಆತ್ಮನಿಗೆ ಅಂಟಿದ ಕರ್ಮಬಂಧಗಳನ್ನು ಕಳಚಿಕೊಂಡು ಮುಕ್ತನಾಗುವುದಕ್ಕೆ ಅವಕಾಶವಿದೆ. ಅಂತೆಯೇ, ಮನುಷ್ಯ ಜನ್ಮವೆಂಬುದು ಪೂರ್ವ ನಿರ್ಧಾರಿತವಾದುದು.

## ಕ್ರೈಸ್ತ

ಪೋರ್ಚುಗಲ್‌ನಿಂದ ಬಂದ ಪ್ರವಾಸಿ ವಾಸ್ಕೋಡಗಾಮನಂತಹವರ ಅನಂತರವಂತೂ ಕ್ರೈಸ್ತಧರ್ಮವು ಕರಾವಳಿಯಲ್ಲಿ ಬಲವಾಗಿ ಕಾಲಿಟ್ಟಿತು. ಸಮುದ್ರ ತೀರದ ಪಟ್ಟಣಗಳು ಬಹು ಹಿಂದೆಯೇ ಕ್ರೈಸ್ತರ ನೆಲೆಗಳಾಗಿದ್ದವೆಂಬುದಕ್ಕೆ ಬಸರೂರು, ಗಂಗೊಳ್ಳಿ ಮೊದಲಾದವು ನಿದರ್ಶನ ಒದಗಿಸುತ್ತವೆ. ೧೫೭೦ರಲ್ಲಿ ಜೆಸ್ವಿಟ್ ಸನ್ಯಾಸಿಗಳು ಬಸರೂರಿನಲ್ಲಿ ಚರ್ಚ್ ಕಟ್ಟಿದರು. ೧೬೩೮ರ ಪೋರ್ಚುಗೀಸ್ ದಾಖಲೆಯೊಂದು ಗಂಗೊಳ್ಳಿಯಲ್ಲಿದ್ದ ಶೈವ ದೇವಾಲಯವೊಂದನ್ನು ಬೀಳಿಸಿ, ಚರ್ಚ್ ನಿರ್ಮಿಸಿದ್ದನ್ನು ತಿಳಿಸುತ್ತದೆ. ಗೋವೆಯ ಪೋರ್ಚುಗೀಸರ ವಶವಾದ ಮೇಲೆ, ಮತಾಂತರಗೊಂಡ ಕ್ರೈಸ್ತರು ೧೫೬೦ರಲ್ಲಿ ಇಂಕ್ವಿಜಿಷನ್ ಎಂಬ ಧಾರ್ಮಿಕ ನ್ಯಾಯಾಲಯಗಳ ಉಗ್ರಕ್ರಮಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಕರ್ನಾಟಕದ ಕರಾವಳಿ ಜಿಲ್ಲೆಗಳಿಗೆ ಪಲಾಯನ ಮಾಡಿದರು (ಕನ್ನಡ ವಿಷಯ ವಿಶ್ವಕೋಶ, ಪು.೪೨೪). ಆ ಮುಂದೆಯೂ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಮತ್ತಿತರ ಕಾರಣಗಳಿಗಾಗಿ ತುಳುನಾಡಿಗೆ ವಲಸೆ ಬಂದು ನೆಲೆನಿಂತ ಕ್ಯಾಥೋಲಿಕ್ ಕ್ರಿಶ್ಚಿಯನ್ನರನ್ನು ಕೊಂಕಣಿ ಕ್ರಿಶ್ಚಿಯನ್ನರೆಂದು ಕರೆಯಲಾಗುತ್ತದೆ. ೧೯ನೇ ಶತಮಾನದ ಹೊತ್ತಿಗೆ ಕ್ರೈಸ್ತ ಮಿಶನರಿಗಳು ಈ ಭಾಗದ ಜನಸಾಮಾನ್ಯರೊಂದಿಗೂ ವಿಶೇಷವಾಗಿ ಬೆರೆಯತೊಡಗಿದ್ದರು. ಧರ್ಮಪ್ರಸಾರವನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡಿದ್ದ ಇವರು ಸ್ಥಳೀಯ ಭಾಷೆಗಳಲ್ಲಿ ಬೈಬಲ್ ಮತ್ತು ಸುವಾರ್ತೆಗಳನ್ನು ಅನುವಾದಿಸಿ ಪ್ರಕಟಿಸುವುದು, ಇಲ್ಲಿನ ಪಾಡ್ದನ, ಗಾದೆ, ಒಗಟು ಮೊದಲಾದುವನ್ನು ಸಂಗ್ರಹಿಸುವುದು, ನಿಘಂಟು, ವ್ಯಾಕರಣ ಕೃತಿಗಳನ್ನು ರಚಿಸಿ ಪ್ರಕಟಿಸುವುದು, ಇಗರ್ಜಿಗಳಲ್ಲಿ ಅನಕ್ಷರಸ್ಥರಿಗೂ ಅರ್ಥವಾಗುವಂತೆ ಕನ್ನಡ ಹಾಗೂ ತುಳುವಿನಲ್ಲಿಯೇ ಪ್ರಾರ್ಥನೆಗಳನ್ನು ಮಾಡುವುದು ಮೊದಲಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ದೀನದಲಿತರ ಸೇವೆಗೂ ಮುಂದಾದ ಈ ಕ್ರೈಸ್ತ ಸಂಸ್ಥೆಗಳು ಅನೇಕ ಶಾಲಾಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಜಿಲ್ಲೆಯಲ್ಲಿ ಆಧುನಿಕ ಶಿಕ್ಷಣ ಪದ್ಧತಿಯ ಬೆಳವಣಿಗೆಗೂ ಕಾರಣವಾದವು. ಕ್ರೈಸ್ತ ಕೊಂಕಣಿ ಶಿಕ್ಷಣ ಸಂಸ್ಥೆಗಳು ಈಗಲೂ ಜಿಲ್ಲೆಯಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಕ್ರಿಸ್ತನ ತತ್ವಗಳನ್ನು ತಮ್ಮ ನಡೆನುಡಿಯಲ್ಲಿ ಕಾರ್ಯರೂಪಕ್ಕೆ ತಂದವರನ್ನು, ಕ್ರಿಸ್ತನಿಗಾಗಿ ಹಿಂಸೆ ಅಥವಾ ಸಾವನ್ನು ಎದುರಿಸಿದ ತಾತ್ವಿಕರನ್ನು ಕ್ರಿಶ್ಚಿಯನ್ನರು ಸೇಂಟ್ (ಸಂತ) ಎಂದು ಗೌರವಿಸುತ್ತಾರೆ. ಅವರ ಸ್ಮರಣಾರ್ಥ ಕಟ್ಟಿಸಿದ ಹಲವಾರು ಚರ್ಚ್ ಹಾಗೂ ಧಾರ್ಮಿಕ ಸಂಸ್ಥೆಗಳು ಜಿಲ್ಲೆಯಲ್ಲಿವೆ. ಕ್ರೈಸ್ತರಿಗಿದ್ದ ಆರ್ಥಿಕ ಸವಲತ್ತು ಹಾಗೂ ರಾಜಕೀಯ ಬೆಂಬಲಗಳಿಂದ ಅವರ ಚಟುವಟಿಕೆಗಳು ಸುಗಮವಾಗಿ ಸಾಗುವುದು ಸಾಧ್ಯವಿದ್ದಿತು. ತುಳುನಾಡಿನ ತೋನ್ಸೆ ಎಂಬುದು ಕ್ರಿಸ್ತನ ನೇರ ಅನುಯಾಯಿಯಾದ ಸೇಂಟ್‌ಥಾಮಸ್‌ನ ಭೇಟಿಯ ಫಲವಾಗಿ ಆತನ ಹೆಸರಿನಿಂದ ಹಾಗೂ ಪೆಟ್ರಿ ಎಂಬುದು ಸೇಂಟ್‌ಪೀಟರ್‌ನ ಹೆಸರಿನಿಂದಾಗಿ ರೂಪುಗೊಂಡ ಸ್ಥಳನಾಮಗಳಾಗಿವೆ.

## ಇಸ್ಲಾಂ

ಇಸ್ಲಾಂ ಎಂಬುದು ಅರಬ್ಬೀ ಮೂಲದ ಶಬ್ದ. 'ದೈವ ಸಂಕಲ್ಪಕ್ಕೆ ಶರಣಾಗತಿ' ಎಂಬುದು ಈ ಶಬ್ದದ ಅರ್ಥ. ಇಸ್ಲಾಂ ಧರ್ಮದ ಅನುಯಾಯಿಗಳನ್ನು ಮುಸಲ್ಮಾನರೆಂದು ಗುರುತಿಸಲಾಗುತ್ತಿದೆ. ಕುರಾನ್‌ನಲ್ಲಿ

ಹೇಳಿರುವಂತೆ ಇಸ್ಲಾಂ ಎಂಬ ಹೆಸರನ್ನು ಮೊದಲು ಕೊಟ್ಟವನು ಇಬ್ರಾಹೀಂ. ಅಲ್ಲಾ ಮತ್ತು ಪ್ರವಾದಿ ಪೈಗಂಬರರಲ್ಲಿ ನಂಬಿಕೆ ಇಡುವುದು, ದಿನಕ್ಕೆ ಐದು ಸಲ ಪ್ರಾರ್ಥನೆ ಮಾಡುವುದು, ರಂಜಾನ್ ಮಾಸದಲ್ಲಿ ಉಪವಾಸ ಮಾಡುವುದು, ತನ್ನ ಉಳಿತಾಯದ ಶೇ.೨.೫೦ರಷ್ಟನ್ನು ಬಡವರಿಗೆ ದಾನ ಮಾಡುವುದು (ಜಕಾತ್) ಮತ್ತು ಹಜ್ ಯಾತ್ರೆ ಮಾಡುವುದು ಈ ಐದೂ ಮುಸ್ಲಿಮರಿಗೆ ಕಡ್ಡಾಯವಾಗಿದೆ (ಕನ್ನಡ ವಿಶ್ವಕೋಶ – ಸಂ.II ಪು.೪೪೪). ದೇವರು ಒಬ್ಬನೇ. ಆತ ಅನಂತ, ರೂಪರಹಿತ. ದೇವರಿಗೆ ಹೋಲಿಕೆ ಹಾಗೂ ಆಕಾರ ಕೊಡಬಾರದು. ಪ್ರತಿಯೊಬ್ಬನೂ ಸ್ವಶ್ರಮದಿಂದ ಸಂಪಾದನೆ ಮಾಡಬೇಕು. ಪರರನ್ನು ಸೋದರರಂತೆ ಪರಿಭಾವಿಸಬೇಕು. ಇವು ಇಸ್ಲಾಂನ ಮುಖ್ಯ ಬೋಧನೆಗಳು. ಏಳನೆಯ ಶತಮಾನದ ಹೊತ್ತಿಗಾಗಲೇ ಪರ್ಷಿಯ ಮತ್ತು ಅರೇಬಿಯದ ವ್ಯಾಪಾರಿಗಳು ಮಂಗಳೂರು, ಉಳ್ಳಾಲ ಮೊದಲಾದ ಬಂದರುಪಟ್ಟಣಗಳಿಂದ ವಿದೇಶಿ ವ್ಯಾಪಾರ ನಡೆಸಿದ್ದರು. ಎಂಟನೇ ಶತಮಾನದ ಹೊತ್ತಿಗೆ ಮತಾಂತರ ಕಾರ್ಯವೂ ನಡೆದುದಲ್ಲದೆ, ಮಂಗಳೂರು, ಕಾಸರಗೋಡು, ಬಾರ್ಕೂರು ಮೊದಲಾದ ಸ್ಥಳಗಳಲ್ಲಿ ಮಸೀದಿಗಳನ್ನೂ ನಿರ್ಮಿಸಿದರು. ೧೧ನೇ ಶತಮಾನದ ವೇಳೆಗಾಗಲೇ ಅರಬ್ ದೇಶದಿಂದ ಬಂದ ಮುಸ್ಲಿಂ ವರ್ತಕರು ಕರ್ನಾಟಕದ ಕರಾವಳಿಯಲ್ಲಿ ಅಂಜಮಾನ್ (ಅಂಜುಮಾನ್) ಎಂಬ ವರ್ತಕ ಸಂಘಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ತಮ್ಮ ವಾಣಿಜ್ಯ ಚಟುವಟಿಕೆಗಳನ್ನು ಮುಂದುವರೆಸಿದರು. ಮುಂದೆ ೧೬ನೇ ಶತಮಾನದಲ್ಲಿ ಪೋರ್ಚುಗೀಸರು ಕರಾವಳಿಗೆ ಬಂದಾಗ ಈ ಪ್ರದೇಶಗಳ ಹಿಂದೂಗಳು ಹಾಗೂ ಮುಸ್ಲಿಮರು ಸೇರಿಕೊಂಡು ಅವರನ್ನು ವಿರೋಧಿಸಿದ್ದುಂಟು. ಕೋಟೇಶ್ವರದ ಕೊಡಿಹಬ್ಬದಲ್ಲಿ ಅಲ್ಲಿನ ಬ್ರಾಹ್ಮಣರಿಗೂ ಶೂದ್ರರಿಗೂ ಯಾವುದೋ ಕಾರಣಕ್ಕಾಗಿ ಭೀಕರ ಹೊಡೆದಾಟವಾಗಿ, ದೇವಾಲಯದ ಪೂಜೆಯೇ ನಿಂತುಹೋದಾಗ, ಅಳಿಯರಾಮರಾಜ ಮತ್ತು ಅವನ ತಮ್ಮ ವೆಂಕಟಾದ್ರಿಯರಿಗೆ ಧರ್ಮವಾಗಬೇಕೆಂದು ಬಾರಕೂರಿನ ರಾಜ್ಯಪಾಲಕ ಎಕದಳಖಾನನು ದಾನಾದಿಗಳನ್ನು ನೀಡಿ, ಮತ್ತೆ ಪೂಜಾಕಾರ್ಯ ನಡೆಯುವಂತೆ ಮಾಡಿದ್ದು ಸಹ ಉಲ್ಲೇಖನೀಯ ಸಂಗತಿಯಾಗಿದೆ. ಹೊರಗಿನಿಂದ ಬಂದ ಮುಸ್ಲಿಮ್ ವರ್ತಕರಿಂದಾಗಿ ತುಳು ನಾಡಿನಲ್ಲಿ ಬ್ಯಾರಿ ಸಮುದಾಯ ಹುಟ್ಟಿತು. ಬ್ಯಾರಿಗಳಿಗೆ ಅರಬ್ಬೀ ಭಾಷೆ ಬರುತ್ತಿರಲಿಲ್ಲವಾಗಿ ಸ್ಥಳೀಯವಾದ ಒಂದು ಸಮ್ಮಿಶ್ರ ಭಾಷೆಯನ್ನು ಅವರು ರೂಢಿಸಿಕೊಂಡರು. ಅದು ತುಳು, ಮಲಯಾಳ ಮಿಶ್ರಿತವಾಗಿದ್ದು, ಅದನ್ನು ಬ್ಯಾರಿ ಭಾಷೆ ಎಂದು ಕರೆಯಲಾಗುತ್ತಿದೆ. ಮತಾಂತರ ಪ್ರಕ್ರಿಯೆಗಳಿಂದಾಗಿ ಪುಸಲಾರ (ಹೊಸದಾಗಿ ಇಸ್ಲಾಂ ಧರ್ಮಕ್ಕೆ ಸೇರಿದವರು), ಮಾಪಿಳ್ಳೆ ಮೊದಲಾದ ಪಂಗಡಗಳೂ ಹುಟ್ಟಿಕೊಂಡವು. ತುಳುನಾಡಿನ ಮುಸ್ಲಿಮರಲ್ಲಿ ನವಾಯತ್, ಶಿಯಾ, ಸುನ್ನಿ ಎಂಬ ಒಳವಿಭಾಗಗಳೂ ಇವೆ.

## ಧರ್ಮವಾರು ಜನಸಂಖ್ಯಾ ವಿವರ

೨೦೦೧ರ ಜನಗಣತಿಯಂತೆ ಉಡುಪಿ ಜಿಲ್ಲೆಯಲ್ಲಿರುವ ಹಿಂದೂಗಳ ಒಟ್ಟು ಸಂಖ್ಯೆ ೯,೫೮,೩೮೯. ಇವರಲ್ಲಿ ಗ್ರಾಮೀಣ ಪ್ರದೇಶಕ್ಕೆ (೭,೮೭,೩೪೪) ಹೋಲಿಸಿದರೆ ನಗರ ಪ್ರದೇಶದಲ್ಲಿನ ಹಿಂದೂಗಳ ಸಂಖ್ಯೆ (೧,೭೧,೦೪೫) ಕಡಿಮೆಯೇ ಆಗಿದೆ. ಹಿಂದೂಗಳಲ್ಲಿ ಪುರುಷರಿಗಿಂತ (೪,೪೮,೭೬೩) ಸ್ತ್ರೀಯರ ಸಂಖ್ಯೆ (೫,೦೯,೬೨೬) ಹೆಚ್ಚಾಗಿದೆ. ನಗರ ಪ್ರದೇಶದಲ್ಲಿನ ಹಿಂದೂ ಸ್ತ್ರೀ–ಪುರುಷರ ಸಂಖ್ಯೆಯಲ್ಲಿ (ಕ್ರಮವಾಗಿ ೮೬,೭೪೧–೮೪,೩೦೪) ಸ್ವಲ್ಪ ಮಟ್ಟಿಗೆ ಮಾತ್ರ ಸಮಾನತೆ ಇದೆ. ಆದರೆ, ಗ್ರಾಮೀಣ ಭಾಗದಲ್ಲಿ ಇವರಿಬ್ಬರ ನಡುವಿನ ಅಂತರ ಹೆಚ್ಚಾಗಿದೆ. ಸಂಖ್ಯಾ ದೃಷ್ಟಿಯಿಂದ ಜಿಲ್ಲೆಯಲ್ಲಿ ಮುಸ್ಲಿಮರು ಎರಡನೆಯ ಸ್ಥಾನದಲ್ಲಿದ್ದಾರೆ. ಇವರ ಒಟ್ಟು ಸಂಖ್ಯೆ ೮೩,೦೫೯ರಲ್ಲಿ ಪುರುಷರು ೪೦,೬೨೭ ಮತ್ತು ಸ್ತ್ರೀಯರು ೪೨,೪೩೨ ರಷ್ಟು ಇದ್ದಾರೆ. ಮೂರನೇ ಸ್ಥಾನದಲ್ಲಿರುವ ಕ್ರಿಶ್ಚಿಯನ್ನರ ಒಟ್ಟು ಸಂಖ್ಯೆ ೬೫,೬೩೪ ಆಗಿದ್ದು, ಜೈನರ ಒಟ್ಟು ಸಂಖ್ಯೆ ಕೇವಲ ೪,೫೬೦ ಆಗಿದೆ. ಬೌದ್ಧರು, ಸಿಖ್ಖರು ಮತ್ತಿತರರು ತೀರ ಅಲ್ಪ ಸಂಖ್ಯೆಯಲ್ಲಿದ್ದಾರೆ. ಗಮನಿಸಬೇಕಾದ ವಿಶೇಷ ಅಂಶವೆಂದರೆ, ಜಿಲ್ಲೆಯಲ್ಲಿನ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ನರಲ್ಲಿ ಪುರುಷರಿಗಿಂತ ಸ್ತ್ರೀಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಸಿಖ್ಖರು, ಬೌದ್ಧರು ಹಾಗೂ ಜೈನ ಧರ್ಮೀಯರಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಕಡಿಮೆಯೇ ಇದೆ. ಸಾಕ್ಷರತೆಯ ಸಂಖ್ಯೆಗಳನ್ನು ಹೋಲಿಸಿದಾಗ ಹಿಂದೂ, ಮುಸ್ಲಿಂ,

ಜೈನ ಹಾಗೂ ಬೌದ್ಧರಲ್ಲಿ ಸಾಕ್ಷರಸ್ಥ ಮಹಿಳೆಯರ ಸಂಖ್ಯೆ ಕಡಿಮೆಯೇ ಇದೆ. ಆದರೆ, ಜಿಲ್ಲೆಯ ಕ್ರಿಶ್ಚಿಯನ್ನರು ಇತರರಿಗಿಂತ ಭಿನ್ನ ಪ್ರಗತಿ ತೋರಿದ್ದು ಅವರಲ್ಲಿ ಅಕ್ಷರ ಕಲಿತ ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವಿವರಕ್ಕೆ ಕೋಷ್ಟಕ ೩.೧೦ರಲ್ಲಿನ ಅಂಕಿಅಂಶಗಳನ್ನು ಅವಲೋಕಿಸಬಹುದಾಗಿದೆ.

**ದೇವರು-ಹಬ್ಬ-ಆಚರಣೆಗಳು**

ತುಳುನಾಡಿನ ದೇವಾಲಯಗಳಲ್ಲಿ ವೈದಿಕ ಮತ್ತು ಜಾನಪದ ಸಂಪ್ರದಾಯದಂತೆ ಆರಾಧಿಸುವ ಪೂಜಾ ಪದ್ಧತಿಯು ಆಚರಣೆಯಲ್ಲಿದೆ, ಕರಾವಳಿಯ ದೇವಾಲಯಗಳಲ್ಲಿ ಪಂಚಾಯತನ ಪದ್ಧತಿ ಅಂದರೆ ಶಿವ, ವಿಷ್ಣು, ದುರ್ಗೆ, ಸ್ಕಂದ ಮತ್ತು ಗಣಪತಿ ಪೂಜಿಸುವ ಸಂಪ್ರದಾಯವಿದೆ. ಅಂದರೆ ಒಂದೇ ದೇವಾಲಯದಲ್ಲಿ ಈ ಐದರಲ್ಲಿ ಒಂದು, ಪ್ರಧಾನ ದೇವತೆಯಾದರೆ, ಉಳಿದ ನಾಲ್ಕು ಪ್ರಾಕಾರ ದೇವತೆಗಳಾಗಿ ಪೂಜೆಗೊಳ್ಳುತ್ತವೆ. ಭೂತಾರಾಧನೆಯು ತುಳುನಾಡಿನಲ್ಲಿ ಸಾಮಾನ್ಯವಾದರೂ, ಸೂಕ್ಷ್ಮವಾಗಿ ನೋಡಿದಾಗ ಉಡುಪಿ, ಕುಂದಾಪುರ ಭಾಗಗಳಲ್ಲಿ ಬೊಬ್ಬರ್ಯ, ಪಂಜುರ್ಲಿಯಂತಹ ದೈವಗಳು ಹೆಚ್ಚಾಗಿ ಕಾಣಬರುತ್ತವೆ. ಉತ್ತರಭಾಗದಲ್ಲಿನ ಹಾಯ್ಗುಳಿ (ಹಾವಿನ ಆಕಾರದ) ಭೂತವನ್ನು, ದಕ್ಷಿಣದಲ್ಲಿ ಗುಳಿಕ ಹೆಸರಿನ ನಾಗದೇವತೆಯಾಗಿ ಪ್ರಧಾನವಾಗಿ ಆರಾಧಿಸಲಾಗುತ್ತದೆ.

ವಿವಿಧ ರೂಪಗಳಲ್ಲಿ ತಮ್ಮ ನಂಬುಗೆಯ ದೇವರುಗಳನ್ನು ಆಸ್ತಿಕರು ಪೂಜಿಸುವುದು ಸಹಜ. ಈ ಮೂರ್ತಿರೂಪಗಳು ಆರಾಧನಾ ಪರಂಪರೆಯ ಮಜಲುಗಳ ಸಾಕ್ಷಿಗಳೂ ಆಗಿರುತ್ತವೆ. ಉಡುಪಿ ಜಿಲ್ಲೆಯಲ್ಲಿಯೂ ಈ ಹಿನ್ನೆಲೆಯಲ್ಲಿ ಗಮನಿಸಬಹುದಾದ ಕೆಲವು ನಿದರ್ಶನಗಳಿವೆ. ಕಾರ್ಕಳ ತಾಲೂಕಿನ ನಲ್ಲೂರಿನಲ್ಲಿ ಹುತ್ತವನ್ನೇ ಲಕ್ಷ್ಮಿ ಎಂದು ಪೂಜಿಸಲಾಗುತ್ತಿದೆ. ಇದು ದೇವತಾ ಮೂರ್ತಿಗಳ ಪುರಾತನ ಪರಿಕಲ್ಪನೆಗೆ ಉತ್ತಮ ಉದಾಹರಣೆಯಾಗುತ್ತದೆ. ಖಾರ್ವಿಗಳು ನಾಣ್ಯ ತುಂಬಿದ ಕುಂಭವನ್ನೇ ದೇವಿ ಎಂದು ಪೂಜಿಸುತ್ತಾರೆ. ಕೊಲ್ಲೂರಿನ ಮೂಕಾಂಬಿಕೆಯನ್ನು ಲಿಂಗದರೂಪದಲ್ಲಿ ಪೂಜಿಸಲಾಗುತ್ತಿದೆ. ಶಕ್ತಿದೇವತೆಯನ್ನು ಲಿಂಗದರೂಪದಲ್ಲಿ ಪೂಜಿಸುವುದು ತುಳುನಾಡಿನಲ್ಲಿ ಸಾಮಾನ್ಯವಾಗಿರುವ ಪದ್ಧತಿಯಾಗಿದೆ. ಬಸರೂರಿನ ರಾವುತಕೇರಿಯ ದೇವಿಗುಡಿಯಲ್ಲಿ ಲಕ್ಷ್ಮಿ, ಸರಸ್ವತಿಯರನ್ನೂ ಲಿಂಗರೂಪದಲ್ಲಿ ಪೂಜಿಸಲಾಗುತ್ತಿದೆ. ಇಲ್ಲಿನ ವೀರಭದ್ರನ ಶಿಲ್ಪದ ಎದುರಿಗಿರುವ ಬೆತ್ತಲೆ ಪರಮೇಶ್ವರಿಯು ನಗ್ನದೇವತೆಯಾಗಿದ್ದು, ಅದರ ಕಾಲಿನ ಕೆಳಗೆ ಡ್ರಾಗನ್ ರೀತಿಯ ಪ್ರಾಣಿ ಶಿಲ್ಪವಿದೆ. ಹೆಬ್ರಿಯಲ್ಲಿ ಪಂಚಲೋಹದ ನಗ್ನ ಗಣಪತಿ ಮೂರ್ತಿ ಇದೆ. ಕಾಲಿನಲ್ಲಿ ಕುರಿಯೊಂದನ್ನು ಮೆಟ್ಟಿಕೊಂಡು, ಕುಕ್ಕುರುಗಾಲಲ್ಲಿ ಕುಳಿತ ಭಂಗಿಯಲ್ಲಿ ಹುಲಿಚೌಂಡಿಯ (ಪಿಲಿಚಾಮುಂಡಿ) ರೂಪವಿದೆ. ನೀಲಾವರದ ವೀರಭದ್ರನ ಪ್ರತಿಮೆಯು ಶ್ರೀಗಂಧದಲ್ಲಿ ರಚಿಸಿದ್ದಾಗಿದೆ.

ಹಿಂದೂಗಳಿಗೆ ಯುಗಾದಿಯು ಹೊಸ ವರ್ಷಾರಂಭವಾದುದರಿಂದ, ಜಿಲ್ಲೆಯಲ್ಲಿಯೂ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಸೌರಮಾನ ಪದ್ಧತಿಯವರು 'ವಿಷು' ಹಬ್ಬ ಮಾಡುತ್ತಾರೆ. ಯುಗಾದಿ ಹಬ್ಬದಂದು ಮನೆದೇವರ ಮುಂದೆ ಹಣ್ಣು ತರಕಾರಿ ಹಾಗೂ ಒಂದು ಕನ್ನಡಿ ಇಟ್ಟು, ಪೂಜೆ ಮಾಡಿ, ಮಾರನೇ ಬೆಳಿಗ್ಗೆ ಎದ್ದೊಡನೆ ಆ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವ ಪದ್ಧತಿ ಕೆಲವರಲ್ಲಿದೆ. ಆ ದಿವಸ ಮನೆಯ ಯಜಮಾನ ಸ್ನಾನ ಮಾಡಿ, ಮಡಿಯುಟ್ಟು ಮನೆಯ ಪ್ರಧಾನ ಸ್ಥಾನದಲ್ಲಿ ಕುಳಿತುಕೊಂಡಾಗ ಮನೆಯ ಕಿರಿಯರೆಲ್ಲಾ ಆತನಿಗೆ ನಮಸ್ಕರಿಸುತ್ತಾರೆ. ಅದೇ ದಿನ ಗೇಣಿ ಒಕ್ಕಲುಗಳು ಬಂದು ಬೆಳೆ ಕಾಣಿಕೆಯ ರೂಪದಲ್ಲಿ ಕಾಯಿ-ಪಲ್ಲೆಗಳನ್ನು ಒಪ್ಪಿಸುವ ಪದ್ಧತಿ ಇದ್ದಿತು. ಈ ದಿನವೇ ಬೇಸಾಯದ ಪ್ರಾರಂಭ- ಕೈಬೀಜ ಹಾಕುವುದು, ಗದ್ದೆಯಲ್ಲಿ ಉಳಲು ಎತ್ತು ಕಟ್ಟುವುದು ಇತ್ಯಾದಿ. ಜಿಲ್ಲೆಯಲ್ಲಿನ ಮರಾಠಿ ಕ್ಷತ್ರಿಯರ 'ದೇವರಮನೆ'ಯವರು ತಮ್ಮ ಮನೆ ಅಂಗಳದಲ್ಲಿ ಬಿದಿರಿನ ಕಂಬದ ತುದಿಗೆ ತಾಮ್ರದ ಚೊಂಬನ್ನು ಕವುಚಿಹಾಕಿ, ಮಾವಿನ ಎಲೆ, ಕೇಸರಿ ವಸ್ತ್ರ ಕಟ್ಟುತ್ತಾರೆ. ಬೆಳಿಗ್ಗೆ ಹೀಗೆ ಮಾಡಿ, ಪೂಜೆ, ಊಟ ಆದ ಮೇಲೆ ಮಧ್ಯಾಹ್ನಕ್ಕೆ ಕಂಬ ತೆಗೆಯುತ್ತಾರೆ. ಕೃಷ್ಣ ಜನ್ಮಾಷ್ಟಮಿ ಅಥವಾ ಗೋಕುಲಾಷ್ಟಮಿ ಇಲ್ಲಿನವರು ಆಚರಿಸುವ ದೊಡ್ಡ ಹಬ್ಬಗಳಲ್ಲಿ ಒಂದು. ಕೃಷ್ಣ ದೇವಾಲಯಗಳಲ್ಲಿ ವಿಶೇಷ ಪೂಜೆ ಇರುತ್ತದೆ. ವಿವಿಧ ಸ್ಪರ್ಧೆಗಳಿರುತ್ತವೆ. ಮಕ್ಕಳು ಕೋವಿಯಂತೆ ಸದ್ದು ಮಾಡುವ ಪೆಟ್ಲೋಳಿಗಳನ್ನು ಹಿಡಿದು ಆಟವಾಡುತ್ತಾರೆ.

## ಕೋಷ್ಟಕ ೩.೧೦: ಧರ್ಮವಾರು ಜನಸಂಖ್ಯಾ ವಿವರ

| ಧರ್ಮಗಳು | ಘಟಕ | ಒಟ್ಟು ಜನಸಂಖ್ಯೆ | | | ೦–೬ ವಯೋಗುಂಪು | | | ಸಾಕ್ಷರತೆ | | |
|---|---|---|---|---|---|---|---|---|---|---|
| | | ಒಟ್ಟು | ಪುರುಷರು | ಸ್ತ್ರೀಯರು | ಒಟ್ಟು | ಪುರುಷರು | ಸ್ತ್ರೀಯರು | ಒಟ್ಟು | ಪುರುಷರು | ಸ್ತ್ರೀಯರು |
| ಎಲ್ಲಾ ಧರ್ಮ | ಒಟ್ಟು | ೧೧೧೨೨೪೩ | ೫೨೨೨೩೧ | ೫೯೦೦೧೨ | ೧೧೪೫೮೧ | ೫೮೫೦೯ | ೫೬೦೭೨ | ೮೧೦೫೮೪ | ೪೦೯೧೩೫ | ೪೦೧೪೪೯ |
| | ಗ್ರಾಮೀಣ | ೯೦೫೮೯೦ | ೪೨೧೦೫೬ | ೪೮೪೮೩೪ | ೯೫೬೪೪ | ೪೮೮೭೬ | ೪೬೭೬೮ | ೬೪೭೯೦೩ | ೩೨೮೨೪೫ | ೩೧೯೬೫೮ |
| | ನಗರ | ೨೦೬೩೫೩ | ೧೦೧೧೭೫ | ೧೦೫೧೭೮ | ೧೮೯೩೭ | ೯೬೩೩ | ೯೩೦೪ | ೧೬೨೬೮೧ | ೮೫೮೯೦ | ೮೧೭೯೧ |
| ಹಿಂದೂ | ಒಟ್ಟು | ೯೫೮೩೮೯ | ೪೪೮೭೬೩ | ೫೦೯೬೨೬ | ೯೬೩೬೩ | ೪೯೨೪೪ | ೪೭೧೧೯ | ೬೮೭೧೧೭ | ೩೪೮೧೬೧ | ೩೩೮೯೫೬ |
| | ಗ್ರಾಮೀಣ | ೭೮೭೩೪೪ | ೩೬೪೪೫೯ | ೪೨೨೮೮೫ | ೮೧೨೧೧ | ೪೧೫೨೬ | ೩೯೬೮೫ | ೫೪೮೬೧೨ | ೨೭೬೫೪೦ | ೨೭೨೦೭೨ |
| | ನಗರ | ೧೭೧೦೪೫ | ೮೪೩೦೪ | ೮೬೭೪೧ | ೧೫೧೫೨ | ೭೭೧೮ | ೭೪೩೪ | ೧೩೮೫೦೫ | ೭೧೬೨೧ | ೬೬೮೮೪ |
| ಮುಸ್ಲಿಂ | ಒಟ್ಟು | ೮೩೦೫೯ | ೪೦೬೨೭ | ೪೨೪೩೨ | ೧೧೩೬೭ | ೫೭೬೪ | ೫೬೦೩ | ೬೩೯೩೯ | ೩೨೮೨೭ | ೩೧೧೧೨ |
| | ಗ್ರಾಮೀಣ | ೬೨೩೮೬ | ೩೦೪೩೭ | ೩೧೯೪೯ | ೮೮೫೦ | ೪೪೮೯ | ೪೩೬೧ | ೪೭೬೦೬ | ೨೪೪೫೯ | ೨೩೧೪೭ |
| | ನಗರ | ೨೦೬೭೩ | ೧೦೧೯೦ | ೧೦೪೮೩ | ೨೫೧೭ | ೧೨೭೫ | ೧೨೪೨ | ೧೬೩೩೩ | ೮೩೬೮ | ೭೯೬೫ |
| ಕ್ರಿಶ್ಚಿಯನ್ | ಒಟ್ಟು | ೬೫೬೩೪ | ೩೦೨೨೦ | ೩೫೪೧೪ | ೬೩೨೩ | ೩೨೨೦ | ೩೧೦೩ | ೫೫೨೧೨ | ೨೫೯೦೪ | ೨೯೩೦೮ |
| | ಗ್ರಾಮೀಣ | ೫೧೯೩೮ | ೨೪೦೬೧ | ೨೭೮೭೭ | ೫೧೨೩ | ೨೬೨೨ | ೨೫೦೧ | ೪೩೨೧೦ | ೨೦೪೭೫ | ೨೨೭೩೫ |
| | ನಗರ | ೧೩೬೯೬ | ೬೧೫೯ | ೭೫೩೭ | ೧೨೦೦ | ೫೯೮ | ೬೦೨ | ೧೨೦೦೨ | ೫೪೨೯ | ೬೫೭೩ |
| ಸಿಖ್ | ಒಟ್ಟು | ೨೨೫ | ೧೨೪ | ೧೦೧ | ೬ | ೬ | ೦ | ೨೦೫ | ೧೧೬ | ೮೯ |
| | ಗ್ರಾಮೀಣ | ೭೩ | ೩೮ | ೩೫ | ೩ | ೩ | ೦ | ೬೧ | ೩೪ | ೨೭ |
| | ನಗರ | ೧೫೨ | ೮೬ | ೬೬ | ೩ | ೩ | ೦ | ೧೪೪ | ೮೨ | ೬೨ |
| ಬೌದ್ಧ | ಒಟ್ಟು | ೧೧೬ | ೭೦ | ೪೬ | ೭ | ೫ | ೨ | ೧೦೧ | ೬೩ | ೩೮ |
| | ಗ್ರಾಮೀಣ | ೩೯ | ೧೮ | ೨೧ | ೫ | ೩ | ೨ | ೨೭ | ೧೩ | ೧೪ |
| | ನಗರ | ೭೭ | ೫೨ | ೨೫ | ೨ | ೨ | ೦ | ೭೪ | ೫೦ | ೨೪ |
| ಜೈನ | ಒಟ್ಟು | ೪೫೬೦ | ೨೩೧೪ | ೨೨೪೬ | ೪೭೬ | ೨೫೨ | ೨೨೪ | ೩೮೪೪ | ೧೯೮೩ | ೧೮೬೧ |
| | ಗ್ರಾಮೀಣ | ೩೮೮೮ | ೧೯೫೩ | ೧೯೩೫ | ೪೧೯ | ೨೧೯ | ೨೦೦ | ೩೨೪೭ | ೧೬೬೦ | ೧೫೮೭ |
| | ನಗರ | ೬೭೨ | ೩೬೧ | ೩೧೧ | ೫೭ | ೩೩ | ೨೪ | ೫೯೭ | ೩೨೩ | ೨೭೪ |
| ಇತರೆ | ಒಟ್ಟು | ೪೪ | ೧೭ | ೨೭ | ೭ | ೨ | ೫ | ೩೪ | ೧೪ | ೨೦ |
| | ಗ್ರಾಮೀಣ | ೩೨ | ೧೧ | ೨೧ | ೭ | ೨ | ೫ | ೨೨ | ೮ | ೧೪ |
| | ನಗರ | ೧೨ | ೬ | ೬ | ೦ | ೦ | ೦ | ೧೨ | ೬ | ೬ |
| ಧರ್ಮ ಸೂಚಿಸದವರು | ಒಟ್ಟು | ೨೧೬ | ೯೬ | ೧೨೦ | ೩೨ | ೧೬ | ೧೬ | ೧೩೨ | ೬೭ | ೬೫ |
| | ಗ್ರಾಮೀಣ | ೧೯೦ | ೭೯ | ೧೧೧ | ೨೬ | ೧೨ | ೧೪ | ೧೧೮ | ೫೬ | ೬೨ |
| | ನಗರ | ೨೬ | ೧೭ | ೯ | ೬ | ೪ | ೨ | ೧೪ | ೧೧ | ೩ |

*ಆಧಾರ : ಭಾರತೀಯ ಜನಗಣತಿ ೨೦೦೧.*

ವಿವಿಧ ವೇಷಗಳನ್ನು ಹಾಕುವುದೂ ಉಂಟು. ಉಡುಪಿಯಲ್ಲಿ ಮೊಸರು ಕುಡಿಕೆ ಒಡೆಯುವ (ವಿಟ್ಲಪಿಂಡಿ) ಕಾರ್ಯಕ್ರಮಕ್ಕೆ ಬಹಳ ಜನ ಸೇರುತ್ತಾರೆ.

**ಬಲೀಂದ್ರ ಪೂಜೆ :** ತುಳುನಾಡಿನವರು ದೀಪಾವಳಿಯನ್ನು ನಾಡಹಬ್ಬದ ಸಂಭ್ರಮದಿಂದಲೇ ಆಚರಿಸುತ್ತಾರೆ. ಕೃಷಿಯೊಂದಿಗೆ ನಿಕಟ ಸಂಬಂಧ ಹೊಂದಿರುವ ಈ ಹಬ್ಬದಲ್ಲಿ ಸಹಜವಾಗಿಯೇ ಭೂಮಿ, ಬೆಳೆ ಹಾಗೂ ದನಗಳಿಗೆ ಸಂಬಂಧಿಸಿದ ಹಲವು ಆಚರಣೆಗಳು ಪ್ರಧಾನವಾಗಿ ಕಾಣಬರುತ್ತವೆ. ಕೆಲವು ಕಡೆ "ಇದು ಹೊಸ ಬತ್ತ, ಹೊಸ ಅವಲಕ್ಕಿ, ಹೊಸ ಅನ್ನವನ್ನು ಮೊದಲು ಸವಿಯುವ ಹಬ್ಬವೂ ಆಗಿದೆ". ಬಲಿಯು ಈ ಭೂಮಿಯ ಒಡೆಯನೆಂದೂ ಆತನು ಉತ್ತರಭಾಗದಿಂದ ಪ್ರಾರಂಭಿಸಿ ಎಲ್ಲರ ಮನೆಗೂ ಬಂದು ಆ ವರ್ಷದ ಹೊಸ ಬೆಳೆಯ ಭಾಗವನ್ನು ಸ್ವೀಕರಿಸುತ್ತಾನೆಂದೂ ಇಲ್ಲಿನ ಜನ ನಂಬುತ್ತಾರೆ. ಬಲೀಂದ್ರನ ಆರಾಧನೆ (ದೀಪಾವಳಿ) ಮೂರು ದಿನ ನಡೆಯುತ್ತದೆ. ಮನೆಯ ಎದುರಿನ ಅಂಗಳದಲ್ಲಿರುವ ತುಳಸಿ ಕಟ್ಟೆಯ ಹತ್ತಿರ ಹಾಲೆ ಮರದ ಗೆಲ್ಲು ಅಥವಾ ಬಾಳಿದಿಂಡನ್ನು ನೆಟ್ಟು ಅಲಂಕರಿಸಿ ಬಲೀಂದ್ರನೆಂದು ನಂಬಲಾಗುತ್ತದೆ. ದೀಪಾವಳಿಯ ಮೂರು ದಿನ ದೀಪವಿಡುವುದು, ಬಲೀಂದ್ರನನ್ನು ಕರೆದು – 'ಬಲೀಂದ್ರಾ ಬಲೀಂದ್ರಾ ಆಟಿತಾ ಪುಣ್ಣಮೆ ಸೋಣೆತ ಸಂಕ್ರಾಂತಿ, ಬಲಿಕೊಂಡು ಪೋತು ಪೊಲಿ ಕೊಂಡು ಬಲ್ಲ ಹರಿಯೋ ಹರಿ' ಎಂದು ಮೂರು ಬಾರಿ ಹೇಳಿ ಅಕ್ಕಿಕಾಳು ಹಾಕುವುದು – ಸ್ವಾಗತಿಸುವುದು ಒಂದು ದಿನ ಬಲಿಪೂಜೆ, ಗೋಪೂಜೆ ನಡೆಯುತ್ತದೆ. ಇದು ಬೆಳೆಗೆ ಸಂಬಂಧಿಸಿದ ತುಳುನಾಡಿನ ಬಹಳ ಪ್ರಧಾನ ಹಬ್ಬ (ತು.ಪರ್ಬ). ಅಂತೆಯೇ, ಹಬ್ಬದ ರಾತ್ರಿ ಮನೆಯ ಹಿರಿಯ ಅವಲಕ್ಕಿ, ಎಲೆ, ಅಡಕೆ, ಕೂಳೆಸೊಪ್ಪು, ಜಂಗಮನಸೊಪ್ಪು ಇತ್ಯಾದಿಯೊಂದಿಗೆ ಸೂಡಿ ಹಿಡಿದು ಗದ್ದೆಗೆ ದೀಪ ಇಡಲು ಹೋಗುತ್ತಾನೆ. ಅಲ್ಲಿ ಬೆಂಡೆಕಾಯಿ ದಂಟಿನಿಂದ ಮಾಡಿದ ಶಿಲುಬೆ ಆಕಾರದ ದೊಂದಿ (ಅಥವಾ ಹಾಲೆ ಮರದ ಕೋಲು) ನೆಟ್ಟು ಉರಿಸಿ, ಬೆಳಕು ಮಾಡುತ್ತಾರೆ. ಗಂಧ ಹಚ್ಚಿ, ಅವಲಕ್ಕಿ ಇತ್ಯಾದಿ ಎಡೆ ಇಟ್ಟು ಪೂಜೆ ಮಾಡಿ, ಬಲೀಂದ್ರನನ್ನು ಕುರಿತು ಪೊಲಿ ಕೊಟ್ರೊ/ ಬಲಿ ತಗೊಂಡ್ರೋ ಬಲೀಂದ್ರ ದೇವರ್ ತಮ್ಮ ರಾಜ್ಯಕ್ಕೆ ತಾವೇ ಬಂದ್ರಾ... ಪೊಲಿಯೋ ಬಾ... ಕೊಚ್ ಕೊಚ್ ಕೊಚ್ ಎಂದು ಮೂರು ಬಾರಿ ಕೂಗಿ ಕರೆಯುತ್ತಾರೆ. ಹಿಂದಿರುಗುವಾಗ ತಿಪ್ಪೆ, ಮೇಟಿಕಂಬ, ಹೊಲಿರಾಶಿಗೂ ಇದೇ ರೀತಿ ಬೆಳಕು ಮಾಡಿ ಪ್ರಾರ್ಥಿಸುತ್ತಾರೆ. ಹಬ್ಬದ ಅಂಗವಾಗಿ ಗೆರಸೆಯಲ್ಲಿ ಅಕ್ಕಿ ಹಾಕಿ, ದೀಪವಿಟ್ಟು ತುಡಾರ್ ಮಗಾ ತುಡಾರ್, ಕಲ್ಲಡಿತ್ತಾ ನೀರ್ ಪರ್ಲೆ... ಇತ್ಯಾದಿ ಹಾಡಿ ದನಗಳಿಗೆ ದೀಪ ಬೆಳಗಿ, ಅವಕ್ಕೆ ನೀರು ದೋಸೆ, ಬಾಳೆಹಣ್ಣುಗಳನ್ನು ತಿನ್ನಿಸಿ ಗೌರವ ಸಲ್ಲಿಸುತ್ತಾರೆ. ದೀಪಾವಳಿಯ ಹಿಂದಿನ ದಿನ ರಂಗೋಲಿಯಿಂದ ಸಿಂಗರಿಸಿದ ಪಾತ್ರೆಗೆ ಹಿರೇಬಳ್ಳಿಯನ್ನು (ಮುಳ್ಳುಸೌತೆಬಳ್ಳಿ) ಕಟ್ಟಿ, ನೀರು ತುಂಬುತ್ತಾರೆ. ಇದಕ್ಕೆ 'ಬೂದೆ (ದಿ) ನೀರು ತುಂಬುದ್' ಎಂಬ ಹೆಸರಿದೆ. ಈ ನೀರಿನಿಂದ ಬೆಳಿಗ್ಗೆ ಅಭ್ಯಂಜನ ಸ್ನಾನ ಮಾಡುತ್ತಾರೆ. ಆ ದಿನ ಎಲ್ಲರೂ ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುವ, ಬಲಗೈಲಿ ಸಿಹಿತಿಂಡಿ, ಎಡಗೈಲಿ ಸಪ್ಪೆತಿಂಡಿ ಹಿಡಿದು ತಿನ್ನುವ ನಡವಳಿಕೆಗಳೂ ಉಂಟು.

**ಗೋಂದೊಳು ಪೂಜೆ :** ಮಹಾರಾಷ್ಟ್ರ ಭಾಗದಿಂದ ಬಹು ಹಿಂದೆ ವಲಸೆ ಬಂದು ನೆಲೆ ನಿಂತ ಮರಾಠಿಗರು ತಮ್ಮ ಮೂಲ ನೆಲೆಯಲ್ಲಿ ನಡೆಸುತ್ತಿದ್ದ ಸಂಪ್ರದಾಯವನ್ನೇ ಇಲ್ಲಿಯೂ ಮುಂದುವರೆಸಿರುವುದಕ್ಕೆ ಈ ಗೋಂದೊಳು ಪೂಜೆ ಉತ್ತಮ ನಿದರ್ಶನವಾಗುತ್ತದೆ. ದೇವಿಯ ಹೆಸರಲ್ಲಿ ಹರಕೆ ಮಾಡಿಕೊಂಡವರು ಅಥವಾ ನಡೆದುಕೊಳ್ಳುವವರು ಇದನ್ನು ಸಾಂದರ್ಭಿಕವಾಗಿ ನೆರವೇರಿಸುತ್ತಾರೆ. ದೇವಿ ಹಾಗೂ ಭೈರವನನ್ನು ಗದ್ದಿಗೆಯಲ್ಲಿ ಪೂಜಿಸುತ್ತಾರೆ. ಈ ಆರಾಧನೆಯ ಅಂಗವಾಗಿ ದೊಂದಿ ಹಿಡಿದು ಹಾಡುತ್ತಾ ಕುಣಿತ ಮಾಡುತ್ತಾರೆ. ಈ ಪೂಜಾವಿಧಿಗಳನ್ನು ನಡೆಸಿಕೊಡುವ ದರ್ಶನ ಪಾತ್ರಿಗೆ 'ಪರಶುರಾಮ' ಎಂದು ಕರೆಯಲಾಗುತ್ತದೆ. ಚಪ್ಪೆಗಾರರೆಂಬ ಇನ್ನೊಂದು ಪಂಗಡದವರಲ್ಲಿ ತುಳಜಾಭವಾನಿಯ ಹೆಸರಲ್ಲಿ ವಿಭಿನ್ನ ರೀತಿಯಲ್ಲಿ ಗೋಂದೊಳು ಆರಾಧನೆ ನಡೆಸುವ ಸಂಪ್ರದಾಯವಿದೆ (ಸಂಭ್ರಮ–೧).

**ಹೌಂದೇರಾಯನ ಓಲಗ :** ಕುಂದಾಪುರ, ಅಂಪಾರು ಭಾಗಗಳ ಕಡಲ ತಡಿಯ ಮೊಗವೀರ ಹಾಗೂ ಬಿಲ್ಲವರು ಫಲ ಸಮೃದ್ಧಿಯ ಆಶಯದಿಂದ ತಮ್ಮ ಮನೆಗಳಲ್ಲಿ ನಡೆಸುವ ಈ ವಿಶೇಷ ಸಂಪ್ರದಾಯಕ್ಕೆ

ಸಮುದ್ರರಾಯನ ಓಲಗ, ಗೋವಿಂದರಾಯನ ಓಲಗ ಎಂಬ ಹೆಸರೂ ಇವೆ (ಸಮುದ್ರರಾಯ ಎಂಬುದರಿಂದ ಹೌಂದ್ರಾಯ ಎಂದಾಗಿದೆ ಎಂಬ ಅಭಿಪ್ರಾಯವಿದೆ). ತುಳಸೀಕಟ್ಟೆಯ ಸುತ್ತ ಹಾಡಿಗೆ ತಕ್ಕಂತೆ ಕುಣಿತದವರು ಪ್ರತಿ ಬಾರಿಯೂ ಹಾಂದ್ರಾಯನ ವಾಲ್ಗವೇ ಎಂದು ಹೇಳುವುದರಿಂದ ಇದಕ್ಕೆ ಹೌಂದೇರಾಯನ ಓಲಗ ಎಂಬ ಹೆಸರೂ ರೂಢಿಯಲ್ಲಿದೆ. ಈ ಗುಂಪಿನಲ್ಲಿ ೧೫–೨೦ ಜನರಿದ್ದು, ಕಚ್ಚೆ ಹಾಕಿ, ಸೊಂಟಕ್ಕೆ ದಟ್ಟಿ ಸುತ್ತಿ, ತಲೆಗೆ ರುಮಾಲು, ಕಾಲಿಗೆ ಕಡಗ ಧರಿಸುತ್ತಾರೆ. ತುಳಸೀಕಟ್ಟೆಯ ಸುತ್ತ ವೃತ್ತ, ಅರೆ ವೃತ್ತಾಕಾರವಾಗಿ ಮುಖ್ಯ ಹಾಡುಗಾರನ ಹಾಡಿನ ಲಯಕ್ಕನುಗುಣವಾಗಿ, ಪ್ರತಿ ಬಾರಿಯೂ ಹಾಂದ್ರಾಯನ ವಾಲ್ಗವೇ ಎಂಬ ನುಡಿಯನ್ನು ಪುನರಾವರ್ತಿಸುತ್ತಾ ಕುಣಿಯುತ್ತಾರೆ. ನೃತ್ಯದ ಸಂದರ್ಭದಲ್ಲಿ ಒಬ್ಬನಿಗೆ ಹನುಮಂತನ ಆವಾಹನೆ ಆಗುವುದೂ ಉಂಟು.

**ಕಾಡ್ಯನಾಟ :** ಇದು ಸರ್ಪಾರಾಧನೆಯ ಇನ್ನೊಂದು ಬಗೆ. ಜಿಲ್ಲೆಯ ಕನ್ನಡ ಪ್ರದೇಶದ ಮೇರರು ತಮ್ಮ ಆರಾಧ್ಯ ದೈವವಾದ ಕಾಡ್ಯನ ಸಂಪ್ರೀತಿಗಾಗಿ ಈ ಆಚರಣೆ ನಡೆಸುತ್ತಾರೆ (ಇದು ಮೇರರಲ್ಲಿ ಮಾತ್ರ ಇದೆ). ಕಾಡ್ಯ ಎಂದರೆ ಕಾಳಿಂಗಸರ್ಪ. ತುಳುವಿನಲ್ಲಿ ಕಡ್ಯ ಎಂದರೆ ಮಣ್ಣಿನ ಗಡಿಗೆ ಎಂದೂ, ಗಡಿಗೆಯ ಅಡಿಯಲ್ಲಿ ನಾಗನು ಪ್ರೀತಿಯಿಂದ ವಾಸಿಸುತ್ತಾನೆಂಬ ನಂಬಿಗೆಯ ಹಿನ್ನೆಲೆಯಲ್ಲಿ ಕಡ್ಯದಲ್ಲಿರುವ ನಾಗನಿಗೆ ಕಾಡ್ಯನೆಂಬ ಹೆಸರಾಯಿತೆಂಬ ವಿವರಣೆಯೂ ಇದೆ. ಅರಣ್ಯ ಭಾಗದಲ್ಲಿನ ಕಾಡ್ಯನ ಮನೆಗಳಲ್ಲಿ (ಹುತ್ತ) ಸರ್ಪದ ಚಿತ್ರಗಳಿರುವ ಕಲ್ಲುಗಳು, ಗಡಿಗೆ/ಮಡಕೆಗಳಿರುತ್ತವೆ. ನಾಗಮಂಡಲದಂತೆ ಇಲ್ಲಿಯೂ ಮಂಡಲ ಬರೆದು, ನಾಲ್ಕು ರಾತ್ರಿ ಮೂರು ಹಗಲು ಈ ಆಚರಣೆ ನಡೆಸಲಾಗುತ್ತದೆ. ಅಲ್ಲದೆ, ಇದರ ಅಂಗವಾಗಿ ಹಗಣ ರೀತಿಯ ಕೆಲ ವೈನೋದಿಕ ಕೋಲ ಬಲಿಗಳೂ, ಅಂಬೋಡಿ ಕ್ರೀಡೆ ಮೊದಲಾದುವೂ ನಡೆಯುತ್ತವೆ.

**ಸಾವಿರ ಹಣ್ಣಿನ ವಸಂತ :** ಕುಂದಾಪುರ ಭಾಗದ ಮೊಗವೀರ, ಬಿಲ್ಲವ ಮೊದಲಾದವರು (ತಿರುಪತಿ ತಿಮ್ಮಪ್ಪನ ಒಕ್ಕಲಿನವರು) ಸಂತಾನ, ಸಮೃದ್ಧಿಗಳ ಅಪೇಕ್ಷೆಯಿಂದ ಶ್ರೀನಿವಾಸ, ಪದ್ಮಾವತಿಯರ ಪ್ರೀತ್ಯರ್ಥ ಮನೆಯ ತುಳಸಿಕಟ್ಟೆಯ ಬಳಿ ನಡೆಸುವ ಒಂದು ಆಚರಣೆ ಇದು. ತುಳಸೀಕಟ್ಟೆಯನ್ನು ಹೂಹಣ್ಣುಗಳಿಂದ ಅಲಂಕರಿಸಿ, ಪಂಚಕಜ್ಜಾಯ, ನೆನೆಸಿದ ಕಡಲೇಕಾಯಿ, ಅಕ್ಕಿ ಇತ್ಯಾದಿಗಳಲ್ಲದೆ ಸಾವಿರಕ್ಕೂ ಮಿಗಿಲು ಬಾಳೆಹಣ್ಣುಗಳನ್ನು ಎಡೆಗೆ ಇಟ್ಟು ಪೂಜಿಸುವುದರಿಂದ ಇದಕ್ಕೆ ಸಾವಿರ ಹಣ್ಣಿನ ವಸವಂತ (ವಸಂತ) ಎಂಬ ಹೆಸರಿದೆ. ಇದಲ್ಲದೆ, ತಿರುಪತಿ ಯಾತ್ರೆ ಮುಗಿಸಿ ಬಂದವರು ತುಳಸಿಕಟ್ಟೆ ಬಳಿ ನಡೆಸುವ ಸಾಮಾನ್ಯ ಪೂಜೆಗೆ ವಸಂತ ಎಂದೂ, ಕಾಲಭೈರವನ ಹೆಸರಲ್ಲಿ ಪ್ರಾಣಿ ಬಲಿಕೊಟ್ಟು ನಡೆಸುವ ಸೇವಾಚರಣೆಯನ್ನು ದಿನಾ ಹಣ್ಣಿನ ವಸಂತ ಎಂದೂ ಕರೆಯಲಾಗುತ್ತದೆ.

**ಸಿರಿ :** ತುಳುವರು ಅತ್ಯಂತ ಗೌರವದಿಂದ ನಡೆದುಕೊಳ್ಳುವ ಶಕ್ತಿಗಳಲ್ಲಿ ಸಿರಿಯೂ ಒಬ್ಬಳಾಗಿದ್ದಾಳೆ. ಬಂಟ ಸಮಾಜದಿಂದ ಬಂದ ಸಿರಿ ತನಗೆ ಅಗೌರವ ತೋರಿ, ಕೆಟ್ಟದ್ದಾಗಿ ನಡೆದುಕೊಂಡ ಗಂಡನನ್ನೇ ಧಿಕ್ಕರಿಸುವ ಮೂಲಕ ಸ್ತ್ರೀ ಸ್ವಾಭಿಮಾನದ ಪ್ರತೀಕವಾಗಿ ಬೆಳೆದವಳು. ಆದರೆ, ಕೊನೆಯವರೆಗೂ ಎಲ್ಲಿಯೂ ನೆಮ್ಮದಿಯ ಬದುಕು ಸಾಗಿಸಲಾಗದೆ, ಅನ್ಯಾಯವನ್ನೇ ಉಂಡು, ನೊಂದು ಮರಣಾನಂತರ ಆರಾಧನೆಯ ಶಕ್ತಿಯಾಗಿ ಮೂಡಿದವಳು. ಸ್ತ್ರೀ ಸಮೂಹದ ಅಪಾರ ಅನುಕಂಪೆಯನ್ನೂ ಗಳಿಸಿರುವ ಸಿರಿಗೆ ಉಡುಪಿ ಜಿಲ್ಲೆಯ ಹಿರಿಯಡ್ಕ, ನಂದಳಿಕೆ, ಕವತ್ತಾರು, ಹೆಜಮಾಡಿ, ಪಾಂಗಾಳ ದಕ್ಷಿಣಕನ್ನಡ ಜಿಲ್ಲೆಯ ಮಾಲಾಡಿ, ಧರೆಗುಡ್ಡೆ, ಬೊಳ್ಯೊಟ್ಟು, ಪೇರೂರು ಮುಂತಾದೆಡೆ ಆಲಡೆಗಳಿವೆ. ಅಲ್ಲಿ ಮಾರ್ಚ್‌ನಿಂದ ಮೇ ತಿಂಗಳವರೆಗಿನ ಹುಣ್ಣಿಮೆಗಳಂದು ವಾರ್ಷಿಕ ಆರಾಧನೆಗಳು ಸಿರಿ ಜಾತ್ರೆಯ ಹೆಸರಲ್ಲಿ ನಡೆಯುತ್ತವೆ. ವಿಶೇಷವೆಂದರೆ, ಕೌಟುಂಬಿಕ ಬದುಕಿನಲ್ಲಿ ಏನೆಲ್ಲಾ ನೋವು, ಸಂಕಟಗಳಿಗೆ, ಮಾನಸಿಕ ಅಸ್ವಸ್ಥತೆಗೆ ಒಳಗಾದ ಸಾವಿರಾರು ಮಹಿಳೆಯರು ಸಿರಿಗೆ ನಡೆದುಕೊಳ್ಳುತ್ತಾರೆ. ಜಾತ್ರೆಯಂದು ಇಡೀ ರಾತ್ರಿ ಅವರು ಸಾಮೂಹಿಕವಾಗಿ ಮೈದುಂಬಿ, ಕುಮಾರನ (ಸಿರಿಯ ಮಗ) ಸಮ್ಮುಖದಲ್ಲಿ ಸಂಧಿಯ ಸಾಲುಗಳನ್ನು ಹೇಳಿಕೊಳ್ಳುತ್ತಾರೆ. ಪೀಟರ್ ಜೆ.ಕ್ಲಾಸ್ ಮೊದಲಾದ ಕೆಲವು ವಿದೇಶೀ ವಿದ್ವಾಂಸರೂ ಈ ಕುರಿತು ಚರ್ಚೆಗಳನ್ನು ನಡೆಸಿದ್ದಾರೆ. ಫಿನ್ಲೆಂಡಿನ ಲೌರಿಹಾಂಕೋ ಎಂಬ ವಿದ್ವಾಂಸ ಮತ್ತು ಅವರ ತಂಡದವರು ವಿವೇಕರೈ ಮತ್ತು ಚಿನ್ನಪ್ಪಗೌಡರ ನೆರವಿನಿಂದ

'ಸಿರಿ'ಯ ತುಳು ಪಾಡ್ದನವನ್ನು ಇಂಗ್ಲಿಷ್‌ಗೆ ಅನುವಾದಿಸಿ ಪ್ರಕಟಿಸಿದ್ದಾರೆ. ೧೫,೮೬೩ ಚರಣಗಳಷ್ಟು ಸುದೀರ್ಘವಾಗಿರುವ ಇದು ಜಗತ್ತಿನ ಪ್ರಾಚೀನ ಮಹಾಕಾವ್ಯಗಳಿಗೆ ಸರಿಮಿಗಿಲೆನಿಸಿದೆ.

**ಅಜ್ಜಿ ಓಡಿಸುವುದು :** ತುಳುವರು ಆಷಾಢವನ್ನು ದಾರಿದ್ರ್ಯದ, ಸಂಕಷ್ಟದ ಕಾಲವೆಂದು ಭಾವಿಸಿದ್ದಾರೆ. ಆ ದಾರಿದ್ರ್ಯಗಳನ್ನು ನಿವಾರಿಸಿಕೊಳ್ಳುವ ಆಶಯದಿಂದ ಕೆಲವೊಂದು ಆಚರಣೆಗಳನ್ನು ಅನುಸರಿಸುತ್ತಾರೆ. ಅವುಗಳಲ್ಲಿ ಅಜ್ಜಿ ಆಚರಣೆ ಒಂದಾಗಿದೆ. ಕುಂದಾಪುರ ಭಾಗದಲ್ಲಿ ಇದು ವಿಶೇಷವಾಗಿ ರೂಢಿಯಲ್ಲಿದೆ. ಸೋಣೆ ತಿಂಗಳಲ್ಲಿ ನಡೆಸುವುದರಿಂದ ಈ ಹಬ್ಬಕ್ಕೆ ಸ್ವಾಣಿ ಹಬ್ಬವೆಂಬ ಹೆಸರೂ ಇದೆ. ಈ ತಿಂಗಳಲ್ಲಿ ಮನೆಯ ಹಿರಿಯ ಭೂತಗಳು ಮನೆಯ ಹೆಬ್ಬಾಗಿಲಲ್ಲಿ ಇರುತ್ತವೆ ಎಂಬ ನಂಬಿಕೆಯೂ ಇದೆ. ಅಂತೆಯೇ ಸೋಣ ಸಂಕ್ರಮಣದ ಮೊದಲ ಐದು ದಿನ ಮುಂಬಾಗಿಲ ಹೊಸ್ತಿಲ ಮೇಲೆ ಸೋಣಿ ಕೊಡಿ ಇಟ್ಟು ಪೂಜಿಸುತ್ತಾರೆ. ಐದನೇ ದಿನ ರಾತ್ರಿ ಹೊಸ್ತಿಲಿಗೆ ಸೋಣಿಕೊಡಿ, ಎಲೆ–ಅಡಕೆ, ವಿವಿಧ ಬಗೆಯ ತಿಂಡಿ–ತಿನಿಸು ಎಡೆಹಾಕಿ ಪೂಜಿಸುತ್ತಾರೆ. ಮಕ್ಕಳು ಆ ಎಡೆ ಎತ್ತಿಕೊಂಡು ಅಜ್ಜಿ ಓಡ್, ಅಜ್ಜಿ ಓಡ್ ಎಂದು ಕೂಗುತ್ತಾ ಹಿಂದಿರುಗಿ ನೋಡದೆ, ಆಚೆಗೆ ಓಡಿ, ಅಲ್ಲಿಯೇ ತಿಂಡಿ ತಿಂದು ಬರುತ್ತಾರೆ. ಕೆಲವರು ಅಡುಗೆ ಮನೆಯ ಒಂದು ಮೂಲೆಯಲ್ಲಿ ರಂಗೋಲಿ ಬರೆದು, ಅಜ್ಜಿಯ ಹೆಸರಲ್ಲಿ ಎಡೆಹಾಕುತ್ತಾರೆ. ಪ್ರತಿದಿನ ಹೊಸ್ತಿಲ ಪೂಜೆ ಮಾಡಿದವರು ಆ ಎಡೆ ಉಣ್ಣುತ್ತಾರೆ. ಮಾರನೇ ದಿನ ಹೊಸ್ತಿಲನ್ನು ಅಲಂಕರಿಸಿ, ಹೊರಗೆ ನಿಂತು ಅಜ್ಜಿಯನ್ನು ಸಾಂಕೇತಿಕವಾಗಿ ಓಡಿಸುತ್ತಾರೆ.

**ಭೂತಾರಾಧನೆ :** ನಾಡಿನ ಇತರ ಭಾಗಗಳಲ್ಲಿ ದೇವರು ಹಾಗೂ ದೈವ ಎಂಬುದು ಬಹುಮಟ್ಟಿಗೆ ಏಕಾರ್ಥದಲ್ಲಿ ಬಳಕೆಯಾದರೂ ತುಳುನಾಡಿನಲ್ಲಿ ಅವು ಎರಡೂ ಭಿನ್ನ ಪರಿಕಲ್ಪನೆಗಳಾಗಿಯೇ ಬಳಕೆಯಲ್ಲಿವೆ. ತುಳವರ ಪ್ರಕಾರ ದೈವ ಎಂಬುದು ಸಾಮಾನ್ಯವಾಗಿ ದೇವರಿಗಿಂತ ತುಸು ಕೆಳಹಂತದ ಆರಾಧನಾ ಶಕ್ತಿಯಾಗಿದೆ. ಈ ದೈವವನ್ನು ಭೂತವೆಂದೂ ಗುರುತಿಸಲಾಗುತ್ತದೆ. ಇವರ ನಂಬಿಕೆಯ ಲೋಕದಲ್ಲಿ 'ಭೂತ'ಗಳೆಂದರೆ ಇತರ ಪ್ರದೇಶಗಳವರು ಸಾಮಾನ್ಯವಾಗಿ ಅರ್ಥೈಸುವಂತಹ 'ದೆವ್ವ' ಅಥವಾ 'ಪಿಶಾಚಿ' ಎಂದಾಗದೆ, ಅವು 'ದೈವ'ಗಳು ಅಥವಾ 'ಸತ್ಯ'ಗಳು ಎಂದೇ ತಿಳಿಯಲ್ಪಟ್ಟಿವೆ. ಅವನ್ನು ನಂಬಿ, ಆರಾಧಿಸದಿದ್ದರೆ ತಮಗೆ ತೀವ್ರತರವಾದ ಕೇಡುಂಟಾಗುತ್ತದೆ ಎಂದೂ ಅವರು ಬಲವಾಗಿ ನಂಬಿದ್ದಾರೆ.

ನ್ಯಾಯ ನೀತಿಗಾಗಿ ಬಾಳಿದರೂ ಅನ್ಯಾಯಕ್ಕೆ ಒಳಗಾಗಿ ಅಕಾಲ ಮೃತ್ಯುವಿಗೆ ಈಡಾದವರು ಭೂತದೈವವಾಗಿ ಪ್ರಕಟಗೊಂಡಿದ್ದಾರೆಂಬ ನಂಬಿಕೆ ಇಲ್ಲಿಯದು. ಕೊರಗತನಿಯನಂತಹ ಅತ್ಯಂತ ಕೆಳವರ್ಗದ ವ್ಯಕ್ತಿಯಿಂದ ಹಿಡಿದು ಸಿರಿಯಂತಹ ಮೇಲುವರ್ಗದ ಮಹಿಳೆಯವರೆಗೆ ಬೇರೆಬೇರೆ ವ್ಯಕ್ತಿಗಳು ಭೂತವಾಗಿದ್ದಾರೆ. ಹಂದಿ, ಮಂಗಗಳಂತಹ ಪ್ರಾಣಿ, ಗಿಳಿಯಂತಹ ಪಕ್ಷಿಯೂ ಭೂತವಾಗಿವೆ. ಕೇವಲ ಹಿಂದೂಗಳಷ್ಟೇ ಅಲ್ಲದೆ, ಮುಸ್ಲಿಂ ವರ್ಗದಿಂದ ಬಂದ ವ್ಯಕ್ತಿಯೂ (ಆಲಿ) ಭೂತದೈವವಾಗಿ ಆರಾಧನೆಗೊಳ್ಳುತ್ತಿದೆ. ಇನ್ನು ಪೌರಾಣಿಕ ಹಿನ್ನೆಲೆಯಿಂದ ಬಂದ ರಕ್ತೇಶ್ವರಿ ಉಳ್ಳಾಳ್ತಿ ಹಾಗೂ ಧೂಮಾವತಿ ಭೂತಗಳನ್ನು 'ದೇವಿ'ಯ ಅಂಶವೆಂದೇ ನಂಬಲಾಗಿದೆ. ಹೀಗೆ ಬಹು ವೈವಿಧ್ಯಮಯವಾಗಿರುವ ಈ ಭೂತಗಳ ಸಂಖ್ಯೆ ೩೦೦ಕ್ಕೂ ಹೆಚ್ಚು ಎಂದು ತಿಳಿಯಲಾಗಿದೆ. ಇವಲ್ಲಿ ಸ್ಥಳೀಯವಾದ ಭೂತಗಳಿರುವಂತೆ ವಲಸೆ ಬಂದ ಭೂತಗಳೂ ಇವೆ. ಭೂತಾರಾಧನೆಯು ಮೂಲತಃ ಧಾರ್ಮಿಕ ಪರಿವೇಷವನ್ನು ಉಳ್ಳದ್ದಾಗಿದ್ದರೂ, ಅದು ಇನ್ನೊಂದು ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆಯಾಗಿಯೂ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹವಾಗಿದೆ. ಈ ಎರಡೂ ಸ್ಥಿತಿಗಳ ಪರಿಣಾಮವಾಗಿ ಅದು ಆರಾಧನೆಯೂ ಆಗಿದೆ, ಕಲೆಯೂ ಆಗಿದೆ, ನ್ಯಾಯ ದಾನ ಮಾಡುವ ಶಕ್ತಿಯನ್ನು ಹೊಂದಿದೆ, ಕೆಲವೊಂದು ರೋಗಗಳಿಗೆ ಚಿಕಿತ್ಸೆ ನೀಡುವ ವೈದ್ಯಪದ್ಧತಿಯೂ ಆಗಿದೆ; ಭೂತಾರಾಧನೆಯ ಅಂಗವಾಗಿ ಕೆಲವೊಂದು ಕ್ರೀಡೆಗಳೂ ಹುಟ್ಟಿಕೊಂಡಿವೆ.

ಭೂತಗಳನ್ನು ಸಾಮಾನ್ಯವಾಗಿ ಸಂಬಂಧಿಸಿದ ಭೂತದ ಮುಖವಾಡ ಹಾಗೂ ವೇಷಗಳ ರೂಪದಲ್ಲಿ ಆರಾಧಿಸಲಾಗುತ್ತದೆ. ಭೂತಾರಾಧನೆಯ ಭಾಗವಾದ ಮಂಚ, ಖಡ್ಗ, ಮಣಿಗಂಟೆ, ಮೊದಲಾದ ಪರಿಕರಗಳನ್ನು ಪವಿತ್ರ ವಸ್ತುಗಳೆಂದು ಪರಿಗಣಿಸಲಾಗುತ್ತದೆ. ಭೂತದ ಮುಖವಾಡ, ಆಭರಣ, ಕತ್ತಿ ಮೊದಲಾದ ಅಂಥಾ

ವಸ್ತುಗಳನ್ನು ಜತನದಿಂದ ಕಾಯ್ದಿಡುವುದಕ್ಕಾಗಿಯೇ ಒಂದು ಸ್ಥಳ ಅಥವಾ ಮರದ ಮಂಚ (ಭಂಡಾರ) ಎಂದು ಇರುತ್ತದೆ. ಈ ಭಂಡಾರವನ್ನು ಸಾಮಾನ್ಯವಾಗಿ ಭೂತದ ಮಂಚದ ಮೇಲೆ, ನೆಲಕ್ಕೆ ತಾಗಿಸದಂತೆ ಇಡಲಾಗುತ್ತದೆ ಹಾಗೂ ಆರಾಧನೆಯ ಸಂದರ್ಭದಲ್ಲಿ ಮಾತ್ರ ಹೊರತೆಗೆಯಲಾಗುತ್ತದೆ. ಗುತ್ತಿನ ಮನೆಗಳಲ್ಲಿ ಅವರವರ ಭೂತಗಳಿಗಾಗಿ ನಿರ್ಮಿಸಿದ ಪ್ರತ್ಯೇಕ ಕೋಣೆಗಳಿರುತ್ತವೆ. ಭೂತಗಳಿಗಾಗಿ ಪ್ರತ್ಯೇಕ ಗುಡಿಗಳೂ ಇದ್ದು ಅವನ್ನು ಭೂತಸ್ಥಾನ ಗುಂಡ ಎನ್ನಲಾಗುತ್ತದೆ. ಭೂತಗಳ ವಾರ್ಷಿಕ ಆರಾಧನಾ ವಿಧಿಗಳನ್ನು ಭೂತಕೋಲದ ಹೆಸರಿನಲ್ಲಿ ನಡೆಸಲಾಗುತ್ತದೆ. ಇದು ಬಹುವ್ಯವಸ್ಥಿತವಾದ ಹಾಗೂ ಹಲವು ವಿಧಿಕ್ರಿಯೆಗಳಿಂದ ಕೂಡಿದ ಒಂದು ಪ್ರದರ್ಶಕ ಆರಾಧನಾ ನಡವಳಿಕೆಯೂ ಆಗಿರುತ್ತದೆ. ಭೂತಾರಾಧನೆಯಲ್ಲಿ ಹರಕೆ ಹೇಳಿದಾಗ ಇಲ್ಲವೇ ವಿಶಿಷ್ಟ ಸಂದರ್ಭಗಳಲ್ಲಿ ಧರ್ಮನೇಮ ಎಂಬ ವಿಶಿಷ್ಟ ಉತ್ಸವವನ್ನು ಜರುಗಿಸುವ ಸಂಪ್ರದಾಯವಿದೆ.

**ಮಾರಿ ಆರಾಧನೆ :** ಜನ, ಜಾನುವಾರುಗಳಿಗೆ ಮಾರಿಯ ಮುನಿಸಿನಿಂದ ಕೆಲವೊಂದು ಸಾಂಕ್ರಾಮಿಕ ಪಿಡುಗುಗಳು ಬರುತ್ತವೆ. ಮಾರಿಯನ್ನು ಸಂಪ್ರೀತಿಗೊಳಿಸುವುದರ ಮೂಲಕ ಆ ಜಾಡ್ಯಗಳಿಂದ ದೂರಾಗ ಬಹುದೆಂಬ ನಂಬಿಕೆಯಿಂದ ಮಾರಿ ಆರಾಧನೆ ಹುಟ್ಟಿಕೊಂಡಿದೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮಾರಿ ಗುಡಿ ಇದ್ದು, ವರ್ಷಪೂರ್ತಿ ಪೂಜೆ ಇತ್ಯಾದಿ ನಡೆಯುತ್ತವೆ. ಕೆಲವು ಗ್ರಾಮಗಳಲ್ಲಿ ವರ್ಷಕ್ಕೊಮ್ಮೆ ಮಾರಿಯನ್ನು ಗಡಿದಾಟಿಸುವ ಆಚರಣೆಗಳೂ ಇವೆ. ಅದಕ್ಕಾಗಿ ಮಾರಿಯ ಬೊಂಬೆ ಮಾಡಿಸಿ, ಪೂಜಿಸಿ, ಬಲಿಕೊಟ್ಟು ಗಡಿಯಿಂದಾಚೆಗೆ ಸಾಗಹಾಕುತ್ತಾರೆ. ಕೆಲವೆಡೆ ಭೂತಾರಾಧನೆಯ ಸಂದರ್ಭದಲ್ಲಿಯೂ ಮಾರಿ ಓಡಿಸುವುದು ನಡೆಯುತ್ತದೆ. ಉಡುಪಿ ಜಿಲ್ಲೆಯ ಹೆಜಮಾಡಿ, ಪಡುಬಿದ್ರಿ ಮುಂತಾದ ಪ್ರದೇಶಗಳಲ್ಲಿನ ಗೊಡ್ಡರು ಮಾಯಿಹುಣ್ಣಿಮೆಯಲ್ಲಿ ಮಾರಿ ಓಡಿಸುವ ಆಚರಣೆಯ ಅಂಗವಾಗಿ ಕಂಗಲು ಕುಣಿತ ಮಾಡುತ್ತಾರೆ. ಕುಣಿತಗಾರರು ಸೊಂಟ, ಭುಜ ಹಾಗೂ ತಲೆಗೆ ತೆಂಗಿನ ಗರಿ ಸುತ್ತಿ, ತಲೆಗೆ ತತ್ರ ಇಟ್ಟುಕೊಳ್ಳುತ್ತಾರೆ. ಮುಖ ಮೈಗೆ ಕಪ್ಪುಬಣ್ಣ ಬಳಿದುಕೊಳ್ಳುತ್ತಾರೆ. ಕೊಳಲು, ಡೋಲು ಇತ್ಯಾದಿ ವಾದ್ಯಗಳೊಂದಿಗೆ ಹಾಡುತ್ತಾ, ಕುಣಿಯುತ್ತಾ ಮನೆಮನೆಗೆ ಹೋಗುತ್ತಾರೆ. ಮನೆಯವರು ಅನ್ನ, ಹಣ ಇತ್ಯಾದಿ ನೀಡುತ್ತಾರೆ. ಮಾರನೇ ದಿನ ಸಂಜೆ, ಮೂರು ದಾರಿ ಕೂಡಿದಲ್ಲಿ ತಮ್ಮ ಉಡುಗೆಗಳನ್ನು ಕಳಚಿ ಹಾಕಿ ತಡ್ಡೆದ ಬೂಳ್ಯ ಆಚರಣೆ ಮಾಡುತ್ತಾರೆ. ಮರು ದಿನ ಮದ್ಯ, ಮಾಂಸಗಳ ಎಡೆ ಹಾಕಿ ಕಂಗುಲ್ದ ಪೂಜೆ ಮಾಡಿ, ಮಾರಿಯನ್ನು ಪ್ರಾರ್ಥಿಸುತ್ತಾರೆ. ಕಾರ್ಕಳ ತಾಲೂಕಿನ ಕೆಲವೆಡೆ ಬಲಿಪಾಡ್ಯದಿಂದ ತುಳಸಿ ಪೂಜೆಯವರೆಗೆ ನಲಿಕೆ ಅಥವಾ ಪಾಣರು ನಡೆಸುವ ಕುಣಿತವೂ ಮಾರಿ ಕಳೆಯುವ ಆಶಯವನ್ನು ಹೊಂದಿದೆ. ಉಡುಪಿ ಜಿಲ್ಲೆಯ ಕಾಪುವಿನಲ್ಲಿ ಮೂರು ಮಾರಿಗುಡಿಗಳಿದ್ದು, ಜಿಲ್ಲೆಯಾದ್ಯಂತ ಭಕ್ತರನ್ನು ಹೊಂದಿವೆ.

**ಹೋಳಿ ಕುಣಿತ :** ಕುಡುಬಿಯರು ತಮ್ಮ ಬಹು ಮುಖ್ಯ ಹಬ್ಬವಾದ ಹೋಳಿಯನ್ನು ಶ್ರದ್ಧೆ-ನಿಷ್ಠೆಗಳಿಂದ ಆಚರಿಸುತ್ತಾರೆ. ಆ ಸಂದರ್ಭಗಳಲ್ಲಿ ಹೋಳಿ ಕುಣಿತವನ್ನು ಪ್ರದರ್ಶಿಸುತ್ತಾರೆ. ಐದು ದಿನಗಳ ಕಾಲ ನಡೆಯುವ ಈ ಹಬ್ಬದಲ್ಲಿ ಅವರು ಮೀನು ಮಾಂಸಾದಿಗಳ ಸೇವನೆಯನ್ನು ವರ್ಜ್ಯ ಮಾಡಿರುತ್ತಾರೆ. ಮನೆ ದೇವತೆಯ ಪ್ರೀತ್ಯರ್ಥ ಐದೂ ದಿನ ಗುಮ್ಮಟೆ ವಾದ್ಯ ನುಡಿಸುತ್ತಾ ಹಾಡು-ಕುಣಿತ ಮಾಡುತ್ತಾರೆ. ತಮ್ಮ ಯಜಮಾನನ ಮನೆಯ ತುಳಸಿಕಟ್ಟೆಯಲ್ಲಿ ತೆಂಗಿನಕಾಯಿ ಏರಿಸಿ, ದೀಪ ಬೆಳಗಿಸುವುದರೊಂದಿಗೆ ಆಚರಣೆ ಪ್ರಾರಂಭಿಸುತ್ತಾರೆ. ಎಲ್ಲಾ ಪುರುಷರು ಸೀರೆಯನ್ನು ಕಚ್ಚೆ ಹಾಕಿ ಉಟ್ಟು, ಬಿಳಿ ರವಿಕೆ ತೊಡುತ್ತಾರೆ. ಕೆಲವರು ನೆರಿ ಅಂಗಿ, ಕತ್ತರಿ ಆಕಾರದಲ್ಲಿ ಕೆಂಪು ಶಾಲು ಧರಿಸುವುದೂ ಉಂಟು. ತಲೆಗೆ ಇಟ್ಟ ಪಟಗಾದಲ್ಲಿ ಹಕ್ಕಿಯ ಉದ್ದನೆಯ ಗರಿಯನ್ನು ಸಿಕ್ಕಿಸಿಕೊಳ್ಳುವುದು ಗೌರವದ ಸಂಕೇತವೆನಿಸುತ್ತದೆ. ಇಂಥಾ ವರ್ಣಮಯ, ವಿಶೇಷ ಉಡುಗೆಯ ಕಲಾವಿದರು ಗುಂಪು ಗುಂಪಾಗಿ ಗುಮ್ಮಟೆ ವಾದ್ಯದೊಂದಿಗೆ ಕೋಲಾಟ ಆಡುತ್ತಾ ಮನೆ ಮನೆಗಳಿಗೆ ಹೋಗಿ, ಕುಣಿದು ಕಾಣಿಕೆ ಪಡೆಯುತ್ತಾರೆ. ಆ ಸಂದರ್ಭದಲ್ಲಿ ತಮ್ಮದೇ ಸಂಪ್ರದಾಯದ ರಾಮಾಯಣ, ಮಹಾಭಾರತಗಳನ್ನು ಕಾವ್ಯ ರೂಪದಲ್ಲಿ ಹಾಡುವುದೂ ಇದೆ. ಐದನೆಯ ದಿನ ವಿಶೇಷ ಪೂಜೆ ನಡೆಯುತ್ತದೆ. ಅಂದು ಬುದ್ಯಂತ ಅಥವಾ ಕೋಲ್ಕಾರನ (ಗಣಾಚಾರಿ) ಮನೆಯ ಅಂಗಳದಲ್ಲಿ

ನಡುರಾತ್ರಿಯವರೆಗೆ ಹಾಡು, ಕುಣಿತ ನಡೆಸುತ್ತಾರೆ. ತಮ್ಮ ವಿಶೇಷ ವೇಷ ಕಳಚಿ ಇಟ್ಟು, ಸ್ನಾನ ಮಾಡಿ, ಸೇವೆಯ ಪ್ರತೀಕವಾಗಿ ಪೂಜೆ ಮಾಡುತ್ತಾರೆ. ಹಬ್ಬದ ಬಳಿಕ ಒಂದು ದಿನ ಎಲ್ಲರೂ ಸಾಂಪ್ರದಾಯಿಕವಾಗಿ ಬೇಟೆಗೆ ಹೋಗುವುದೂ ಹಬ್ಬದ ಒಂದು ಭಾಗ ಎನಿಸುತ್ತದೆ.

ಕುಂದಾಪುರದ ಖಾರ್ವಿಗಳಲ್ಲಿ ಹೋಳಿಯು ಪ್ರಮುಖ ಹಬ್ಬವೆನಿಸಿದೆ. ಸಂಜೆ ಸುಮಾರು ೯ ಗಂಟೆಗೆ ಎಲ್ಲಾ ಕೇರಿಗಳಿಂದ ಬಂದ ತಂಡಗಳು ಮಾಂಕಾಳಿ ದೇವಸ್ಥಾನದ ಬಳಿ ಸೇರಿ ಅಲ್ಲಿಂದ ಹಾಡುತ್ತಾ ಕುಣಿಯುತ್ತಾ ಕುಂದೇಶ್ವರ ದೇವಸ್ಥಾನದ ಬಳಿಗೆ ಹೋಗಿ ಅಲ್ಲಿಯೂ ಕುಣಿತ ಮಾಡುತ್ತಾರೆ. ಅಲ್ಲಿ ಕೆಲವರಿಗೆ ಗೆಡ್ಡೆ (ಆವೇಶ) ಬಂದಾಗ ಉರ‍್ಯೆತುಲೆ (ಆವೇಶ ಶವನ ಮಾಡುವ ಹಕ್ಕುಳ್ಳ ನಿರ್ದಿಷ್ಟ ಮನೆಯವ) ಮಂತ್ರ ಹೇಳಿ ಶಮನ ಮಾಡುತ್ತಾನೆ. ಅಲ್ಲಿಂದ ಎಲ್ಲರೂ ಮಾಂಕಾಳಿ ಗುಡಿಗೆ ಬಂದು,ಬಳಿಕ ಕುಣಿಯುತ್ತಾ ಅವರವರ ಕೇರಿಗೆ ಹೋಗುತ್ತಾರೆ. ಎರಡನೇ ದಿನ ಇದೇ ರೀತಿ ಗದ್ದೆಗೆ ಹೋಗಿ ಕುಣಿಯುತ್ತಾರೆ (ಹೋಳಿ ಸುಡುವ ಸ್ಥಳವನ್ನು ಸಮ ಮಾಡುವುದು ಇದರ ಉದ್ದೇಶವೆನ್ನುತ್ತಾರೆ). ಅಂದೂ ಇದೇ ರೀತಿ ಗೆಡ್ಡೆ ಬರುವುದು, ಶಮನ ಇತ್ಯಾದಿ ನಡೆಯುತ್ತದೆ.

ಮೂರನೇ ದಿನ ಹೀಗೇ ವೆಂಕಟರಮಣ ದೇವಸ್ಥಾನದ ಬಳಿ ಹೋಗಿ ಕುಣಿತ ಮಾಡಿ, ಹಿಂದಿರುಗುತ್ತಾರೆ. ಈ ಮೂರೂ ದಿನ ಕೇರಿಗೆ ಹಿಂದಿರುಗಿದ ಬಳಿಕ ಮತ್ತೆ ತಂಡತಂಡವಾಗಿ ಆ ವರ್ಷ ನಿಗದಿಯಾದ ಹೋಳಿ ಮನೆಗೆ ಹೋಗಿ, ಅಲ್ಲಿ ಕುಣಿತ ಮಾಡಿ ಅವರಿಂದ ತಿಂಡಿ–ಪಾನೀಯ ಪಡೆದು ಕುಣಿಯುತ್ತಾ ಕೋಲಾಟ ಆಡುತ್ತಾ ತಮ್ಮ ಮನೆಗೆ ಹಿಂದಿರುಗುತ್ತಾರೆ. ನಾಲ್ಕನೇ ದಿನ –ಹೋಳಿ ಹುಣ್ಣಿಮೆ ದಿನ– ಸಂಜೆ ಮಾಂಕಾಳಿ ಗುಡಿ ಮುಂದೆ ಎಲ್ಲರ ಸಮ್ಮುಖದಲ್ಲಿ ಮುಂದಿನ ವರ್ಷಕ್ಕೆ ಹೋಳಿ ಮನೆ ಯಾರು ಎಂಬುದನ್ನು ಪ್ರಕಟಿಸುತ್ತಾರೆ. ಬಳಿಕ ಎಲ್ಲರೂ ತಾವು ತಂದ ಕಟ್ಟಿಗೆ, ಉರುವಲು ಇತ್ಯಾದಿಯೊಂದಿಗೆ ಹೋಳಿಗದ್ದೆಗೆ ಹೋಗಿ(ಅಂದು ಮಾತ್ರ ಕೆಲವರು ಮುನ್ನೆಚ್ಚರಿಕೆಗಾಗಿ ಹಳೇ ಬಟ್ಟೆ ತೊಟ್ಟಿರುತ್ತಾರೆ; ಯಾರಾದರೂ ಕೀಟಲೆ ಮಾಡಿ ಬಟ್ಟೆ ಹಾಳಾಗಬಹುದೆಂದು), ಅಲ್ಲಿ ಉರುವಲು ರಾಶಿ ಹಾಕುತ್ತಾರೆ. ಬಳಿಕ ಮುಕ್ತೇಸರರು ಬೆಂಕಿ ಸ್ಪರ್ಶ ಮಾಡಿದಾಗ ಇತರರೂ ಬೆಂಕಿ ಹಚ್ಚಿ, ಸುತ್ತಲೂ ಹಾಡುತ್ತಾ ಕುಣಿದು, ಮಾಂಕಾಳಿ ಗುಡಿಗೆ ಬಂದು ಕುಣಿದು, ತಮ್ಮ ಕೇರಿಗಳಿಗೆ ಹಿಂದಿರುಗಿ ಮತ್ತೆ ಹೋಳಿ ಮನೆಗೆ ಹೋಗಿ ಕುಣಿತ ಮಾಡುತ್ತಾರೆ. ಇದೆಲ್ಲಾ ಬೆಳಗಿನ ೨–೩ ಗಂಟೆವರೆಗೆ ನಡೆಯುತ್ತದೆ. ಮುಂಜಾನೆ ಸುಮಾರು ೫ ಗಂಟೆ ಹೊತ್ತಿಗೆ ಹೋಳಿ ಮನೆಯ ಮುಂದೆ ಅಡಕೆ ಮರಕ್ಕೆ ಐವರು ಮುತ್ತೈದೆಯರು ಸುಮಂಗಲ ವಸ್ತು, ಕಾಣಿಕೆ ಇರಿಸಿ ಪೂಜಿಸುತ್ತಾರೆ. ಆಮೇಲೆ ಆ ಮರವನ್ನು ತೆಗೆದುಕೊಂಡು ಹೋಗಿ ಕುಂದೇಶ್ವರ ದೇವಸ್ಥಾನದ ಎದಿರು ನೆಟ್ಟು, ಅದರ ಸುತ್ತ ಹುಲ್ಲು ಹಾಕಿ ಬೆಂಕಿ ಹಚ್ಚಿ, ಅಲ್ಲಿ ಹೋದ ಗಂಡಸರೆಲ್ಲಾ ಕುಣಿತ ಮಾಡುತ್ತಾರೆ. ಬೆಳಗು ಆಗುತ್ತಿದ್ದಂತೆ ಉಳಿದ ಗಂಡಸರು, ಮಕ್ಕಳೆಲ್ಲಾ ಹೊಸ ಬಟ್ಟೆ ಉಟ್ಟು, ಕುಂದೇಶ್ವರ ಗುಡಿ ಬಳಿ ಬಂದು ನಮಸ್ಕರಿಸಿ, ಡೋಲು, ಕೋಲಾಟ ಮೆರವಣಿಗೆಯೊಂದಿಗೆ ಮಾಂಕಾಳಿ ಗುಡಿಗೆ ಬಂದು, ಅಲ್ಲಿಂದ ಗಡ್ಡೆ ಶಮನ ಮಾಡುವವರ ಮನೆ ಬಳಿ ಹೋಗಿ ಅಲ್ಲಿ ಹಾಡು–ಕುಣಿತ ಮಾಡಿ, ಅವರಿಂದ ಪಾನೀಯ–ತಿಂಡಿ ಗೌರವ ಪಡೆಯುತ್ತಾರೆ. ಉರ‍್ಯೆತುಲೆಯವರು ಮುಕ್ತೇಸರಿಗೆ, ಗುಮ್ಟೆಯವರಿಗೆ ಹಾಗೂ ಗಡ್ಡೆ ಬರುವವರಿಗೆ ಹೊಸಬಟ್ಟೆ, ವೀಳ್ಯ ಕೊಟ್ಟು ಗೌರವಿಸುತ್ತಾರೆ. ಅಲ್ಲಿಂದ ಮತ್ತೆ ಹೋಳಿ ಮನೆಗೆ ಹೋಗಿ ಕುಣಿತ ಮಾಡುತ್ತಾರೆ. ಅವರು ಅಂದು ವಿಶೇಷ ತಿಂಡಿ, ಫಲಾಹಾರ ವ್ಯವಸ್ಥೆ ಮಾಡುತ್ತಾರೆ. ಹೋಳಿ ಮನೆಯವರು ದೊಡ್ಡ ಹರಿವಾಣದಲ್ಲಿ ಇಡ್ಲಿ ತುಂಬಿ ಅದರ ಮೇಲೆ ಪದಾರ್ಥ ಸುರಿಯುತ್ತಾರೆ. ಆ ಹರಿವಾಣವನ್ನು ಹೋಳಿ ಮನೆ ಯಜಮಾನ ತಲೆ ಮೇಲೆ ಹೊತ್ತು ಬಂದಾಗ, ಎಲ್ಲರೂ ಇಡ್ಲಿ ತೆಗೆದುಕೊಂಡು ತಿಂದು, ಯಜಮಾನನ ಮುಖ, ಮೈಗೆ ಒರೆಸುತ್ತಾರೆ ಹಾಗೂ ಆತನಿಗೂ ಇಡ್ಲಿ ತಿನ್ನಿಸುತ್ತಾರೆ. ಎಲ್ಲರೂ ತಿಂಡಿ ತಿಂದದ್ದು ಆದ ಮೇಲೆ ಮನೆ ಮುಂದಿನ ಚಪ್ಪರದ ಮಡ್ಲನ್ನು ಸಾಂಕೇತಿಕವಾಗಿ ಕೀಳುವ ಮೂಲಕ ಹೋಳಿ ಮುಕ್ತಾಯ ಮಾಡುತ್ತಾರೆ. ಮುಕ್ತೇಸರು, ಗೆಡ್ಡೆದವರು, ಉರ‍್ಯೆತಲೆಯರಿಗೆ ವಸ್ತ್ರ, ವೀಳ್ಯಗೌರವ ನೀಡುತ್ತಾರೆ. ಬಳಿಕ ಮಾರನೇ ದಿನ ಎಲ್ಲರೂ ಬಣ್ಣ ಎರಚುವ ವಿನೋದ. ಮಧ್ಯಾಹ್ನ ತಹಸೀಲ್ದಾರ್ ಕಚೇರಿ, ಪೊಲೀಸ್ ಸ್ಟೇಷನ್, ವೆಂಕಟರಮಣ ದೇವಸ್ಥಾನಾದಿಗಳಿಗೆ ವೀಳ್ಯ ಕೊಟ್ಟು ಗೌರವಿಸಿ, ಬಳಿಕ ಮದ್ದುಗುಡ್ಡೆಗೆ ಹೋಗಿ, ಅಲ್ಲಿಂದ

ಸಮಾಜ ಬಾಂಧವರು ಸಿದ್ಧಪಡಿಸಿದ ವಿವಿಧ ಟ್ಯಾಬ್ಲೋಗಳೊಂದಿಗೆ, ಹಾಡು ಕುಣಿತದೊಂದಿಗೆ ಬರುತ್ತಾರೆ. ಇತರ ಕೇರಿಗಳವರೂ ತಮ್ಮ ಟ್ಯಾಬ್ಲೋಗಳೊಂದಿಗೆ ಸೇರಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕುಣಿತ ಟ್ಯಾಬ್ಲೋ ಪ್ರದರ್ಶನ ಮಾಡುತ್ತಾರೆ. ಆಕರ್ಷಕವಾದ ಟ್ಯಾಬ್ಲೋಗೆ ಬಹುಮಾನ ವಿತರಣೆ, (ಕಾಳು ಮೆಣಸು, ಶುಂಠಿ, ಏಲಕ್ಕಿ, ಇವೆಲ್ಲಾ ಸೇರಿಸಿ ಮಾಡಿದ ವಿಶೇಷ) ಪಾನಕ ವಿತರಣೆ ಇತ್ಯಾದಿಗಳೊಂದಿಗೆ ಹೋಳಿಹಬ್ಬ ಮುಗಿಯುತ್ತದೆ. ಮುಂದಿನ ವರ್ಷದ ಹೋಳಿ ಮನೆಯ ನಿಗದಿಯ ಬಳಿಕ, ಹೆಚ್ಚು ಹಣಕ್ಕೆ ಹರಾಜು ಕೂಗಿದ ತಂಡಕ್ಕೆ ಹೋಳಿ ಕುಣಿವ ವಿಶೇಷ ಅಧಿಕಾರ ದೊರೆಯುತ್ತದೆ. ಆ ತಂಡ ಮಾತ್ರ ಮನೆ ಮನೆಗೆ ಹೋಗಿ, ಕುಣಿದು ಕಾಣಿಕೆ ಸ್ವೀಕರಿಸುವ ಅಧಿಕಾರ ಪಡೆಯುತ್ತಾರೆ. ಅವರು ಏಲಂ ಹಣ ನೀಡಿ, ಉಳಿದದ್ದನ್ನು ತಾವು ಹಂಚಿಕೊಳ್ಳುತ್ತಾರೆ.

## ಕೃಷಿ ಆಚರಣೆಗಳು

ಕೃಷಿಕರಿಗೆ ಬೇಸಾಯ ಎಂಬುದು ಕೇವಲ ಬೆಳೆದು ಉಣ್ಣುವ ಸಾಮಾನ್ಯ ಕ್ರಿಯೆಯಲ್ಲ. ಅದು ಅವರಿಗೆ ಆರಾಧನೆಯೂ ಹೌದು. ಅಂತೆಯೇ, ಕೃಷಿಯ ಎಲ್ಲಾ ಚಟುವಟಿಕೆಗಳನ್ನು ಅವರು ದೈವೀ ಆಚರಣೆಯ ಭಾವನೆಯಲ್ಲಿಯೇ ನಿರ್ವಹಿಸುತ್ತಾರೆ. ಇಲ್ಲಿನವರು ಯುಗಾದಿ ಸಮಯದ ಸುಗ್ಗಿ ತಿಂಗಳಲ್ಲಿ ಗದ್ದೆಯಲ್ಲಿ ಹೊಟ್ಟು ಸುಡುವುದನ್ನು ಆರೂಡು ಹಬ್ಬ ಎಂದು ಕರೆಯುತ್ತಾರೆ. ಅಂದು ರೈತನು ತಳುಹುಲ್ಲು ಮತ್ತು ಬತ್ತದ ಹೊಟ್ಟು ಹಾಗೂ ಗೊಬ್ಬರ ಮತ್ತು ಹುಲ್ಲಿನ ತಲಾ ಮೂರು ರಾಶಿಗಳನ್ನು ಹಾಕಿ ಅದಕ್ಕೆ ಬೆಂಕಿ ಇಡುತ್ತಾನೆ. ಅಂದು ಎತ್ತುಗಳಿಂದ ಗದ್ದೆಯನ್ನು ಆರು ಸಾಲಿನಷ್ಟಾದರೂ ಉಳುವ ಮೂಲಕ ಉಳುಮೆ ಕಾರ್ಯವನ್ನು ಸಾಂಕೇತಿಕವಾಗಿ ಪ್ರಾರಂಭಿಸುತ್ತಾರೆ. ಬಯಲು ಸೀಮೆಯ ಕೃಷಿಕರು ನಡೆಸುವ ಹೊನ್ನಾರು ಆಚರಣೆಯು ಸ್ವಲ್ಪ ಮಟ್ಟಿಗೆ ಇದೇ ಕ್ರಮಗಳನ್ನು ಹೊಂದಿದೆ. ಅವರಿಗೆ ಬೀಜ ಬಿತ್ತುವುದು ಬೀಜ ಮುಹೂರ್ತವಾಗುತ್ತದೆ. ಹಗ್ಗಿ ತಿಂಗಳ ೧೦ನೇ ದಿನದಂದು ಭಕ್ತಿಭಾವದಿಂದ ನಡೆಸುವ ಈ ಕ್ರಿಯೆಗೆ ಹಗ್ಗಿನ ಹತ್ತಾವಧಿ ಎಂಬ ಹೆಸರಿದೆ. ಅಂದು ಮನೆಯ ಹಿರಿಯ ಅಗೇಡಿಯ ಒಂದು ಮೂಲೆಯಲ್ಲಿ ಸಾಂಕೇತಿಕವಾಗಿ ಬೀಜ ಚೆಲ್ಲಿ ಬರುತ್ತಾನೆ. ಈ ಬೀಜ ಮುಹೂರ್ತ ಆದ ಬಳಿಕವೇ ಬೀಜ ಬಿತ್ತುವ ಕೆಲಸಕಾರ್ಯ ನಡೆಯುವುದು. ಮುಂದೆ, ಗದ್ದೆಯಲ್ಲಿ ಪೈರು ನೆಟ್ಟಿ ಮಾಡವುದೂ ಶುಭ ಮುಹೂರ್ತದಲ್ಲಿಯೇ. ಭರತವು ಸಮೃದ್ಧಿಯ ಸಂಕೇತವಾಗುವುದರಿಂದ ಸಾಮಾನ್ಯವಾಗಿ ಹೊಳೆಯಲ್ಲಿ ಭರತ ಇರುವಾಗ ಮೊದಲ ನೆಟ್ಟಿ ಕಾರ್ಯ ಪ್ರಾರಂಭಿಸುತ್ತಾರೆ. ಅದನ್ನು ಗಣಪತಿ ನೆಟ್ಟಿ ಎಂದು ಕರೆದು, ಬೇಯಿಸಿದ ಕಾಳನ್ನು ನೈವೇದ್ಯ ಮಾಡಿ ಎಲ್ಲರಿಗೂ ಹಂಚುವುದು ಆಗಿನ ಪದ್ಧತಿ. ಗದ್ದೆ ಉತ್ತು ತನಗೆ ನೆರವಾದ ಎತ್ತುಗಳಿಗೆ ಪ್ರೀತಿ, ಕೃತಜ್ಞತೆ ತೋರುವ ಸಲುವಾಗಿ ರೈತನು ಎರ್ತ ಮಾಡುತ್ತಾನೆ. ಅಂದು ಅವುಗಳ ಮೈತೊಳೆದು ಎಣ್ಣೆ ತಿಕ್ಕಿ, ಬೇಯಿಸಿದ ಹುರುಳಿ, ಗಂಜಿ, ಕಾಯಿತುರಿ, ಎಳ್ಳೆಣ್ಣೆ ಇತ್ಯಾದಿಗಳನ್ನು ಅವಕ್ಕೆ ತಿನ್ನಿಸುತ್ತಾನೆ. ಆ ಸಂದರ್ಭದಲ್ಲಿಯೇ ಸಸಿ ಕೊಡುವ ಆಚರಣೆ ನಡೆಸುತ್ತಾರೆ. ಅಂದರೆ, ಎಣ್ಣೆ ಉಜ್ಜಿದ ಎತ್ತುಗಳ ಕೊರಳ ಮೇಲೆ ನೊಗ, ನೇಗಿಲು ಇಟ್ಟು, ಒಂದು ಅಗೆಯ ಸೂಡಿಯನ್ನು ಮುಂದೆ ಹಿಡಿದಾಗ ಅವು ತಿನ್ನಲು ಬರುತ್ತವೆ. ಆದರೆ, ಮೊದಲ ಬಾರಿಗೇ ತಿನ್ನಲು ಅವಕಾಶ ಕೊಡದೆ, ಕೈಯನ್ನು ಎಳೆಯುತ್ತಾರೆ. ಹೀಗೆ ಮೂರು ಬಾರಿ ಮಾಡಿದ ಬಳಿಕ, ಅರ್ಧ ತಿಂದ ಅಗೆಯನ್ನು ಗದ್ದೆಯಲ್ಲಿ ನೆಡುತ್ತಾರೆ. ಕೊಯ್ಲು ಸಹ ಕೃಷಿಕರಿಗೆ ಪವಿತ್ರ ಕಾರ್ಯ. ಗದ್ದೆ ಕೊಯ್ಲು ಮಾಡಿ, ಹೊರೆ ಹೊತ್ತು ತರುವಾಗ ಅವರು ಅಂಗಳದ ಸನಿಹ ಹೊಲಿ ಹಿಟ್ಟಿನಲ್ಲಿ (ಬೂದಿಯಲ್ಲಿ) ಬರೆದ ಗೆರೆಗಳನ್ನು ತುಳಿದುಕೊಂಡೇ ಅಂಗಳಕ್ಕೆ ಬರಬೇಕು. ಮೇಟಿ ಕಂಬಕ್ಕೆ ಕಟ್ಟಿದ ಹಡಿಮಂಚದ ಕೆಳಗೆ ಒಣಕಾಯಿ ಚುಚ್ಚಿದ ಕತ್ತಿ ಇಟ್ಟಿರುತ್ತಾರೆ. ಹಡಿಮಂಚದ ಕಾಲಿಗೆ ಬಿದಿರಿನ ಕುಡಿ, ಮೊಳೆ, ಉಕ್ಕೆಗಿಡ ಕಟ್ಟಿರುತ್ತಾರೆ. ಬತ್ತ ಬಡಿಯುವ ಎಲ್ಲರೂ ಹೊಲ್ಯಡ್ ಬಾ ಎಂದೊ, ಹೊಲಿಯಪ್ಪಾ, ಹೊಲಿ ಹೊಲಿ ಹೊಲಿಯಪ್ಪಾ ಎಂದೋ ಕೂಗುವುದು ಸಮೃದ್ಧಿ ಆಶಯದ ನುಡಿಗಟ್ಟೇ ಆಗಿದೆ. ಕೊನೆಯಲ್ಲಿ ಹೊಲಿರಾಶಿ ಅಥವಾ ಬತ್ತದ ರಾಶಿಗೆ ಯಜಮಾನ ಪೂಜೆ ಮಾಡುವುದೂ ಸಂಪ್ರದಾಯವಾಗಿದೆ. ಶುಭಮುಹೂರ್ತದಲ್ಲಿ ತಿರಿ ಕಟ್ಟುವುದಲ್ಲದೆ, ಕೊನೆಗೆ ತಿರಿಗೂ ಪೂಜೆ ಮಾಡಿ, ಅಂದು ಸಿಹಿ ಊಟ ಮಾಡುತ್ತಾರೆ (ಬೆಳ್ಳಿ ಮಿನುಗು, ಪು. ೨೯–೩೪).

**ಕೆಡ್ಡಸ :** ಜಿಲ್ಲೆಯ ಕೃಷಿಕರು ಭೂತಾಯಿಯ ಬಗೆಗಿನ ಅತೀವ ಪ್ರೀತಿ, ಗೌರವಗಳಿಂದ ಆಚರಿಸುವ ಒಂದು ಹಬ್ಬ ಇದು. ಈ ಅವಧಿಯಲ್ಲಿ (ಸಾಮಾನ್ಯವಾಗಿ ಫೆಬ್ರವರಿಯಲ್ಲಿ) ಭೂ ತಾಯಿಯು ಋತುಮತಿಯಾಗುತ್ತಾಳೆಂಬ ನಂಬಿಕೆ ಇದ್ದು, ಆ ಮೂರೂ ದಿನಗಳಲ್ಲಿ ಉಳುಮೆ ಅಥವಾ ಅಗೆತದ ಕೃಷಿ ಕಾರ್ಯಗಳನ್ನು ಮಾಡುವುದು ನಿಷಿದ್ಧವಾಗಿರುತ್ತದೆ. ನಾಲ್ಕನೇ ದಿನ ಆಕೆ ಸ್ನಾನ ಮಾಡಿ ಶುಚಿಯಾಗುತ್ತಾಳೆಂದೂ ನಂಬುತ್ತಾರೆ. ಮೊದಲ ದಿನ ಅಕ್ಕಿ, ಹುರುಳಿ, ಕಡಲೆಯಂತಹ ಕಾಳುಗಳನ್ನು ಹುರಿದು, ಎಣ್ಣೆ ಬೆರೆಸಿ ಭೂಮಿಗೆ ಇಡುವುದು ಪದ್ಧತಿಯಾಗಿದೆ. ಈ ಹಬ್ಬದ ಭಾಗವಾಗಿ ಬೇಟೆಯಾಡುವುದೂ ಒಂದು ಆಚರಣೆಯಾಗಿದೆ. ಜಿಲ್ಲೆಯಲ್ಲಿನ ಜೈನರು, ಕ್ರಿಶ್ಚಿಯನ್ನರು ಹಾಗೂ ಮುಸ್ಲಿಂ ಮೊದಲಾದ ಇತರ ಧರ್ಮೀಯರು ಇತರೆಡೆಯಂತೆಯೇ ಇಲ್ಲಿಯೂ ತಮ್ಮ ಪದ್ಧತಿಗಳಿಗನುಗುಣವಾಗಿ ವಿವಿಧ ಹಬ್ಬಗಳನ್ನಾಚರಿಸುತ್ತಾರೆ.

**ಕದಿರು ಹಬ್ಬ :** ಪುದ್ದರ್ ಅಥವಾ ಹೊಸ ಅಕ್ಕಿ ಹಬ್ಬ, ಹೊಸತು ಉಣ್ಣುವ ಹಬ್ಬ ಎಂಬ ಹೆಸರೂ ಈ ಹಬ್ಬಕ್ಕಿದೆ. ಕೃಷಿಕರು ಹೊಸ ಬೆಳೆಯ ತೆನೆಯನ್ನು ಭಕ್ತಿ ಸಂಭ್ರಮಗಳೊಂದಿಗೆ ಆಚರಣಾತ್ಮಕವಾಗಿ ಮನೆಗೆ ತರುವುದನ್ನೇ ಕದಿರುಹಬ್ಬ (ಕುರಲ್ ಪರ್ಬ) ಅಥವಾ ಕುರಳು ಕಟ್ಟುವುದು, ಮನೆ ತುಂಬಿಸುವುದು (ಇಲ್ಲ್ ದಿಂಜಾವುನಿ) ಎಂದು ಕರೆಯಲಾಗುತ್ತದೆ. ಹಬ್ಬದಂದು ಮನೆಯನ್ನೂ, ಅಂಗಳವನ್ನೂ ಸಾರಿಸಿ ಚೊಕ್ಕಟ ಮಾಡುತ್ತಾರೆ. ಗೆರಸೆ, ಕಳಸಕುಕ್ಕೆ, ಬಳ್ಳ ಮೊದಲಾದ ಭತ್ತದ ಅಳತೆ ಸಾಧನಗಳನ್ನು ತೊಳೆದು ಶುದ್ಧಿ ಮಾಡಿ, ಜೇಡಿಮಣ್ಣಿನ ರಂಗೋಲಿಗಳಿಂದ ಅಲಂಕರಿಸುತ್ತಾರೆ. ಹಬ್ಬದ ಹಿಂದಿನ ದಿನ ಅಥವಾ ಮುಂಜಾನೆ ದಡ್ಡಲ್ ನಾರು, ಮಾವು, ಹಲಸು, ಬಿದಿರಿನ ಸೊಪ್ಪು, ತುಂಬೆಹೂ, ಉಂಡೆಬಳ್ಳಿಗಳನ್ನು ತಂದು, ಗದ್ದೆಯಿಂದ ತಂದ ಭತ್ತದ ತೆನೆಯ ಜೊತೆಗೆ ತುಳಸಿಕಟ್ಟೆಯಲ್ಲಿ ಇಟ್ಟಿರುತ್ತಾರೆ. ಹಬ್ಬದ ಮುಂಜಾನೆ ಮನೆಯ ಯಜಮಾನ ಸ್ನಾನ–ಮಡಿಯಲ್ಲಿ ಬಂದು, ಆ ತೆನೆ ಮತ್ತಿತರ ಸೊಪ್ಪುಗಳನ್ನು ಅರ್ಚಿಸಿ, ನಮಿಸಿ ಅವನ್ನು ಹಿಡಿದು ಮನೆ ಅಂಗಳದ ತುಳಸಿಕಟ್ಟೆಗೆ ಪ್ರದಕ್ಷಿಣೆ ಮಾಡಿ, 'ಪೊಲಿಯೋ ಪೊಲಿ ಪೊಲಿ ಪೊಲಿ' ಎಂದು ಹೇಳುತ್ತಾ ಮನೆ ಬಾಗಿಲಿಗೆ ಬರುತ್ತಾನೆ. ಗೃಹಿಣಿ ಆತನ ಕಾಲಿಗೆ ನೀರು ಹಾಕಿ, ಸ್ವಾಗತಿಸುತ್ತಾಳೆ. ಆತನು ಚಾವಡಿಯ ಮಣೆಯ ಮೇಲೆ ಆ ಕದಿರನ್ನು ಇಟ್ಟಾಗ, ಮನೆಯವರೆಲ್ಲರೂ ಧನ–ಧಾನ್ಯ ಸಮೃದ್ಧಿಗಾಗಿ ಪ್ರಾರ್ಥಿಸುತ್ತಾರೆ. ಹಲಸಿನ ಎಲೆಯ ಮೇಲೆ, ಮಾವಿನ ಎಲೆ, ದಡ್ಡಲ್ ಕೆತ್ತೆ, ಉಂಡೆಬೇರು, ಬಿದಿರು ಎಲೆ ಹಾಗೂ ಸ್ವಲ್ಪ ಭತ್ತದ ತೆನೆಯನ್ನು ಇಟ್ಟು, ದಡ್ಡೆಲ್ ಅಥವಾ ತೆಂಗಿನ ಸೋಗೆಯ ನಾರಿನಿಂದ ಕಟ್ಟಿ, ಆ ಒಂದೊಂದು ಕಟ್ಟನ್ನು ದೇವರ ಕೋಣೆ, ವಾಸ್ತು ಕಂಬ, ಭೂತದ ಮಂಚ, ಕುರ್ಚಿ, ಮೇಜು, ಬಾವಿ, ಹಲಸು, ಅಡಿಕೆ ಮತ್ತಿತರ ಮರ ಹೀಗೆ ಎಲ್ಲಕ್ಕೂ ಕಟ್ಟುತ್ತಾರೆ. ಪೂಜಿಸಿದ ತೆನೆಯಿಂದ ಬೆಸಸಂಖ್ಯೆಯಲ್ಲಿ ಭತ್ತದ ಕಾಳು ತೆಗೆದು, ಸುಲಿದು, ಆ ಅಕ್ಕಿಯನ್ನು ಪಾಯಸಕ್ಕೆ ಅಥವಾ ಹಾಲಿಗೆ ಹಾಕಿ ಸೇವಿಸುತ್ತಾರೆ. ಅಡುಗೆ ಆದಮೇಲೆ ಪಿತೃಗಳಿಗೆ 'ಅಗೆಲ್' ಹಾಕಿದ ಬಳಿಕ ತಾವೆಲ್ಲಾ ಊಟ ಮಾಡುತ್ತಾರೆ. ಹಬ್ಬಕ್ಕಾಗಿ ಕುಂಬಾರ ತಯಾರಿಸಿಕೊಟ್ಟ ಹೊಸ ಮಡಕೆಯಲ್ಲಿಯೇ ಅಂದು ಪುದ್ವಾರ್ ಅನ್ನ ಮಾಡುತ್ತಾರೆ. ಯಜಮಾನನು ತನ್ನ ಪತ್ನಿಯೊಂದಿಗೆ ತಾಂಬೂಲ ಹಾಗೂ ಪುದ್ವಾರ್ ಊಟ ಇರುವ ಬಾಳೆಎಲೆಯನ್ನು ಒಲೆಯ ಬೆಂಕಿಗೆ ಇಡುವುದೂ ಉಂಟು. ಆ ವರ್ಷ ಮನೆಯಲ್ಲಿ ವಿವಾಹಕಾರ್ಯ ಆಗಿದ್ದರೆ, ಪುದ್ವಾರ್ ಆಚರಣೆಗೆ ಬೀಗರನ್ನು ಕರೆಯುತ್ತಾರೆ. ಆ ವರ್ಷ ಹುಟ್ಟಿದ ಮಗು ಇದ್ದರೆ ಮಗುವಿಗೆ ಅನ್ನ ಕೊಡುವ ಶಾಸ್ತ್ರದ ಅಂಗವಾಗಿ ಅನ್ನದ ಅಗುಳನ್ನು ಮಗುವಿನ ಬಾಯಿಗಿಡುತ್ತಾ 'ಈ ಅನ್ನವನ್ನು ಉಂಡು ನೀನು ಈ ಅನ್ನದ ಬೇರನ್ನು ಕೂಡ ಒಕ್ಕಲು ಮಾಡು ಮಗನೆ' ಎಂದು ಹಾರೈಸುವುದೂ ಇದೆ. ಅಂದು ಮನೆಯಲ್ಲಿ ಮಾಂಸಾಹಾರ ನಿಷಿದ್ಧವಾಗಿದೆ. ಬ್ಯಾರಿಗಳೂ ಹೊಸತು ಉಣ್ಣುವ ಹಬ್ಬ ಮಾಡುತ್ತಾರೆ. ಅಂದು ಮನೆಯ ಮಗನು ಹೊಳೆಯ ನೀರು ಭರತಕ್ಕೇರುವ ಹೊತ್ತಿನಲ್ಲಿ ಭತ್ತದ ತೆನೆಯನ್ನು ತಲೆಯ ಮೇಲಿಟ್ಟುಕೊಂಡು ಬಲಗಾಲು ಮುಂದೆ ಮಾಡಿ ಮನೆಯೊಳಗೆ ಬಂದು, ಮಧ್ಯಭಾಗದಲ್ಲಿ ತೆನೆ ಕಟ್ಟುತ್ತಾನೆ. ಅಂದು ಹೊಸಅಕ್ಕಿ ಪಾಯಸದೊಂದಿಗೆ ಮೀನಿನ ಪದಾರ್ಥವೂ ಇರುತ್ತದೆ. ಆದರೆ, ಮಾಂಸಾಹಾರ ನಿಷಿದ್ಧ.

**ಪತ್ತ್ ಮಂದಿ ತಪ್ಪು ಕಡ್ಪುನು (ಹತ್ತು ಮಂದಿ ಸೊಪ್ಪು ಕಡಿಯುವುದು) :** ಇದು ಗದ್ದೆಗೆ ಸೊಪ್ಪು ಹಾಕುವ ಉದ್ದೇಶದ ಒಂದು ಸಂಪ್ರದಾಯ. ಪಡುಬಿದ್ರಿಯ ಇನ್ನಾಗ್ರಾಮದಲ್ಲಿ ಇದಕ್ಕಾಗಿ ಮೀಸಲಿಟ್ಟ ಸುಮಾರು

೫೦ ಎಕರೆ ಹಸಿರು ಭೂಮಿಯ ಅರ್ಧಭಾಗದಲ್ಲಿನ ಸೊಪ್ಪನ್ನು ಒಂದು ವರ್ಷ ಕಡಿದರೆ, ಮುಂದಿನ ವರ್ಷ ಇನ್ನರ್ಧ ಭಾಗದ್ದನ್ನು ಕೊಯ್ಯುತ್ತಾರೆ. ಆಷಾಢ ತಿಂಗಳ ಮಳೆಗಾಲದಲ್ಲಿ ಊರ ಹಿರಿಯರು ನಿಗದಿ ಮಾಡಿದ ಒಂದು ದಿನ ರೈತರು ಹಾಗೂ ದಲಿತರು ಹೋಗಿ, ಅಲ್ಲಿನ ಅಶ್ವತ್ಥಮರಕ್ಕೆ ಪೂಜೆ ಮಾಡಿ, ದುಡಿ ಬಾರಿಸಿ, ಪಾಡ್ದನ ಹಾಡಿ ಸ್ಥಳೀಯ ದೈವಕ್ಕೆ ಕಾಣಿಕೆ ಒಪ್ಪಿಸಿ ಅನುಮತಿ ಬೇಡಿ ಸೊಪ್ಪು ಕಡಿಯುತ್ತಾರೆ. ಏಳು ದಿನಗಳವರೆಗೆ ಹಗಲಲ್ಲಿ ಮಾತ್ರ ಸೊಪ್ಪನ್ನು ಕತ್ತಿಯಿಂದ ಕೊಯ್ಯಬೇಕು ಮತ್ತು ಆ ಎಲ್ಲಾ ಸೊಪ್ಪನ್ನು ತಮ್ಮ ಗದ್ದೆಗಳಿಗೆ ಹಸಿರೆಲೆ ಗೊಬ್ಬರವಾಗಿ ಮಾತ್ರ ಬಳಸಬೇಕು ಎಂಬ ನಿಬಂಧನೆಯನ್ನು ಇಲ್ಲಿನವರು ಹಾಕಿಕೊಂಡಿದ್ದಾರೆ.

**ನೂಲ ಹುಣ್ಣಿಮೆ :** ಖಾರ್ವಿಗಳು ನೂಲ ಹುಣ್ಣಿಮೆಯಂದು ಸಮುದ್ರರಾಜನನ್ನು ವಿಶೇಷವಾಗಿ ಪೂಜಿಸುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ. ಅಂದು ವಾದ್ಯ ಮೇಳದೊಂದಿಗೆ ಸಾಮೂಹಿಕವಾಗಿ ಕಡಲತೀರಕ್ಕೆ ಹೋಗಿ ಅಲ್ಲಿ ಸಮುದ್ರರಾಜನಿಗೂ ನೂಲ ಸಂಸ್ಕಾರ ಮಾಡುವುದಲ್ಲದೆ ತಮ್ಮ ಜನಿವಾರಗಳನ್ನು ಸಮುದ್ರರಾಜನಿಗೆ ಒಪ್ಪಿಸುತ್ತಾರೆ. ಅಲ್ಲದೆ, ಬಗೆಬಗೆಯ ಭಕ್ಷ್ಯಭೋಜ್ಯಗಳನ್ನು ನೈವೇದ್ಯ ಮಾಡಿ, ದೀಪದ ಸೇವೆಯೊಂದಿಗೆ ತಮ್ಮ ಬದುಕಿಗೆ ಆಧಾರವಾದ ಸಮುದ್ರ ರಾಜನಿಗೆ ಕೃತಜ್ಞತೆ ಸಲ್ಲಿಸುತ್ತಾರೆ. ಈ ಸಂಪ್ರದಾಯವು ಎಲ್ಲಾ ಪ್ರಮುಖ ಜಾತಿಗಳಾದ ಬ್ರಾಹ್ಮಣ, ವಿಶ್ವಕರ್ಮ ಹಾಗೂ ಇತರೆ ಜಾತಿಗಳಲ್ಲಿ ಆಚರಣೆಯಲ್ಲಿದೆ.

**ಆಟಿ ಮಾಸ :** ರಾಜ್ಯದ ಇತರೆಡೆ ಆಷಾಢ ಎಂದು ಗುರುತಿಸುವ ರೀತಿಯಲ್ಲಿಯೇ ತುಳು ನಾಡಿನಲ್ಲಿ ಆಟಿ ಮಾಸವಿದೆ. ಜುಲೈ ತಿಂಗಳ ಕರ್ಕಾಟಕ ಸಂಕ್ರಮಣದಿಂದ ಆಗಸ್ಟ್‌ನ ಸಿಂಹ ಸಂಕ್ರಮಣದವರೆಗಿನ ಕಾಲಾವಧಿಯ ಆಟಿ ಮಾಸವು ತುಳುವರ ಬದುಕಿನಲ್ಲಿ ಹಲವೊಂದು ವಿಶೇಷ ನಂಬಿಕೆ, ಆಚರಣೆಗಳಿಗೆ ಕಾರಣವಾಗಿದೆ. ಸುರಿವ ಜಡಿಮಳೆ, ಶೀತ, ಕ್ರಿಮಿಕೀಟಗಳ ಹಾವಳಿ, ಆಹಾರದ ಕೊರತೆಗಳಿಂದ ಜನ ತಲ್ಲಣಗೊಳ್ಳುವುದು ಆ ದಿನಗಳಲ್ಲಿ ಸಾಮಾನ್ಯವಾಗಿದ್ದಿತು. ಹೊಸದಾಗಿ ಮದುವೆಯಾದ ಗಂಡ–ಹೆಂಡತಿ ಈ ತಿಂಗಳಲ್ಲಿ ಒಂದೆಡೆ ಇರಬಾರದು ಎಂಬ ನಂಬಿಕೆಯಿಂದ, ಆಕೆ ತಪ್ಪದೇ ತೌರಿಗೆ ಬರಬೇಕೆಂಬ ಸಂಪ್ರದಾಯ ಹುಟ್ಟಿಕೊಂಡಿದೆ. ಕೃಷಿ ಕಾರ್ಯದ ಬಳಿಕ ಸಾಕಷ್ಟು ಬಿಡುವು ಇರುವುದರಿಂದ, ಮನೆಯ ದೂಳು–ದುಂಬು ಕೊಡವಿ, ಮನೆಯಲ್ಲಿನ ಕಸದ ಮಾರಿಯನ್ನು ಹೊರಹಾಕಬೇಕೆಂದೂ ಅವರು ಭಾವಿಸುತ್ತಾರೆ. ಈ ತಿಂಗಳಲ್ಲಿ ದೇವಸ್ಥಾನಗಳಲ್ಲಿ ಪೂಜೆ ಇರುವುದಿಲ್ಲ. ಮನೆಗಳಲ್ಲಿ ಯಾವುದೇ ಶುಭಕಾರ್ಯಗಳನ್ನು ಮಾಡುವುದಿಲ್ಲ. ಬದಲಿಗೆ, ಇದನ್ನು ಸತ್ತವರ ತಿಂಗಳು ಎಂದು ಪರಿಗಣಿಸಿ ಮೃತರ ಪ್ರೀತ್ಯರ್ಥ ಎಡೆ ಇಟ್ಟು ಪೂಜಿಸುತ್ತಾರೆ. ಇದಕ್ಕೆ ಆಟಿದ ಅಗೇಲು ಎನ್ನುತ್ತಾರೆ. ಈ ಸಂದರ್ಭದಲ್ಲಿ ಆಟಿಕಳೆಂಜ ಎಂಬ ನೃತ್ಯ ಪ್ರದರ್ಶನವನ್ನು ನಲ್ಕೆ ಸಮುದಾಯದವರು ಮಾಡುತ್ತಾರೆ. ಆಟಿ ತಿಂಗಳ ದೋಷಗಳನ್ನು ಪರಿಹಾರ ಮಾಡುವುದು ಇದರಿಂದ ಸಾಧ್ಯವೆಂಬುದು ಸಾಮಾನ್ಯ ನಂಬಿಕೆಯಾಗಿದೆ. ಆಟಿಕಳೆಂಜ ಎಂದರೆ ಆಟಿಯ ದೋಷವನ್ನು ಕಳೆಯುವುದು ಎಂದರ್ಥ. ಆಟಿ ಅಮಾವಾಸ್ಯೆಯ ದಿನ ಕೃಷಿಕರು ತಮ್ಮ ಗದ್ದೆಗೆ ಕಳ್ಳಿ ನೆಡುವ ಅಥವಾ ಕಾಪು ಇಡುವ ಸಂಪ್ರದಾಯವೂ ಇದೆ. ಮುಳಿಹುಲ್ಲು, ಕಳ್ಳೀ, ಓಟೆ, ಈಚಲ, ನೆಕ್ಕಿಯಂತಹ ಕೆಲವು ಸೊಪ್ಪನ್ನು ಬಿದಿರಿನ ಅಂಡೆಯಲ್ಲಿಟ್ಟು ಅದನ್ನು ಕಾಸರಕನ ಮರದ ಗೆಲ್ಲಿನಲ್ಲಿ ಕಟ್ಟುತ್ತಾರೆ. ಸೊನ ಅಥವಾ ಕಾಸರಕನ ಗೆಲ್ಲನ್ನು ಗದ್ದೆಯ ಮಧ್ಯೆ ನೆಟ್ಟರೆ ಬೆಳೆಗೆ ದೃಷ್ಟಿ ತಾಗುವುದಿಲ್ಲ – ಎಂಬ ನಂಬಿಕೆ ಅವರಲ್ಲಿದೆ. ಮನೆಯವರೆಲ್ಲಾ ಬಾಳೆಎಲೆಯಲ್ಲಿ ತೇರು ಹೂ, ವೀಳ್ಯದೆಲೆ, ಅಡಿಕೆ, ನಾಣ್ಯ ಹಾಗೂ ಹಣತೆ ಇಟ್ಟು, ಅದನ್ನು ತಮ್ಮ ತಲೆಯ ಮೇಲಿಟ್ಟುಕೊಂಡೇ ಕೆರೆಯ ನೀರಿನಲ್ಲಿ ಮುಳುಗಿ ತೇಲಿಬಿಡುತ್ತಾರೆ.

**ಸೋಣ :** ತುಳುವರಿಗೆ ಸೋಣ ಸಂಕ್ರಾಂತಿ ಒಂದು ಪ್ರಮುಖ ಆಚರಣೆಯಾಗಿದೆ. ಆಟಿಯು ಅವರಿಗೆ ಹಲವು ನಿಷಿದ್ಧಗಳ ಮಾಸವಾದರೆ, ಸೋಣವು ಪವಿತ್ರವಾದುದೆಂದು ಭಾವಿಸಲಾಗಿದೆ. ಅಂತೆಯೇ, ಇದರಲ್ಲಿ ಹಲವು ಹಬ್ಬ ಆಚರಣೆಗಳು ನಡೆಯುತ್ತವೆ. ಆಟಿ ತಿಂಗಳಲ್ಲಿ ಆಟಿಕಳೆಂಜ ಬಂದರೆ, ಸೋಣದಲ್ಲಿ ಸೋಣ ಜೋಗಿ ಅಥವಾ ಜೋಗಿ ಪುರುಷನ ಕುಣಿತ ಕಾಣಬರುವುದು ವಿಶೇಷವಾಗಿದೆ. ನಲಿಕೆಯವರು ತಮ್ಮ ಚಿಕ್ಕ ಮಕ್ಕಳಿಗೆ ಕೆಂಪು ಪ್ರಧಾನವಾದ ಉಡುಗೆ–ತೊಡುಗೆ ವೇಷ ಹಾಕಿಸಿ, ತೆಂಬರೆ ಬಾರಿಸಿಕೊಂಡು

ಹಾಡು ಹೇಳುತ್ತಾ ಮನೆ ಮನೆ ಮುಂದೆ ಕುಣಿಸಿ ದಾನಪಡೆಯುತ್ತಾರೆ. ಜೋಗಿ ಬರುವ ಸಮಯಕ್ಕೆ ಮನೆಯವರು ತಮ್ಮ ತುಳಸಿಕಟ್ಟೆ ಮುಂದೆ ದಾನದ ವಸ್ತುಗಳಿರುವ ಗೆರಸೆಯಲ್ಲಿ, ಮಸಿ ನೀರು, ಭತ್ತ, ದೀಪವನ್ನು ಇಟ್ಟಿರುತ್ತಾರೆ. ಜೋಗಿಯು ಮಸಿ ನೀರನ್ನು ಎಲ್ಲೆಡೆ ಚಿಮುಕಿಸುತ್ತಾನೆ. ಹಾಡಿಗೆ ತಕ್ಕಂತೆ ಕುಣಿತ ಮಾಡಿ, ದಾನಿಗಳಿಗೆ ಶುಭ ಹಾರೈಸುತ್ತಾನೆ. ಗೆರೆಸೆಯಲ್ಲಿನ ದಾನ ಪಡೆದು, ಮುಂದಿನ ಮನೆಗೆ ಹೋಗುತ್ತಾರೆ. ಆಟಿ ತಿಂಗಳಲ್ಲಿ ಮುಚ್ಚಿದ ಎಲ್ಲಾ ದೈವಸ್ಥಾನಗಳ ಬಾಗಿಲನ್ನು ಸೋಣ ಸಂಕ್ರಮಣದಂದು ತೆಗೆದು, ಪೂಜಿಸುತ್ತಾರೆ.

**ನವರಾತ್ರಿ :** ಇತರೆಡೆಯಂತೆ ಗೊಂಬೆಗಳನ್ನು ಕೂರಿಸಿ ದಸರಾ ಮಾಡುವ ಅಭ್ಯಾಸ ತುಳುನಾಡಿನಲ್ಲಿ ಇಲ್ಲ. ಆದರೆ, ದುರ್ಗಾಪೂಜೆ, ಉತ್ಸವಾದಿಗಳು ದೇವಸ್ಥಾನಗಳಲ್ಲಿ ನಡೆಯುತ್ತವೆ. ಕೆಲವೆಡೆ ದಸರಾ ಸಾಹಿತ್ಯೋತ್ಸವ, ಸಂಗೀತೋತ್ಸವಗಳು ಸಾರ್ವಜನಿಕ ಸಹಭಾಗಿತ್ವದೊಂದಿಗೆ ಸಡಗರದಿಂದ ಜರುಗುತ್ತವೆ. ಯಕ್ಷಗಾನ ತಂಡಗಳು ನವರಾತ್ರಿಗಾಗಿ ವಿಶೇಷ ಹರಕೆ ಆಟಗಳನ್ನು ಪ್ರದರ್ಶಿಸುತ್ತವೆ. ತುಳುನಾಡಿನಲ್ಲಿ ನವರಾತ್ರಿಯ ಇನ್ನೊಂದು ವಿಶೇಷವೆಂದರೆ ಹುಲಿವೇಷಧಾರಿಗಳು ಚಂಡೆ, ಡೋಲು ಮೊದಲಾದ ವಾದ್ಯಗಳ ಗತ್ತಿಗನುಗುಣವಾಗಿ ಬೀದಿಬೀದಿಗಳಲ್ಲಿ ಕುಣಿತ ಮಾಡುವುದು. ಮೈ, ಮುಖಕ್ಕೆ ಪಟ್ಟೆಹುಲಿ, ಚಿರತೆಗಳ ಬಣ್ಣ ಹಚ್ಚಿಕೊಂಡು ಆ ಪ್ರಾಣಿಗಳ ಹಾವಭಾವಗಳನ್ನು ಅನುಕರಿಸುವಂತೆ ಆಕರ್ಷಕ ಕುಣಿತ ಮಾಡುವ ಕಲಾ ತಂಡಗಳಿಗೆ ಪ್ರೇಕ್ಷಕರು ಕಾಣಿಕೆಯನ್ನೂ ನೀಡುತ್ತಾರೆ. ಕೆಲವರು ಹೀಗೆ ವೇಷ ಹಾಕಿ ಕುಣಿತ ಮಾಡುವ ಹರಕೆ ಮಾಡಿಕೊಳ್ಳುವುದು ಪದ್ಧತಿಯಾಗಿದೆ. ಕೆಲವರು ಲಿಪ್‌ಸ್ಟಿಕ್ ಹಚ್ಚಿ, ವ್ಯಾನಿಟಿ ಬ್ಯಾಗ್ ಹಿಡಿದು ಬಳುಕುತ್ತಾ, ನಡೆಯುವ ತರುಣಿ, ಕೋಡಂಗಿ, ಹಾಲು ಮಾರುವ ವ್ಯಕ್ತಿ, ಸಿಂಹದ ವೇಷಧಾರಿಯೊಂದಿಗೆ ಕೋವಿ ಹಿಡಿದ ಬೇಟೆಗಾರ ಮೊದಲಾದ ವಿನೋದ ವೇಷಗಳನ್ನೂ ಹಾಕಿ ಬೀದಿಗಳಲ್ಲಿ ಜನರಂಜನೆ ಮಾಡುವುದೂ (ಈಚೆಗೆ ದೀಪಾವಳಿ ಹಬ್ಬದಲ್ಲಿ ಸಹ) ಮಂಗಳೂರು, ಉಡುಪಿ ಮೊದಲಾದ ನಗರಗಳಲ್ಲಿ ಕಂಡುಬರುತ್ತದೆ.

ಹೀಗೆ, ಎಲ್ಲಾ ಸಮುದಾಯದವರಿಗೂ ಸಾಮಾನ್ಯವಾಗಿರುವ ಹಲವಾರು ಹಬ್ಬಗಳಿರುವಂತೆ ಜಾತಿ ವಿಶಿಷ್ಟವಾದ ಹಬ್ಬಗಳೂ ಕೆಲವು ಇವೆ. ಉದಾ: ಚಿತ್ಪಾವನ ಮಹಿಳೆಯರು ಗಣೇಶನ ಹಬ್ಬದ ಮುನ್ನಾದಿನ ಹರತಾಳಿಕಾ ಎಂಬ ವ್ರತಾಚರಣೆ ಮಾಡುತ್ತಾರೆ. ದಿನಪೂರ್ತಿ ನಿರಾಹಾರ ಉಪವಾಸದಿಂದ ಶಿವನನ್ನು ಪೂಜಿಸುವ ಈ ಹಬ್ಬವು ಇತರ ಜನಸಮುದಾಯದವರು ಮಾಡುವ ಗೌರಿಹಬ್ಬಕ್ಕಿಂತ ವಿಭಿನ್ನವಾಗಿರುತ್ತದೆ ಎನ್ನಲಾಗಿದೆ. ಬೊಡ್ಡಣ ಅಥವಾ ಮರಿಗೆ ಪೂಜೆ ಎಂಬುದು ಈ ಸಮುದಾಯದ ಮಹಿಳೆಯರು ಸಾಮೂಹಿಕವಾಗಿ ನಡೆಸುವ ಪೂಜಾ ಪದ್ಧತಿಯಾಗಿದೆ. ಮರದಿಂದ ಮಾಡಿದ ಮರಿಗೆ (ಪಾತ್ರೆ)ಯಲ್ಲಿ ಜೋಗೇಶ್ವರಿಯ ಪ್ರತಿಮೆ ಇರಿಸಿ, ಅದರ ಸುತ್ತಲೂ ಮಹಿಳೆಯರು ಕುಳಿತು, ಕಾಹೇಣಗಳನ್ನು (ಮಂತ್ರ) ಇದಕ್ಕೆ ದಧ್ಯುತ್ಸವ ಎಂದೂ ಕರೆಯುತ್ತಾರೆ. ಹೇಳುತ್ತಾ ಅರಿಸಿನ, ಕುಂಕುಮ, ಹಾಲು, ಮೊಸರು ಇತ್ಯಾದಿಗಳಿಂದ ಅರ್ಚಿಸುತ್ತಾರೆ. ಈ ಪೂಜೆಯಲ್ಲಿ ಭಾಗವಹಿಸುವ ಸ್ತ್ರೀಯರ ಸಂಖ್ಯೆ ಹಾಗೂ ಅನುಸರಿಸುವ ನೇಮ–ಟಿಯಮ, ಉಡುಗೆ–ತೊಡುಗೆಗಳ ಬಗೆಗೆ ಕೆಲವು ನಿರ್ಬಂಧಗಳಿರುತ್ತವೆ. ರಾಂಗಣೆ ಎಂಬ ವ್ರತದಲ್ಲಿ ಮುಂಜಾನೆ ಐದು ಮನೆಗಳಿಗೆ ಮೌನವಾಗಿ ಹೋಗಿ, ಆ ಮನೆಗಳ ಮುಹೂರ್ತ ದ್ವಾರಗಳನ್ನು ಪೂಜಿಸಿ, ತೆಂಗಿನಕಾಯಿಯನ್ನು ಆ ಮನೆಯೊಳಗೆ ಉರುಳಿ (ರಾಂಗ)ಸಲಾಗುತ್ತದೆ (ಇಂತಹ ಇನ್ನೂ ಕೆಲವು ವಿಶಿಷ್ಟ ವ್ರತಾಚರಣೆಗಳಿಗಾಗಿ 'ಮನೀಷಾ' ೨೦೦೦–೨೦೦೧ ನೋಡಬಹುದು). ಚಿತ್ಪಾವನರ ಈ ವ್ರತಾಚರಣೆಗಳಲ್ಲಿ ಮರಾಠಿ ಮೂಲದ ಸಾಂಸ್ಕೃತಿಕ ಪ್ರಭಾವವನ್ನು ಗುರುತಿಸಬಹುದಾಗಿದೆ.

ಇತರೆಡೆಯಂತೆ ಜಿಲ್ಲೆಯಲ್ಲಿನ ಕ್ರೈಸ್ತ ಧರ್ಮೀಯರೂ ಸಾಂದರ್ಭಿಕವಾಗಿ ಅನೇಕ ಹಬ್ಬ–ಆಚರಣೆಗಳನ್ನು ನಡೆಸುತ್ತಾರೆ. ಇವುಗಳಲ್ಲಿ ಕೆಲವು ಜಗತ್ತಿನ ಇತರೆಡೆಯೂ ಸಾಮಾನ್ಯವಾಗಿ ಕಂಡುಬರುವ ಕ್ರೈಸ್ತರ ಹಬ್ಬದ ಮಾದರಿಗಳಾಗಿದ್ದರೆ, ಇನ್ನು ಕೆಲವು ಪ್ರಾದೇಶಿಕ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿವೆ. ಮೊಂತಿಹಬ್ಬ ಇದಕ್ಕೊಂದು ನಿದರ್ಶನವಾಗಿರುತ್ತದೆ. ಕ್ರಿಸ್‌ಮಸ್ ಅನ್ನು ಏಸುವು ಜನಿಸಿದ ದಿನವೆಂದು ಡಿಸೆಂಬರ್ ೨೫ರಂದು ಜಗತ್ತಿನಾದ್ಯಂತ ಎಲ್ಲಾ ಕ್ರೈಸ್ತರೂ ಬಹು ಸಂಭ್ರಮದಿಂದ ಆಚರಿಸುತ್ತಾರೆ. ಜಿಲ್ಲೆಯ ಕ್ರೈಸ್ತರೂ ಅಂದು ವಿವಿಧ ಬಗೆಯ ತಿಂಡಿ–ತೀರ್ಥಗಳನ್ನು ತಯಾರಿಸಿ ಬಂಧು ಮಿತ್ರರೊಂದಿಗೆ ಊಟ ಮಾಡುವುದಲ್ಲದೆ

ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಹಬ್ಬದ ಅಂಗವಾಗಿ ಕ್ರಿಸ್‌ಮಸ್ ಮರವನ್ನು ಅಲಂಕರಿಸುವುದು, ಕ್ರಿಸ್‌ಮಸ್ ತಾತನ ವೇಷ ಹಾಕುವುದು ಮೊದಲಾದುವು ನಡೆಯುತ್ತವೆ. ಯೇಸುವು ಮರಣ ಹೊಂದಿದ ದಿನವನ್ನು ಶುಭ ಶುಕ್ರವಾರವೆಂದೂ, ಆತ ಪುನರುತ್ಥಾನ ಹೊಂದಿದ ಮೂರನೇ ದಿನವನ್ನು ಈಸ್ಟರ್ ಅಥವಾ ಪಾಸ್ಕಾ ಹಬ್ಬವೆಂದೂ ಆಚರಿಸುತ್ತಾರೆ.

**ಮೊಂತಿ ಹಬ್ಬ :** ಹೊಸ ಬೆಳೆಯ ಆರಾಧನೆಯ ಅಂಗವಾದ ಕದಿರುಹಬ್ಬ, ಹುತ್ತರಿಹಬ್ಬ ಅಥವಾ ಹೊಸ ದೇವರು ಹಬ್ಬಗಳು ನಾಡಿನ ವಿವಿಧ ಭಾಗದ ಕೆಲವು ಹಿಂದೂಗಳಲ್ಲಿರುವಂತೆ, ಕ್ರಿಶ್ಚಿಯನ್ನರಲ್ಲಿಯೂ ಇದ್ದು, ಅದನ್ನು ಅವರು ಮೊಂತಿ ಹಬ್ಬವೆಂದು ಕರೆಯುತ್ತಾರೆ. ಮೇರಿಮಾತೆಯ ಜನ್ಮದಿನವನ್ನೇ ಪ್ರಕೃತಿಮಾತೆಯ ಆರಾಧನೆಯ ದಿನವನ್ನಾಗಿ ಪರಿಗಣಿಸಿ ಕುಟುಂಬದ ಎಲ್ಲರೂ ಒಟ್ಟಾಗಿ ಸೇರಿ ಈ ಹಬ್ಬ ಆಚರಿಸುತ್ತಾರೆ. ಅಂದು ಚರ್ಚ್‌ನಿಂದ ಆಶೀರ್ವದಿಸಿ ತಂದ ಭತ್ತದ ತೆನೆಗಳಿಂದ ಬಿಡಿಸಿದ ಅಕ್ಕಿಯನ್ನು ಹಾಲಿನಲ್ಲಿ ಹಾಕಿ ಬೇಯಿಸಿದ ಪಾಯಸವನ್ನು ಮನೆಯ ಯಜಮಾನ ಎಲ್ಲರಿಗೂ ಬಡಿಸುತ್ತಾನೆ. ಅಂದು ಎಲ್ಲರೂ ಬಾಳೆಎಲೆಯಲ್ಲಿ ಸಸ್ಯಾಹಾರವನ್ನು ಊಟ ಮಾಡುವ ಸಂಪ್ರದಾಯವಿದೆ. ಇದನ್ನು ಇವರು ಕೊರಳಹಬ್ಬ ಎಂದೂ ಕರೆಯುತ್ತಾರೆ. ಜಿಲ್ಲೆಯ ಮುಸ್ಲಿಮರು ಮೊಹರಂ ಸಫರ್, ರಬ್ಬಿಲ್ ಅವ್ವಲ್, ರಜಬ್, ರಮ್‌ಜಾನ್ ಬಕ್ರೀದ್ ಇದ್‌ಮಲ್ ಜ್ವರಹಾ ಮತ್ತು ಬಕ್ರೀದ್ ಅನ್ನು ಹಜ್ ಸಮಾರಂಭದಲ್ಲಿ ಆಚರಿಸುತ್ತಾರೆ ಹಾಗೂ ಈದ್ ಮಿಲಾದ್ ಅನ್ನು ಪ್ರವಾದಿ ಮೊಹಮದ್‌ರ ಜನ್ಮ ದಿನವನ್ನಾಗಿ ಆಚರಿಸುತ್ತಾರೆ. ಮೊದಲಾದ ಹಬ್ಬಗಳನ್ನು ಮಾಡುತ್ತಾರೆ. (ಈದ್ ಉಲ್ ಫಿತರ್) ರಮ್‌ಜಾನ್ ಅಂಗವಾಗಿ ಉಪವಾಸ, ಪ್ರಾರ್ಥನೆ, ಬಡವರಿಗೆ ದಾನ ಇತ್ಯಾದಿಗಳು ಸಾಂಪ್ರದಾಯಿಕವಾಗಿ ನಡೆಯುತ್ತವೆ.

**ಬಾಹುಬಲಿಗೆ ಮಹಾಮಸ್ತಕಾಭಿಷೇಕ :** ತುಳುನಾಡಿನಲ್ಲಿ ಕಾರ್ಕಳ, ವೇಣೂರು ಹಾಗೂ ಧರ್ಮಸ್ಥಳ ಹೀಗೆ ಮೂರು ಕ್ಷೇತ್ರಗಳಲ್ಲಿ ಬಾಹುಬಲಿ ವಿಗ್ರಹಗಳಿದ್ದು, ಮಹಾಮಸ್ತಕಾಭಿಷೇಕವು ಬಾಹುಬಲಿ ಮೂರ್ತಿಗಳಿಗೆ ೧೨ ವರ್ಷಕ್ಕೊಮ್ಮೆ ಮಾಡುವ ವಿಶೇಷ ವಿಧಿಯಾಗಿದೆ. ಆದಿತೀರ್ಥಂಕರ ವೃಷಭದೇವನ ಮಗನಾದ ಬಾಹುಬಲಿಯು ಕೇವಲ ಜ್ಞಾನ ಪಡೆದು ಮೋಕ್ಷಕ್ಕೆ ಹೋದ ಪ್ರಥಮನೆಂಬ ನಂಬಿಕೆ ಜೈನರದು. ಅಂತೆಯೇ, ಆತನನ್ನು ಇವರು ವಿಶೇಷ ಪೂಜೆ, ಆರಾಧನೆಗಳಿಂದ ಗೌರವಿಸುತ್ತಾರೆ. ಆತ ತೀರ್ಥಂಕರನಲ್ಲವಾದುದರಿಂದ ಪಂಚಕಲ್ಯಾಣ ಮಹೋತ್ಸವವನ್ನು ಆಚರಿಸುವಂತಿಲ್ಲ. ಆದ್ದರಿಂದ ೧೨ ವರ್ಷಕ್ಕೊಮ್ಮೆ ಮಹಾಮಸ್ತಕಾಭಿಷೇಕವನ್ನು ವೈಭವದಿಂದ ನೆರವೇರಿಸುತ್ತಾರೆ. ೧೦೦೮ ಕುಂಭ ಪವಿತ್ರ ಜಲ, ಕಬ್ಬಿನಹಾಲು, ಬೆಲ್ಲ–ಸಕ್ಕರೆ, ಕಲ್ಕಚೂರ್ಣ, ತುಪ್ಪ, ಹಸುವಿನ ಹಾಲು, ಕೆನೆ ಮೊಸರು ಮೊದಲಾದವುಗಳಿಂದ ಕಾರ್ಕಳದ ಬಾಹುಬಲಿಗೆ ೧೪೩೨ ರಲ್ಲಿ ಮೊದಲ ಮಹಾಮಜ್ಜನ ನಡೆದುದನ್ನು ಚದುರ ಚಂದ್ರಮನೆಂಬ ಕವಿ ವರ್ಣಿಸಿದ್ದಾನೆ. ೧೬೦೩ರಲ್ಲಿ ವೇಣೂರಿನ ಗೊಮ್ಮಟನಿಗೂ, ೧೯೮೨ರಲ್ಲಿ ಧರ್ಮಸ್ಥಳದಲ್ಲಿನ ಗೊಮ್ಮಟಮೂರ್ತಿಗೂ ಮೊದಲ ಮಹಾಮಜ್ಜನಗಳು ನಡೆದವು. ಅರಿಸಿನ, ಕಷಾಯ, ಶ್ರೀಗಂಧ, ಹಾಲು ಮೊದಲಾದವುಗಳಿಂದ ಎರೆದಾಗ ವಿಗ್ರಹವು ಬಗೆಬಗೆಯ ವರ್ಣಗಳಿಂದ ಶೋಭಿಸಿ, ನೋಟಕರಿಗೆ ವಿಶಿಷ್ಟ ಅನುಭವ ನೀಡುತ್ತದೆ.

## ಆಹಾರ ವಿಶೇಷಗಳು

ಕರಾವಳಿ ಭಾಗದವರು ಅನ್ನವನ್ನು ನಿತ್ಯದ ಆಹಾರವಾಗಿ ಸಾಮಾನ್ಯವಾಗಿ ಬಳಸುತ್ತಾರೆ. ಈ ಅನ್ನವನ್ನು ಕುಚ್ಚಲಕ್ಕಿಯಿಂದ ಮಾಡುತ್ತಾರೆ. ಸಾಮಾನ್ಯವಾಗಿ ಎಲ್ಲರೂ ಮುಂಜಾನೆಯ ಆಹಾರವಾಗಿ ಕುಚ್ಚಲಕ್ಕಿ ಗಂಜಿಯನ್ನು ಬಳಸುತ್ತಿದ್ದುದು ಹಿಂದೆ ಪದ್ಧತಿಯಾಗಿದ್ದಿತು. ಈಗಲೂ ಸಾಮಾನ್ಯ ವರ್ಗದವರು ಗಂಜಿಯನ್ನೇ ಪ್ರಧಾನ ಆಹಾರವಾಗಿ ಸೇವಿಸುತ್ತಾರೆ; ಕರಾವಳಿಯ ಹವಾಮಾನಕ್ಕೆ ಬೆಳ್ತಿಗೆ ಅಕ್ಕಿಗಿಂತ ಕುಚ್ಚಲಕ್ಕಿಯ ಸೇವನೆ ಬಹಳ ಒಳ್ಳೆಯದೆಂದು ತಿಳಿಯಲಾಗಿದೆ. ಈ ಭಾಗದವರು ಅಡುಗೆಗೆ ತೆಂಗಿನೆಣ್ಣೆಯನ್ನೇ ಸಾಮಾನ್ಯವಾಗಿ ಬಳಸುತ್ತಾರೆ. ಮೀನು ಇಲ್ಲಿನವರ ಪ್ರಮುಖ ಆಹಾರವೂ ಆಗಿದೆ. ಮೀನು, ಮಾಂಸಗಳ ಅಭ್ಯಾಸ ಇರುವವರಲ್ಲಿ ಕೋರಿ (ಕೋಳಿ) ರೊಟ್ಟಿ, ಕೋರಿಮುಂಡಿ, ಕೋರಿಕಳಿಪು, ಮೀನ್‌ಕೈಪು ಮೊದಲಾದ ಆಹಾರವಿಶೇಷಗಳು ಸಾಮಾನ್ಯವಾಗಿರುತ್ತವೆ.

ಕರಾವಳಿಯವರ ದಿನನಿತ್ಯದ ಆಹಾರ ಕೆಂಪು ಕುಸುಬಲಕ್ಕಿಯ ಗಂಜಿ, ಅನ್ನ-ಸಾಂಬಾರಿನಂತಹ ಸಾದಾ ಊಟವಾದರೆ, ಹಬ್ಬಗಳ ಸಂದರ್ಭದಲ್ಲಿ ಮಾತ್ರ ವಿಶೇಷ ತಯ್ಯಾರಿಗಳೇ ಆಗುತ್ತವೆ. ನಾಗರಪಂಚಮಿಗೆ ಬತ್ತದ ಅರಳಿನ ಪಂಚಕಜ್ಜಾಯ, ತಂಬಿಟ್ಟು, ಹಾಲುಬಾಯಿ, ಕೆಸುವಿನ ಪತ್ರೊಡೆ, ಕೃಷ್ಣಾಷ್ಟಮಿಗೆ ಗುಂಡಿಟ್ಟು (ಹುರಿದ ಅಕ್ಕಿಹಿಟ್ಟಿನ ಸಿಹಿ ಉಂಡೆ), ಕಡಲೆಹಿಟ್ಟಿನ ಉಂಡೆ, ಎಳ್ಳುಂಡೆ, ಕೋಡುಬಳೆ, ಕಾರಕಡ್ಡಿ, ಚಕ್ಕುಲಿ, ಗೌರಿ-ಗಣೇಶ ಹಬ್ಬಕ್ಕೆ ಮೋದಕ, ಅಪ್ಪ, ಕರಿಗಡುಬು, ಕಜ್ಜಾಯ, ಈರಡ್ಯೆ (ಅರಿಸಿನ ಎಲೆಯಲ್ಲಿ ಮಾಡಿದ ಸಿಹಿ ಕಡುಬು) ನವರಾತ್ರಿಗೆ ಗುಡಾನ್ನ, ಬಲಿಪಾಡ್ಯಮಿಗೆ ಸಿಹಿಗುಳಿಯಪ್ಪ, ಬಿಳಿಯಪ್ಪ, ಎರೆಯಪ್ಪ, ಅತಿರಸ, ಮೂಡೆ (ಮುಂಡಗೆ ಎಲೆಯ ಸುರುಳಿಯಲ್ಲಿಟ್ಟು ಬೇಯಿಸಿದ ಇಡ್ಲಿ), ಯುಗಾದಿಗೆ ದಾಳಿತೋವೆ (ಇದು ಗೌಡ ಸಾರಸ್ವತರ ವಿಶೇಷ) ಇತ್ಯಾದಿಗಳು ಸಾಮಾನ್ಯವಾಗಿ ಆಗಲೇಬೇಕು.

ಬಜಿಲ್‌ಸಜ್ಜಿಗೆ (ಅವಲಕ್ಕಿ ಉಪ್ಕರಿ ಮತ್ತು ಉಪ್ಪಿಟ್ಟು), ಪೊಜಿಲ್ ದೋಸೆ (ಮೊಳಕೆ ಬರಿಸಿದ ಬತ್ತವನ್ನು ರುಬ್ಬಿ, ಅದರ ಹಾಲನ್ನು ಅಕ್ಕಿ, ಬೆಲ್ಲ, ಕಾಯಿಯೊಂದಿಗೆ ರುಬ್ಬಿ ಮಾಡಿದ್ದು), ಸಿಹಿಗೆಣಸು ಅಥವಾ ಕುಂಬಳಕಾಯಿಯ ಪಾಯಸ ಮೊದಲಾದ ವಿಶೇಷಗಳ ಪಟ್ಟಿ ಬೆಳೆಸಬಹುದು. ಶ್ರಾದ್ಧಾದಿ ಕಾರ್ಯಗಳಿಗೆ ಹಯಗ್ರೀವ (ಕಡಲೆಬೇಳೆ ಮಡ್ಡಿ), ಮುಸ್ಕೊಡೆ, ಗೊಜ್ಜಂಬೊಡೆ, ಗಟ್ಟಿ ಬಜೆ ಇತ್ಯಾದಿಗಳ ವಿಶೇಷವಿರುತ್ತದೆ. ಉಡುಪಿಯು ಹೋಟೆಲ್ ಉದ್ಯಮಕ್ಕೆ ಹೆಸರಾದಂತೆ ಆಹಾರ, ಷಡ್ರಾಸನ್ನ-ಭಕ್ಷ್ಯ ಭೋಜ್ಯಗಳಿಗೂ ವಿಶೇಷ ಸ್ಥಾನ ಪಡೆದಿದೆ. ಉಡುಪಿ ಬ್ರಾಹ್ಮಣರ ಸಾಂಪ್ರದಾಯಿಕ ಔತಣದಲ್ಲಂತೂ ಷಡ್ರಸಾನ್ನ ಭೋಜನದಲ್ಲಿ ಅಕ್ಷರಶಃ ಆರೂ ಬಗೆಯ ರಸದ ಸ್ವಾದ ನೀಡುವ ಹಲವಾರು ಖಾದ್ಯಗಳು ಸೇರಿರುತ್ತವೆ.

ಕೆಲವು ಸಮುದಾಯಗಳು ತಮಗೇ ವಿಶಿಷ್ಟವಾದ ತಿಂಡಿ-ತಿನಿಸುಗಳನ್ನು ತಯಾರಿಸುವ ಪ್ರಾವೀಣ್ಯ ಪಡೆದಿರುವುದೂ ಗಮನಾರ್ಹವಾಗಿದೆ. ಉದಾಹರಣೆಗೆ ಕಟ್ಟುಮಂಡಿಗೆ ಎಂಬುದು ಜೈನರು ಬಳಸುವ ಮುಖ್ಯ ಸಿಹಿ ತಿಂಡಿಯಾಗಿದೆ. ಉಂಡುಲಗ, ಪೇರಡ್ಯೆ, ಮನಾರ, ಹಾತಪೆಗಂಜಿ, ರಾಗಿಮಣ್ಣಿ, ಅಕ್ಕಿಮಣ್ಣಿ, ಅಪ್ಪಿಹುಳಿ (ಹಾಲುಭಾವೆ) ಮೊದಲಾದವೂ ಕೆಲವು ಸಮಾಜದ ವಿಶೇಷ ಭಕ್ಷ್ಯಗಳಾಗಿವೆ. ಹಾಗೆಯೇ ಬ್ರಾಹ್ಮಣರು ಗೋಟುಸಾರು, ಸಮ್ಮಂದ, ಉಂಡ್ಲುಗ, ದ್ವಾದಶಿಗಂಜಿ ಮೊದಲಾದುವನ್ನು ತಯಾರಿಸುವ ಅಭ್ಯಾಸ ಹೊಂದಿದ್ದಾರೆ. ಸಾಮಾನ್ಯವಾಗಿ ಎಲ್ಲರೂ ಹಬ್ಬ-ಹರಿದಿನಗಳಲ್ಲಿ ಪತ್ರೊಡೆ, ಕೊಟ್ಟೆಕಡುಬು, ಒಬ್ಬಟ್ಟು, ಪಂಚಕಜ್ಜಾಯ ಮೊದಲಾದುವನ್ನು ಮಾಡುವುದುಂಟು. ಚಿತ್ಪಾವನರು ವಟಸಾವಿತ್ರಿ ವ್ರತದಂದು ಹಲಸಿನ ಹಣ್ಣಿನ ಉಂಬರ ಎಂಬ ವಿಶೇಷ ಖಾದ್ಯವನ್ನು ಮಾಡುತ್ತಾರೆ.

ಅಷ್ಟಮಿ ಹಬ್ಬದಂದು ಎಲೆಯ ತಿಂಡಿಯನ್ನೇ ಪ್ರಧಾನವಾಗಿ ಸಿದ್ಧಪಡಿಸಬೇಕೆಂಬ ಸಂಪ್ರದಾಯದ ಹಿನ್ನೆಲೆಯಲ್ಲಿ ಮನೆಗಳಲ್ಲಿ ಸಾಮಾನ್ಯವಾಗಿ ಬುಟ್ಟಿ ಹಾಗೂ ಹೊಂಗಾರಿನ ಎಲೆ, ಬಳಸಿ ಉಡಾರಿಗೆ, ಮುಂಡೇವು ಎಲೆ ಬಳಸಿ ಮೂಡೆ, ಅಥವಾ ಹಲಸಿನ ಎಲೆ ಬಳಸಿ ಗುಂಡ ಎಂಬ ತಿಂಡಿಗಳನ್ನು ಮಾಡುತ್ತಾರೆ. ಮ್ಯಾಲರು ತಿಥಿ ದಿನದಂದು ಬಾಳೆಕಾಯಿಯ ಪಲ್ಯ ಮಾಡುವುದು ಮುಖ್ಯವಾಗುತ್ತದೆ. ತಮ್ಮ ದೇವರಿಗೆ ಕೋಳಿ ಪಲ್ಯ, ದೋಸೆ ಹಾಗೂ ಕಳ್ಳನ್ನೂ ಎಡೆ ಮಾಡುವುದು ಅವರ ಪದ್ಧತಿಯಾಗಿದೆ.

ಬ್ಯಾರಿಗಳಲ್ಲಿ ನೆಯ್‌ಚೋರು, ಒಣದ್ರಾಕ್ಷಿ, ಗೋಡಂಬಿ ಹಾಗೂ ಬಣ್ಣ ಹಾಕಿದ ಕುಷ್ಕ, ಪನ್ನೀರು ಹಾಕಿ ವಿಶೇಷವಾಗಿ ತಯಾರಿಸಿದ ಅನ್ನ, ಈದ್‌ಮಿಲಾದ್‌ನಂತಹ ಹಬ್ಬಾಚರಣೆಗಳಲ್ಲಿ ಮಾಡುವ ಪಲಾವ್, ಮಿಟ್ಟಾ ಮೊದಲಾದ ತುಪ್ಪಾನ್ನಗಳು, ಬಾದಷಹ, ದಮ್ ಬಿರಿಯಾನಿ, ಮೊಗಲಾಯಿ ಮೊದಲಾದವು ಅವರವರ ಅನುಕೂಲಕ್ಕೆ ತಕ್ಕಂತೆ ವಿಶೇಷ ಆಹಾರವಾಗಿ ಬಳಕೆಯಾಗುತ್ತದೆ. ರಮ್ಜಾನ್ ತಿಂಗಳಲ್ಲಿ ರುಬ್ಬಿದ ಅಕ್ಕಿಹಿಟ್ಟಿನಿಂದ ಮಾಡುವ ಎರಡು ಮೂರು ರೀತಿಯ ರೊಟ್ಟಿಗಳು, ಚುಟ್ಟುಬರ್ತೆ ಕರಿ, ಮೊಳವು ಕರಿ, ಬೆಳ್ತೆಕರಿ, ಪಚ್ಚಕ್ಕರಿ ಮೊದಲಾದ ಮೀನಿನ ಎಸರುಗಳು, ಮೀನಿನ ಪದಾರ್ಥಗಳು ಬ್ಯಾರಿಗಳಲ್ಲಿನ ಆಹಾರ ರುಚಿ, ವೈವಿಧ್ಯಕ್ಕೆ ಹೆಸರಾಗಿವೆ. ಜಿಲ್ಲೆಯ ಜನತೆ ಕೆಲವು ಸೊಪ್ಪು ಹಾಗೂ ಕಷಾಯಗಳನ್ನು ಸಾಂಪ್ರದಾಯಕ ಔಷಧಿಯಾಗಿಯೂ ಬಳಸುವುದುಂಟು. ಚಗಟೆ, ಕಾಡು ಕೆಸುವಿನಂತಹ ಸೊಪ್ಪುಗಳು, ಅಡ್ಡಕಭಾರೆ ಕಾಯಿಯನ್ನು ತಿಂದರೆ ಆರೋಗ್ಯಕ್ಕೆ ಒಳ್ಳೆಯದೆಂದು ನಂಬುತ್ತಾರೆ. ಆಟಿ ತಿಂಗಳಿನಲ್ಲಿ ಹಾಲೆಮರದ ಕಾಂಡವನ್ನು ಕಲ್ಲಿನಿಂದ

ಜಜ್ಜಿ ತೆಗೆದ ತೊಗಟೆಯ ಕಷಾಯವು ಸರ್ವರೋಗ ನಿರೋಧಕ ಶಕ್ತಿ ಹೊಂದಿದೆ ಎನ್ನುತ್ತಾರೆ. ಅಂತೆಯೇ ಆಟಿ ಅಮಾವಾಸ್ಯೆಯಂದು ಮುಂಜಾನೆ ನಸುಕು ಇರುವಾಗಲೇ ಹಾಲೆ ಮರದ ಬಳಿ ಹೋಗಿ, ವಿವಸ್ತ್ರರಾಗಿ ಕಾಂಡವನ್ನು ಕಲ್ಲಿನಿಂದ ಜಜ್ಜಿ, ತೊಗಟೆ ತೆಗೆದು, ಅದಕ್ಕೆ ಶುಂಠಿ, ಕಾಳುಮೆಣಸು ಸೇರಿಸಿ, ಚೆನ್ನಾಗಿ ಕುಟ್ಟಿ, ಹಿಂಡಿ ತೆಗೆದ ರಸವನ್ನು ಕುಡಿವ ಪದ್ಧತಿಯೇ ಇದೆ. ಇದನ್ನು ಮದ್ದು ಕುಡಿಯುವುದು ಎನ್ನುತ್ತಾರೆ. ರಾಣೆಯರಲ್ಲಿ ಆಟಿ ಅಮಾವಸ್ಯೆಯಂದು ಸಾಸಿವೆ, ಬೆಳ್ಳುಳ್ಳಿ, ಓಮ, ಆಟಿ ಚಕ್ಕೆ, ಗೇರುಬೀಜ ಮೊದಲಾದುವನ್ನು ಕುಟ್ಟಿ, ನೀರಿನಲ್ಲಿ ಕುದಿಸಿ ಮದ್ದು ಕುಡಿಯುವುದು ರೂಢಿಯಲ್ಲಿದೆ. ಅಂದು ಕೆಸು ಮತ್ತು ಹರಿವೆಸೊಪ್ಪಿನ ಪದಾರ್ಥ ಊಟ ಮಾಡಲೇಬೇಕೆಂಬ ನಿಯಮವೂ ಇದೆ. ನಾಗರಪಂಚಮಿಯಂದು ಇವರು ಮಾಂಸಾಹಾರ ಸೇವಿಸುವುದಿಲ್ಲ. ಅಷ್ಟೇ ಅಲ್ಲ, ಅಂದು ಮೀನಿನ ಪದಾರ್ಥ ಮಾಡುವ ಪಾತ್ರೆಗಳನ್ನು ಹೊರಗೆ ಎಸೆಯುವುದೂ ಉಂಟು. ಕುಡುಬಿಗಳು ಕಾಡಿನಿಂದ ಬೇಟೆಯಾಡಿ ತಂದ ಪ್ರಾಣಿಗಳ ಮಾಂಸವನ್ನು ಮಾತ್ರ ಸೇವಿಸುತ್ತಾರೆ. ಕೋಳಿ, ಕುರಿ, ಹಂದಿ ಮತ್ತಿತರ ಸಾಕು ಪ್ರಾಣಿಗಳ ಮಾಂಸ ಭಕ್ಷಣೆ ಅವರಿಗೆ ನಿಷಿದ್ಧವಾಗಿದೆ. ಅಂತೆಯೇ, ಇಂಥಾ ಪ್ರಾಣಿಗಳನ್ನು ದೇವರು, ದೈವಗಳಿಗೆ ಬಲಿ ಕೊಡುವ ರೂಢಿಯೂ ಅವರಲ್ಲಿಲ್ಲ.

## ಉಡುಗೆ ತೊಡುಗೆ

ಕುಡುಬಿ ಮಹಿಳೆಯರು ಗೇಂಟಿಕಟ್ಟಿ ಸೀರೆ ಉಡುತ್ತಾರೆ. ಹಳದಿ, ಕೆಂಪು, ಹಸಿರು ಬಣ್ಣದ ಚೌಕುಳಿ ಸೀರೆಯನ್ನು ಬಲಬದಿ ಎದೆಯ ಮೇಲೆ ಗಂಟು ಬರುವಂತೆ (ಗೇಂಟಿಕಟ್ಟು) ಉಡುವುದು ಈ ಮಹಿಳೆಯರ ಉಡುಪಿನ ಸಾಂಪ್ರದಾಯಿಕ ಪದ್ಧತಿಯಾಗಿದೆ. ಮೇಂದಲೆ (ಕುಪ್ಪಸ) ತೊಡುವುದು ಇವರಲ್ಲಿ ಸಾಂಪ್ರದಾಯಿಕವಾಗಿ ನಿಷಿದ್ಧವಾಗಿದ್ದಿತು. ಆದರೆ, ಆಧುನಿಕತೆಯ ಪ್ರಭಾವದಿಂದ ಈಗ ಕುಪ್ಪಸ ತೊಡುವ ಅಭ್ಯಾಸ ಬೆಳೆದಿದೆ. ಹಿಂದೆ ವಿವಾಹ ದಿನದಂದು ಮಾತ್ರ ಕನ್ಯೆಯು ರವಿಕೆ ತೊಡವುದಿದ್ದು, ಅದೇ ಮೊದಲು, ಅದೇ ಕೊನೆ; ಮತ್ತೆಂದೂ ತೊಡಬಾರದೆಂಬ ನಿಷೇಧವಿದ್ದಿತು. ೧೯೬೯ರಲ್ಲಿ ಕುಡುಬಿ ಮಹಿಳೆಯೊಬ್ಬಳು ರವಿಕೆ ತೊಟ್ಟಿದ್ದೇ ಒಂದು ವಿವಾದವಾಗಿ, ಕೊನೆಗೆ ಕುಂದಾಪುರದ ನ್ಯಾಯಾಲಯದಲ್ಲಿ ಆಕೆ ಪರವಾಗಿ ತೀರ್ಪು ಬಂದದ್ದು ಒಂದು ಪ್ರಮುಖ ಘಟನೆಯಾಗಿದೆ ಉಳಿದಿದೆ (ಬೆಳ್ಳಿ ಮಿನುಗು–೧೧೦). ತಮ್ಮ ಕುಲದೇವತೆ ರವಿಕೆ ತೊಟ್ಟಿರುವುದರಿಂದ ತಾವು ತೊಡುವುದು ನಿಷಿದ್ಧ–ಎಂಬುದು ಅವರ ನಂಬಿಕೆಯಾಗಿದೆ.

ಹೋಳಿ ಹಬ್ಬದಲ್ಲಿ ಕುಡುಬಿ ಪುರುಷರು ಈ ಹಬ್ಬಕ್ಕಾಗಿಯೇ ಇರುವ ವಿಶೇಷ ಉಡುಪನ್ನು ಧರಿಸುತ್ತಾರೆ. ತಲೆಗೆ ಮುಂಡಾಸು ಸುತ್ತಿ, ಹೂವು ಮತ್ತು ಹಕ್ಕಿಗರಿಗಳಿಂದ ಅಲಂಕರಿಸಿಕೊಳ್ಳುತ್ತಾರೆ. ಐದನೇ ದಿನ ಹುಣ್ಣಿಮೆಯಂದು ಕೋಲಾಟ ಆಚರಣೆಯನ್ನು ಮುಕ್ತಾಯಗೊಳಿಸುವವರೆಗೆ ಆ ವೇಷವನ್ನು ಬಿಚ್ಚಬಾರದೆಂಬ ಕಟ್ಟುಪಾಡೂ ಅವರಲ್ಲಿದೆ. ವಧುವಿಗೆ ಕಚ್ಚೆ ಹಾಕಿ ಸೀರೆ ಉಡಿಸಿ ಸೆರಗನ್ನು ಸೊಂಟಕ್ಕೆ ಸುತ್ತುವ ಪದ್ಧತಿ ಗೌಡಸಾರಸ್ವತರಲ್ಲಿದೆ. ಇವರಲ್ಲಿ ಕನ್ಯತ್ವದ ಸಂಕೇತವಾಗಿ ಅಲಂಕಾರಯುತವಾದ ಶ್ವೇತವಸನವನ್ನು ಕತ್ತರಿ ಆಕಾರದಲ್ಲಿ ಎದೆಗೆ ಕಟ್ಟುವ ಕ್ರಮವಿದ್ದು, ಅದಕ್ಕೆ ಆಡ್‌ವರ್ಲ್ ಅಥವಾ ಝೋಳ್ ಎಂಬ ಹೆಸರುಗಳಿವೆ. ಈ ವಧುವಿಗೆ ಹಣೆಯಲ್ಲಿ ಅರ್ಧಚಂದ್ರಾಕಾರದ ತಿಲಕ (ಶಿಂಪಿ) ಇಡುವುದೂ ಸಾಂಪ್ರದಾಯಿಕ ರೂಢಿಯೆನಿಸುತ್ತದೆ. ದೊಡ್ಡ ಗಾತ್ರದ ಹವಳಗಳ ಜೊತೆ, ಬಂಗಾರದ ದೊಡ್ಡ ಗುಂಡುಗಳನ್ನು ಪೋಣಿಸಿ ಮಾಡುವ ಕಾಶಿತಾಳಿಯು ಗೌಡಸಾರಸ್ವತ ಮಹಿಳೆಯರನ್ನು ಸುಲಭವಾಗಿ ಗುರುತಿಸಬಹುದಾದ ಒಂದು ಸರವಾಗಿದೆ.

ಸ್ತ್ರೀಯರು ಅವರವರ ಅನುಕೂಲಕ್ಕೆ ತಕ್ಕಂತೆ ತಾಳೆಗರಿಯ ಓಲೆ, ಚಿನ್ನದ ಓಲೆ, ಮೂಗುತಿ, ಸೊಂಟಪಟ್ಟಿ, ವಿವಿಧ ಬಗೆಯ ಸರಗಳು, ಅಡ್ಡಿಗೆ, ಪಾಗಡೆ, ಬುಗುಡಿ, ಕೊಪ್ಪು, ಚಿಂತಾಕ, ಡಾಬು, ಬೈತಲೆಬಟ್ಟು, ಕಾಲ ಬೆರಳಿಗೆ ಮಿಂಚು, ಸುತ್ತುಉಂಗುರ ಮೊದಲಾದ ಆಭರಣ ಧರಿಸುವುದು ಸಾಮಾನ್ಯವಾಗಿತ್ತು. ವಿವಾಹ ಕಾಲದಲ್ಲಿ ಬ್ರಾಹ್ಮಣ ವಧುವು ತಲೆಗೆ ರಾಕಟೆ, ಅಡ್ಡಕೇದಗೆ, ಜಡೆಗೊಂಡೆ, ಮಲ್ಲಿಗೆ ಮುಗುಟಿನ ಮಾಲೆ, ಕೈಗೆ ತ್ರಾಸುಬಳೆ, ಮುರುಗಿನ ಬಳೆ, ತೋಳಿಗೆ ದೋರೆ, ಚಳಕಿ, ಕಿವಿಗೆ ತಾಂಗ ಸರಪುಳಿಯ

ಗಿಣಿಓಲೆ, ಪಾದಕ್ಕೆ ಪಾಡಗ, ಪೈಜಣಿ ಮೊದಲಾದ ಆಭರಣಗಳನ್ನು ಧರಿಸುತ್ತಿದ್ದುದುಂಟು. ವರನು ಕಿವಿಗೆ ಒಂಟಿ ಧರಿಸಿದರೆ ವಧುವು ಕಿವಿಗೆ ಓಲೆಯಲ್ಲದೆ ಮೂಗಿಗೆ ಮೂಗುತಿಯನ್ನು ಧರಿಸುವುದು ಮಂಗಳಕರವೆಂದು ಭಾವಿಸುತ್ತಾರೆ. ಮೂಗು ಚುಚ್ಚಿಸಿಕೊಳ್ಳದ ಕನ್ಯೆ ಧಾರೆ ಎರೆಸಿಕೊಳ್ಳಲು ಅನರ್ಹಳೆಂಬ ಕಟ್ಟುಪಾಡು ಇವರಲ್ಲಿದೆ. ವಿಶ್ವಕರ್ಮ ಮಹಿಳೆಯರು ಕೊತ್ತಂಬರಿ ಸರ, ಕಾಯಿಪಲ್ಲೆಸರ, ಚಕ್ರಸರ ಮೊದಲಾದ ವಿಶಿಷ್ಟ ವಿನ್ಯಾಸದ ಆಭರಣಗಳನ್ನೂ ಬಳಸುತ್ತಾರೆ. ಕ್ಯಾಥೋಲಿಕ್ ಪಂಥದ ಮಹಿಳೆಯರು ಇತ್ತೀಚೆಗೆ ಸ್ಥಳೀಯ ಪ್ರಭಾವಕ್ಕೆ ಅನುಗುಣವಾಗಿ ಹಣೆಯಲ್ಲಿ ಬೊಟ್ಟು ಇಡುವುದು, ವಿವಾಹಿತೆಯರು ಕೊರಳಿಗೆ ಕರೀಮಣಿ ಸರ ಧರಿಸುವುದು ಕಂಡುಬರುತ್ತದೆ. ಕುಡುಬಿಯರು ವಿವಾಹ ಮೊದಲಾದ ಸಂದರ್ಭಗಳಲ್ಲಿ ಅಬ್ಬಲಿಗೆ ಹೂವನ್ನು ವಿಶೇಷವಾಗಿ ಬಳಸುತ್ತಾರೆ. ಹೆಣ್ಣಾಗಲೀ, ಗಂಡಾಗಲೀ ವಿವಾಹಕ್ಕೆ ಮೊದಲು ಅಬ್ಬಲಿಗೆ ಹೂ ಮುಡಿಯಬಾರದೆಂಬ ನಿಷೇಧವೂ ಇದೆ. ಕುಡುಬಿಯರಲ್ಲಿ ವರನ ಮನೆಯವರು ಕೊಟ್ಟ ಕಟ್‌ಕರಿಮಣಿಯನ್ನು ವಿವಾಹದಲ್ಲಿ ವಧುವಿಗೆ ಕಟ್ಟಲಾಗುತ್ತದೆ. ಆದರೆ, ಆರೇಳು ವರ್ಷದ ಬಾಲೆಯಾಗಿದ್ದಾಗಲೇ ತಾಯಿ ಮನೆಯ ಕರಿಮಣಿ ಹಾಗೂ ಕಾಲುಂಗುರಗಳನ್ನು ಆಕೆಯ ತಾಯಿಯೇ ಆಕೆಗೆ ಹಾಕುವ ಪದ್ಧತಿ ಅವರಲ್ಲಿದೆ. ಕುಡುಬಿ ವರನು ಕಚ್ಚೆಪಂಚೆ ಉಟ್ಟು ತಲೆಗೆ ಪೇಟ ಧರಿಸುತ್ತಾನೆ. ಎದೆಮೇಲೆ ಕತ್ತರಿ ಗುರುತಿನಲ್ಲಿ ಕೆಂಪು ಶಾಲು ಸುತ್ತಲಾಗುತ್ತದೆ. ಬಾಸಿಂಗ, ಬಳೆ, ಉಂಗುರ, ಕಾಲಿಗೆ ಉರಿಗೆಜ್ಜೆ, ಕೊರಳಿಗೆ ಗಿಜ್ಜಿಮಲ್ಕ್ (ಗೆಜ್ಜೆಟಿಕೆ), ಹಿತ್ಲಕಾಯ್ ಮೊದಲಾದ ಸರ, ಕಿವಿಗೆ ಗಾಲಿ ಒಂಟಿ ಧರಿಸುವುದೂ ಇವರ ವಿವಾಹ ಕಾಲದ ಸಾಂಪ್ರದಾಯಿಕ ವೇಷಭೂಷಣ ಎನಿಸಿಕೊಳ್ಳುತ್ತದೆ.

## ಮನೆಯ ಮಾದರಿಗಳು

ದಕ್ಷಿಣಕನ್ನಡದ ಹಾಗೆ ಉಡುಪಿ ಜಿಲ್ಲೆಯಲ್ಲಿಯೂ ಸಾಮಾನ್ಯ ಮಣ್ಣಿನ ಮನೆಗಳು, ಗುತ್ತಿನ ಮನೆಗಳು ಕಾಣಬರುತ್ತವೆ. ಕರಾವಳಿ ಭಾಗದ ಮನೆಗಳ ಪ್ರಮುಖ ಲಕ್ಷಣವೆಂದರೆ–ಮನೆಯ ನೆತ್ತಿಯಿಂದ ಗೋಡೆಯ ಸುತ್ತಲೂ ಇಳಿಜಾರಾಗಿ ಚಾಚಿದ ಚಾವಣಿ. ಕೆಲವೊಮ್ಮೆ ಗೋಡೆಯ ನಡುಭಾಗದಿಂದ ಹೊರ ಕಡುಮಾಡು. ಇವು ಸಾಮಾನ್ಯವಾಗಿ ಅವರವರ ಹೊಲಗಳ ನಡುವೆ ಕಟ್ಟಿದ ಒಂಟಿ ಮನೆಗಳು ಅಥವಾ ತಮ್ಮ ಜಮೀನಿಗೆ ಹತ್ತಿರದಲ್ಲಿ ಕಟ್ಟಿಕೊಂಡ ಕೇರಿಗಳಾಗಿರಬಹುದು. ಸಾಮಾನ್ಯವಾಗಿ ಈ ಮನೆಗಳ ಸುತ್ತ ಸಾಕಷ್ಟು ಬಯಲು ಇರುತ್ತದೆ. ಹೀಗಾಗಿ ಹೆಚ್ಚಿನ ಮನೆಗಳ ಸುತ್ತಲೂ ಕಲ್ಲು ಅಥವಾ ಮಣ್ಣಿನಿಂದ ಕಟ್ಟಿದ ಪಾಗಾರ (ಕಾಂಪೌಂಡ್) ಇರುತ್ತದೆ. ಅದರ ನಡುವೆ ವಿಶಾಲ ಕಣ (ಅಂಗಳ)ವಿರುತ್ತದೆ. ಕಣದ ಮಧ್ಯೆ ಒಂದು ಮೇಟಿಕಂಬವಿದ್ದು, ಕಣವನ್ನು ಸಾರಿಸಿ ಶುದ್ಧವಾಗಿಟ್ಟಿರುತ್ತಾರೆ. ಅಂಗಳದ ಒಂದು ಭಾಗದಲ್ಲಿ ತುಳಸಿಕಟ್ಟೆ, ಮನೆ ಮುಂದೆ ತಿರಿ ಅಂಗಳದ ಒಂದು ಮೂಲೆಯಲ್ಲಿ ಬಾವಿಯೂ ಸಾಮಾನ್ಯವಾಗಿರುತ್ತದೆ.

ಹಿಂದೆ, ಮನೆಯ ಗೋಡೆ ನಿರ್ಮಾಣಕ್ಕೆ – ಮಣ್ಣಿನ ಸಿದ್ಧತೆಗೆ ಸಾಂಪ್ರದಾಯಿಕ ಕ್ರಮ ಅನುಸರಿಸುತ್ತಿದ್ದರು: 'ಮಣ್ಣಿನಲ್ಲಿ ನೀರಿನ ಅಂಶ ಕಡಿಮೆ ಇದ್ದರೆ ಮಣ್ಣು ಬೇಗ ಹುಡಿಯಾಗುತ್ತದೆ; ಗೆಜ್ಜಲು ಕಟ್ಟುತ್ತೆ, ಹಾಳಾಗುತ್ತೆ. ಅಂತೆಯೇ, ಮಣ್ಣನ್ನು ಅಗೆದ ಬಳಿಕ, ನೀರು ಹಾಕಿ, ಕಾಲಿನಿಂದ ಒದ್ದುಕಲೆಸಿ, ಮತ್ತೆ ರಾಶಿ ಮಾಡಿ, ಮೇಲೆ ನೀರು ಕಟ್ಟಿ, ಒಂದು ವಾರ ಹುಳಿ ಬರುವಂತೆ ಬಿಡುತ್ತಾರೆ. ಹಾಗೆ ಹದವಾದ ಮಣ್ಣಿಗೆ ಸಣ್ಣ ಮುಳಿ ಹುಲ್ಲನ್ನು ಬೆರೆಸಿ, ಮುದ್ದೆ ಕಟ್ಟಿ, ಗೋಡೆ ಕಟ್ಟುತ್ತಾರೆ. ಸುಮಾರು ಮೂರು ಅಡಿಗೆ ಒಂದು ಕೋಲು ಎಂದು ಅಳತೆ ಪ್ರಮಾಣ. ಒಮ್ಮೆಗೆ ಸುಮಾರು ಒಂದೂವರೆ ಕೋಲು ಗೋಡೆ ಇಟ್ಟು ಎರಡು ದಿನ ಒಣಗಿದ ನಂತರ ಗೋಡೆ ಕಟ್ಟೋಣ ಮುಂದುವರೆಸುವುದು, ಸುಮಾರಾಗಿ ಒಣಗಿದ ಗೋಡೆಯನ್ನು ಪೊಳಿಮಣೆಯಿಂದ ತಟ್ಟಿ ಗೋಡೆಯ ಮೈಗಳನ್ನು ಗಟ್ಟಿ ಹಾಗೂ ಮಟ್ಟ ಮಾಡುವುದು ಕ್ರಮ. ಮೊದಲೆಲ್ಲಾ ಇದ್ದುದು ಇಂತಹ ಮಣ್ಣಿನಮುದ್ದೆ ಗೋಡೆಗಳೇ. ನಂತರ ಮುರಕಲ್ಲಿನಿಂದ ಮನೆ ಕಟ್ಟುವುದು ರೂಢಿಗೆ ಬಂದಿದೆ. ಹಸಿ ಇಟ್ಟಿಗೆಯಿಂದ ಗೋಡೆ ಕಟ್ಟುವ ಪದ್ಧತಿ ಕ್ರಮೇಣ ಈ ಕಡೆಯೂ ರೂಢಿಗೆ ಬಂದಿದೆ. 'ಮಳೆಗಾಲ ಬರುವಂತಿದ್ದು ಕೂಡಲೇ ಮನೆ ಕಟ್ಟಿ ಮುಗಿಸಬೇಕಾದರೆ ಕಲೆಸಿದ ಮಣ್ಣನ್ನು (ಬಹಳ ದಿನ ಕೊಳೆಯಿಸದೆ) ಅಚ್ಚಿನಲ್ಲಿ ಹಾಕಿ, ಇಟ್ಟಿಗೆ ತೆಗೆದು ಒಣಗಿಸಿ ಒಮ್ಮೆಗೇ ಗೋಡೆ ಕಟ್ಟುತ್ತಾರೆ. ಪೊಳಿಮಣೆಯಿಂದ ಇದನ್ನು ನಯಗೊಳಿಸುವ ಅಗತ್ಯವಿಲ್ಲ. ಸ್ವತ: ಅಂದವಾದರೂ ಇದು ಹೆಚ್ಚು ಕಾಲ ಬಾಳಿಕೆ ಬರುವುದಿಲ್ಲ. ಇದು ಮಳೆಯ ನೀರನ್ನು ತಾಳಿಕೊಳ್ಳುವುದಿಲ್ಲ'.

ಸುರಕ್ಷತೆ ಹಾಗೂ ಭದ್ರತೆಯ ದೃಷ್ಟಿಯಿಂದ ಈ ಕಡೆ ಭೂಮಟ್ಟಕ್ಕಿಂತ ೨–೩ ಅಡಿ ಎತ್ತರದ ಪಂಚಾಂಗದ (ಪಾಯ) ಮೇಲೆ ಮನೆ ಕಟ್ಟುತ್ತಾರೆ. ಪಂಚಾಂಗಕ್ಕೆ ಕಾಡುಕಲ್ಲು ಅಥವಾ ಇತರೆ ಕಲ್ಲು ಬಳಸುತ್ತಾರೆ. ಗೋಡೆಗೆ ಮುರಕಲ್ಲು ಬಳಸಲಾರದ ಬಡವರು ಪಂಚಾಂಗಕ್ಕೆ ಮುರಕಲ್ಲು ಬಳಸುತ್ತಾರೆ. ಗೋಡೆಯಲ್ಲಿ ಕಂಬಗಳು ಬರಬೇಕಾದ ಜಾಗಕ್ಕೂ–ಒಟ್ಟಾರೆ ಭದ್ರತೆಯ ಅಗತ್ಯವಿರುವ ಜಾಗಕ್ಕೆ ಈ ಮುರಕಲ್ಲಿನ ಬಳಕೆ ಮಾಡುತ್ತಾರೆ. ಚಾವಣಿಗೆ ಕಪ್ಪು ಹೆಂಚು ಅಥವಾ ಮಂಗಳೂರು ಹೆಂಚು; ಬಡವರಾದರೆ ಹುಲ್ಲು ಅಥವಾ ತೆಂಗಿನ ಮಡಿಲು ಇತ್ಯಾದಿ ಹೊದಿಸುತ್ತಾರೆ.

**ಗುತ್ತಿನ ಮನೆ :** ಕರಾವಳಿಯ ಶ್ರೀಮಂತರ ಮನೆಗಳು ಅಥವಾ ಗುತ್ತಿನ ಮನೆಗಳು ಉತ್ತರ ಕರ್ನಾಟಕದ ದೇಸಾಯರ 'ವಾಡೆ'ಗಳನ್ನು, ಹಳೇ ಮೈಸೂರು ಪ್ರಾಂತದ ಗೌಡರ ಮಹಡಿ ಮನೆಗಳನ್ನು ಹೋಲುವ ಭವ್ಯತೆ ಹೊಂದಿದ್ದು, ಅವಕ್ಕೆ ಸರಿ–ಮಿಗಿಲು ಎಂಬಂತಹ ಕಲಾತ್ಮಕ ರಚನೆಗಳಿಂದಾಗಿ ಮಹಾಮನೆ ಎನಿಸಿವೆ. ಇವನ್ನು ಅರಮನೆ ಎನ್ನುವುದೂ ಉಂಟು. ಇಲ್ಲಿ ಎದ್ದು ಕಾಣುವ ಲಕ್ಷಣವೆಂದರೆ ಇವು ಉಪ್ಪರಿಗೆ ಮನೆಗಳು. ಮನೆಯ ಹಿಂದಕ್ಕೆ ಎತ್ತರವಾದ ಗುಡ್ಡ ಅಥವಾ ಕಾಡು, ಮುಂಭಾಗಕ್ಕೆ ತಗ್ಗಾದ ಮೈದಾನ ಅಥವಾ ಗದ್ದೆ ಜಮೀನು (ಉಪ್ಪರಿಗೆಯಲ್ಲಿ ನಿಂತರೆ ಮನೆ ಮುಂದಿನ ತಮ್ಮ ಜಮೀನು, ಕೆಲಸ ಮಾಡುವ ಆಳುಗಳು ಎಲ್ಲಾ ಕಾಣಬೇಕೆಂಬ ಉದ್ದೇಶ ಅವರದು). ಉತ್ತರಕ್ಕೆ ಅಥವಾ ಪೂರ್ವಕ್ಕೆ ಬಾಗಿಲು, ಮೂಡು ಅಥವಾ ಬಡಗು ದಿಕ್ಕಿಗೆ ಬಾವಿ. ಮನೆಯ ಸುತ್ತಲೂ ಪ್ರಾಕಾರ. ಅದರ ಒಳಗೇ ಕಣ, ಹಿತ್ತಿಲು, ಕೊಟ್ಟಿಗೆ ಇತ್ಯಾದಿ. ಈ ಮನೆಗಳು ಭೂಮಟ್ಟದಿಂದ ಸಾಕಷ್ಟು ಎತ್ತರದ ಪಂಚಾಂಗದ ಮೇಲಿರುತ್ತವೆ. ಮನೆಗೆ ಪ್ರವೇಶಿಸುತ್ತಿದ್ದಂತೆಯೇ ಗಮನ ಸೆಳೆವ ಅಂಶಗಳೆಂದರೆ–ಅಲಂಕಾರದ ಕೆತ್ತನೆಯಿಂದ ಕೂಡಿದ ದೊಡ್ಡ ಗಾತ್ರದ ಮರದ ನಾಜೂಕು ಕೆತ್ತನೆಯ ಕಂಭಗಳು, ಎತ್ತರದ ಚಾವಡಿ, ಅಲಂಕಾರದ ಕಿಟಕಿ, ಬಾಗಿಲು ಇತ್ಯಾದಿ. ಕೆಲವು ಮನೆಗಳ ಮುಂದೆ ಅಕ್ಕಪಕ್ಕ ಸಣ್ಣ ಜಗಲಿ. ಚಿಕ್ಕ ತಲೆಬಾಗಿಲ ಮೂಲಕ ಒಳ ಹೋದರೆ ವಿಶಾಲವಾದ ಆವರಣ. ಮಧ್ಯಭಾಗದ್ದು ಚೌಕಿ. ಅತಿಥಿಗಳು ಕುಳಿತುಕೊಳ್ಳಲು ಮೇಜು, ಕುರ್ಚಿ ವ್ಯವಸ್ಥೆ. ಚೌಕಿಯ ಅಕ್ಕಪಕ್ಕ ಎರಡು ಮುಂದಿಲು (ಹೊಂಡ), ಮೇಲೆ ಚಾವಣಿಯಲ್ಲಿ ತೆರೆದ ಕಿಂಡಿ ಇದ್ದು, ಅದರಿಂದ ಬಂದ ಮಳೆ ನೀರು ಇದರಲ್ಲಿ ಸಂಗ್ರಹವಾಗಿ, ಹೊರಹರಿದು ಹೋಗಲು ಈ ವ್ಯವಸ್ಥೆ. ಜೊತೆಗೆ ಸಾಕಷ್ಟು ಗಾಳಿ, ಬೆಳಕು ಬರಲೂ ಈ ಮೇಲ್‌ಕಿಂಡಿ ಸಹಾಯವಾಗುತ್ತದೆ. 'ಚೌಕಿ'ಯನ್ನು ದಾಟಿದರೆ ಇನ್ನೂ ಎತ್ತರದ ಕಟ್ಟೆಯಂತಹ ಚಾವಡಿ (ಹಜಾರ) ಅಲ್ಲಿನ ಅಲಂಕಾರ ಬಾಗಿಲ ಮೂಲಕ ಒಳ ಹಾಯ್ದರೆ ಪಡಸಾಲೆ, ಭೋಜನಶಾಲೆ, ಅಡಿಗೆಕೋಣೆ ಮತ್ತಿತರ ಕೋಣೆಗಳು; ಅಡಿಗೆ ಮನೆಯಿಂದ ಆಚೆ ಬಚ್ಚಲು, ಬಾವಿಗಳಿಗೆ ಪ್ರವೇಶವುಂಟು. ಪಶ್ಚಿಮ ಬಾಗಿಲಿನಿಂದ ಆಚೆ ಹೋದರೆ ವಿಶಾಲ ಅಂಗಳ; ಕಣಜದ ಕೋಣೆ. ಅಂಗಳದ ಅಂಚಿನಲ್ಲಿ ಹುಲ್ಲು, ಸೌದೆಗಳ ದಾಸ್ತಾನು. ಮನೆಯ ಹಿಂಭಾಇಗಕ್ಕೆ ಕೊಟ್ಟಿಗೆ, ಇವೆಲ್ಲವನ್ನೂ ಒಳಗೊಂಡಂತೆ ಆಳೆತ್ತರದ ಪ್ರಾಕಾರ, ಹಿಂಬದಿಯ ಗೋಡೆಗಳಲ್ಲಿ ದನ, ಕರು ಆಚೆ ಹೋಗಲು ಸಣ್ಣ ಬಾಗಿಲುಗಳು. ಮನೆಯ ಒಳಭಾಗದಲ್ಲೇ ಒಂದೆಡೆ ಮಹಡಿಗೆ ಹೋಗಲು ಮೆಟ್ಟಿಲು; ಮೇಲೆ ಉಗ್ರಾಣ, ಮತ್ತಿತರ ಕೋಣೆಗಳು (ಹಳ್ಳಿಮನೆ, ಪು.೧೨–೧೩, ೨೬, ೨೯–೩೦).

## ಜನನ ಮತ್ತು ನಾಮಕರಣ

ತುಳುವರಲ್ಲಿ ಜನನ, ಋತುಮತಿಯಾಗುವುದು ಹಾಗೂ ಮರಣ ಸಂದರ್ಭಗಳನ್ನು ಬಹುಮುಖ್ಯವಾದ ಮೈಲಿಗೆ ಎಂದು ಸಾಮಾನ್ಯವಾಗಿ ಎಲ್ಲಾ ಜನಸಮುದಾಯಗಳೂ ಭಾವಿಸುತ್ತವೆ ಹಾಗೂ ಅದನ್ನು ನಿಗದಿತ ವಿಧಿಗಳ ಮೂಲಕ ಕಳೆದುಕೊಳ್ಳುವ ಪ್ರಯತ್ನ ಮಾಡುತ್ತಾರೆ. ತುಳುವರಲ್ಲಿ ಕ್ಷೌರಿಕ, ಮಡಿವಾಳ ಹಾಗೂ ಪುರೋಹಿತರು ಶುದ್ಧಿ ಕ್ರಿಯೆ ಮಾಡುವ ಸಾಮರ್ಥ್ಯ ಉಳ್ಳವರೆಂದು ನಂಬಿರುವುದರಿಂದ ಹೆಚ್ಚಿನ ಜನ ಸಮುದಾಯಗಳು ಈ ಸಂಬಂಧದ ಶಾಸ್ತ್ರಾಚರಣೆಗಳಲ್ಲಿ ಇವರ ಭಾಗವಹಿಸುವಿಕೆಗೆ ಆದ್ಯತೆ ನೀಡುತ್ತವೆ. ಈ ವಿಧಿಕ್ರಿಯೆಗಳು ಪ್ರಾದೇಶಿಕವಾಗಿ ಭಿನ್ನವಾಗಿರುತ್ತವೆ. ತುಳುನಾಡಿನಲ್ಲಿ ರೂಢಿಯಲ್ಲಿರುವ ಇಂತಹ ಕೆಲವು ಸಂಪ್ರದಾಯಗಳ ಬಗೆಗೆ ಇಲ್ಲಿ ಪ್ರಸ್ತಾಪಿಸಲಾಗಿದೆ.

ಕುಡುಬಿಯರು ಹಿಂದೆ ಮಗು ಜನಿಸಿದಾಗಿನಿಂದ ಆರು ದಿನಗಳವರೆಗೆ ಮೈಲಿಗೆ ಆಚರಿಸುತ್ತಿದ್ದರು (ಈಗ ೧೧ ದಿನಗಳವರೆಗೂ ಮೈಲಿಗೆ ಆಚರಿಸುತ್ತಾರೆ). ಆರನೇ ದಿನ ಆ ಮಹಿಳೆಯರು 'ಷಟಿ' ಎಂಬ ಸಂಸ್ಕಾರ ನಡೆಸುತ್ತಾರೆ. 'ಪುಗುಡು' ನೃತ್ಯ ಮಾಡುವುದೂ ಇದೆ. ಏಳನೇ ದಿನ ಬಂಧುಮಿತ್ರರಿಗೆ ವಿಶೇಷ ಔತಣಕೂಟ ನಡೆಸುವುದನ್ನು 'ದವಾಳ್' ಎಂದು ಕರೆಯಲಾಗುತ್ತದೆ. ಒಂಬತ್ತು ಅಥವಾ ೧೧ನೇ ದಿನ ಮಗುವಿಗೆ ನಾಮಕರಣ ಮಾಡುತ್ತಾರೆ. ೪೦ ದಿನಗಳ ಬಳಿಕ ತಾಯಿ, ಮಗುವನ್ನು ಗ್ರಾಮದ ದೇವಸ್ಥಾನಕ್ಕೆ ಕರೆದೊಯ್ದು ಶುದ್ಧಿಕ್ರಿಯೆ ಆಚರಿಸುತ್ತಾರೆ. ಇವರಲ್ಲಿ ಗಂಡುಮಗು ಹುಟ್ಟಿದಾಗ ಸಕ್ಕರೆಯೊಂದಿಗೆ ಬೇಯಿಸಿದ ಕಡಲೆ, ಹೆಣ್ಣು ಮಗು ಆದರೆ ಸಕ್ಕರೆಯೊಂದಿಗೆ ಬೇಯಿಸಿದ ಹುರುಳಿಯನ್ನು ಹಂಚುವುದು ಪದ್ಧತಿಯಾಗಿದೆ.

ವೈದಿಕ ಸಂಪ್ರದಾಯದವರು ಸಾಮಾನ್ಯವಾಗಿ ಬಾಣಂತಿ ಮತ್ತು ಮಗುವನ್ನು ೧೦ ದಿನ ಪ್ರತ್ಯೇಕ ಕೋಣೆಯಲ್ಲಿರಿಸುತ್ತಾರೆ. ಅವರನ್ನು ಮುಟ್ಟಿದವರು ಸ್ನಾನ ಮಾಡಿ ಒಳಬರಬೇಕು. ೧೧ನೆಯ ದಿನ ಪಂಚಗವ್ಯದಿಂದ ಮನೆ ಶುದ್ಧಿ ಮಾಡುತ್ತಾರೆ. ನಡುಗಾರ್ತಿ (ಅಗಸಗಿತ್ತಿ) ಇವರ ಬಟ್ಟೆ ಒಗೆದುಕೊಡುತ್ತಾಳೆ. ಪುರೋಹಿತರಿಂದ ಪುಣ್ಯಾಹ ನಡೆಯುತ್ತದೆ. ಪೂಜೆಗೆ ಬಾಣಂತಿ ಹಾಗೂ ಆಕೆಯ ಪತಿ ಇಬ್ಬರೂ ಕೂರುತ್ತಾರೆ. ಏಳನೆಯ ರಾತ್ರಿ ಮಗು ಜನಿಸಿದ ಸ್ಥಳದಲ್ಲಿ ಎಳ್ಳಿನ ದೋಸೆ ಹಾಗೂ ಹಾಲನ್ನು ಇಡುವುದು, ವಿಧಿಯು ಅಂದು ಮಗುವಿನ ಹಣೆಯಲ್ಲಿ ಬರೆಯುತ್ತಾಳೆಂಬ ನಂಬಿಕೆಯಲ್ಲಿ ತಾಯಿ–ಮಗುವನ್ನು ಅಲ್ಲಿಯೇ ಮಲಗಿಸುವುದು ಹಿಂದಿನ ರೂಢಿಯಾಗಿದ್ದಿತು (ಜಾನಪದ, ೧೯೯೨).

ತುಳುನಾಡಿನ ಜೈನರು ಸಾಮಾನ್ಯವಾಗಿ ಮಗು ಜನಿಸಿದ ೧೬ನೇ ದಿನಕ್ಕೆ ನಾಮಕರಣ ಶಾಸ್ತ್ರ ಮಾಡುತ್ತಾರೆ. ಜೈನ ಪುರೋಹಿತರು (ಇಂದ್ರರು) ತೊಟ್ಟಿಲು ಪೂಜೆ, ಹೋಮಹವನಾದಿಗಳನ್ನು ಮಾಡಿ, ಬಳಿಕ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ; ಶಿಶುವಿನ ಕೈಯಲ್ಲಿ ಬೆಳ್ಳಿ ನಾಣ್ಯ ಇರಿಸುತ್ತಾರೆ. ಕಿವಿಯಲ್ಲಿ ಮಗುವಿನ ಹೆಸರನ್ನು ಹೇಳಿ, ಮುತ್ತೈದೆಯರು ಜೋಗುಳ ಹಾಡುತ್ತಾರೆ. ಮನೆಯಲ್ಲಿ ಮಗು ಜನಿಸಿದಾಗಿನಿಂದ ೧೬ ದಿನಗಳವರೆಗೆ ತಮ್ಮ ಕುಟುಂಬಕ್ಕೆ ಸೂತಕವೆಂದು ಭಾವಿಸುವ ಗೌಡ ಸಮುದಾಯದವರು ಆವರೆಗೆ ದೇವಸ್ಥಾನಗಳಲ್ಲಿ ಪೂಜೆ ಮಾಡಿಸುವುದಾಗಲೀ, ಶುಭಕಾರ್ಯಗಳನ್ನು ಮಾಡುವುದಾಗಲೀ ನಿಷಿದ್ಧವಾಗಿರುತ್ತದೆ. ಈ ನಡುವೆ, ಏಳನೆಯ ದಿನ ಮಡಿವಾಳಗಿತ್ತಿಯು ತಾಯಿ–ಮಗುವಿಗೆ ಸ್ನಾನ ಮಾಡಿಸಿ ಅಮೆ ತೆಗೆಯುತ್ತಾರೆ. ಊರ ದೇವಾಲಯದಿಂದ ತೀರ್ಥ ತಂದು ಮನೆಯ ಎಲ್ಲಾ ಭಾಗಗಳಿಗೂ, ಕುಟುಂಬದ ಸದಸ್ಯರಿಗೂ ಚಿಮುಕಿಸುವುದು ಒಂದು ಶುದ್ಧಿ ಕ್ರಿಯೆ ಎಂದು ನಂಬಲಾಗುತ್ತದೆ. ಹದಿನಾರನೇ ದಿನ ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರ ಮಾಡುತ್ತಾರೆ. ಅಂದು ಮನೆಯವರೆಲ್ಲಾ ಸ್ನಾನ–ಮಡಿ ಮಾಡುತ್ತಾರೆ. ಕುಟುಂಬದ ಹಿರಿಯ ಮಹಿಳೆಯು ಮಗುವಿಗೆ ಹೊಸ ಬಟ್ಟೆ ಹಾಕಿ, ತನ್ನ ಮಡಿಲಲ್ಲಿ ಮಲಗಿಸಿಕೊಂಡು, ಮನೆಯ ಪವಿತ್ರ ಸ್ಥಳವಾದ ನೆಲ್ಲಕ್ಕಿಯ ಅಡಿ ಕುಳಿತು, ಅಲ್ಲಿ, ಮೊಸರಿನೊಂದಿಗೆ ನುಣ್ಣಗೆ ಕಿವುಚಿ ಕಲೆಸಿದ ಅನ್ನವನ್ನು ಮಗುವಿನ ಬಾಯಿಗೆ ಉಣಿಸುತ್ತಾಳೆ. ಬಳಿಕ, ಇತರರೂ ಮಗುವಿಗೆ ಹಾಗೆ ಅನ್ನ ಉಣಿಸಿದ ಶಾಸ್ತ್ರ ಮಾಡಿದ ಮೇಲೆ, ಮಗುವನ್ನು ಪೂರ್ವಕ್ಕೆ ತಲೆ ಇರುವಂತೆ ತೊಟ್ಟಿಲಿಗೆ ಹಾಕುತ್ತಾರೆ; ನಾಮಕರಣ ಮಾಡುತ್ತಾರೆ. ೪೦ ದಿನಕ್ಕೆ ಶುಚಿಭೂರ್ತಳಾಗಿ ಬಾಣಂತಿಯು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸುತ್ತಾಳೆ. ಗಂಗಾಪೂಜೆ ಮಾಡಿ, ಮುತ್ತೈದೆಯರು ಅಲ್ಲಿಂದ ನೀರು ತಂದು ನೆಲ್ಲಕ್ಕಿಯಡಿ ಇಡುತ್ತಾರೆ. ಬಾಣಂತಿಯು ಮನೆಯಲ್ಲಿ ಮನೆ ದೇವರಿಗೂ, ಹಿರಿಯರಿಗೂ ನಮಸ್ಕರಿಸುತ್ತಾಳೆ. ಈ ಎಲ್ಲಾ ಶಾಸ್ತ್ರಗಳು ಆದ ಮೇಲೆ ಒಂದು ದಿನ ಗಂಡನ ಮನೆಯವರು ಮುತ್ತೈದೆಯರೊಂದಿಗೆ ಬಂದು ತಾಯಿ, ಮಗುವನ್ನು ತಮ್ಮ ಮನೆಗೆ ಕರೆದೊಯ್ಯುತ್ತಾರೆ. ಹಾಗೆ ಮನೆಗೆ ಬಂದಾಗ, ಅವರನ್ನು ಮುಂಬಾಗಿಲ ಬಳಿ ನಿಲ್ಲಿಸಿ,ಕುರ್ದಿ(ಓಕುಳಿ) ನೀರಿನಿಂದ ತಾಯಿ–ಮಗುವಿನ ದೃಷ್ಟಿ ಇಳೆ ತೆಗೆಯುತ್ತಾರೆ. ಅತ್ತೆ–ಮಾವ ಮಗವನ್ನು ಎತ್ತಿಕೊಂಡು ಬಂದು ತೊಟ್ಟಿಲಲ್ಲಿ ಮಲಗಿಸಿದ ಮೇಲೆ ತಾಯಿಯು ಆ ಹಿರಿಯರಿಗೆ ನಮಸ್ಕರಿಸುವುದೂ ಒಂದು ನಡವಳಿಕೆಯಾಗಿದೆ.

ಕೊರಗರು ನಾಮಕರಣದಂದು ಕತ್ತಲಾದ ಮೇಲೆ ತಾಯಿ, ಮಗುವಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸುತ್ತಾರೆ; ಕಾಡಿಗೆ ಹಚ್ಚಿಕೊಳ್ಳುತ್ತಾರೆ. ಬಳಿಕ ಮಂಜ ಇಡುವ ಆಚರಣೆ ಮಾಡುತ್ತಾರೆ. ಅಂದರೆ,

ಮನೆಯ ಹೊರಗೆ ದೇವರ ಕಲ್ಲಿನ ಮುಂದೆ ಕೂಡಿ, ಬಾಳೆ ಎಲೆಯ ಮೇಲೆ ವೀಳ್ಯದೆಲೆ, ಅಡಕೆ, ತೆಂಗಿನಕಾಯಿ ಇಡುತ್ತಾರೆ. ಕಾಯಿ ಒಡೆದು, ಅದರ ಒಂದು ಹೋಳನ್ನು ಮನೆಯ ಒಳಗೆ ತರುತ್ತಾ ಬೇರೆ ಬಳಿಯ ಗಂಡಸರು, ಮಕ್ಕಳು ಮಗುವಿಗೆ ಇಡುವ ಹೆಸರನ್ನು ಮೊದಲು ಕರೆಯುತ್ತಾರೆ ಮತ್ತು ತಾಯ ಮಡಿಲಿಂದ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ನಾಮಕರಣ ಶಾಸ್ತ್ರದಂದು ಬಂಧುಗಳಲ್ಲದೆ, ಆ ಬಳಿಯ ಗುರ್ಕಾರನೂ ಅಲ್ಲಿ ಸೇರಿರುತ್ತಾನೆ. ನವಜಾತ ಶಿಶುವನ್ನು ಸ್ನಾನ ಮಾಡಿಸಿ, ಬಟ್ಟೆ ಹೊದಿಸಿ, ಮುಚ್ಚಿರೆ ಮರದ ಎಲೆ ಅಥವಾ ಅಡಕೆ ಹಾಳೆಯಲ್ಲಿ ಮಲಗಿಸುತ್ತಾರೆ. ಏಳನೇ ದಿನ ಮಡಿವಾಳ್ತಿಯು ಮಗುವಿಗೆ ಉಡುದಾರ ಹಾಕುವ ಶಾಸ್ತ್ರ ಮಾಡುತ್ತಾಳೆ.

**ಕೋಷ್ಟಕ ೩.೧೧ : ಜಿಲ್ಲೆಯ ವಿವಿಧ ಉಪನೋಂದಣಿ ಕಚೇರಿಗಳಲ್ಲಿ ನೋಂದಾಯಿಸಿದ ವಿವಾಹ ಹಾಗೂ ದತ್ತು ಸ್ವೀಕಾರ ವಿವರ**

| | ಉಡುಪಿ | ಕಾರ್ಕಳ | ಕುಂದಾಪುರ | ಬ್ರಹ್ಮಾವರ | ಶಂಕರನಾರಾಯಣ | ಬೈಂದೂರು | ಒಟ್ಟು |
|---|---|---|---|---|---|---|---|
| **೨೦೦೧–೦೨** | | | | | | | |
| **ವಿವಾಹ** | ೨೬೦ | ೬೩ | ೭೭ | ೧೨೭ | ೩೩ | ೨೬ | ೫೮೬ |
| **ವಿಶೇಷ ವಿವಾಹ** | ೧೧೯ | ೨೬ | ೩೦ | ೩೦ | ೮ | ೩ | ೨೧೬ |
| **ದತ್ತು ಸ್ವೀಕಾರ** | ೨ | – | – | ೧ | – | – | ೩ |
| **೨೦೦೨–೦೩** | | | | | | | |
| **ವಿವಾಹ** | ೨೭೩ | ೪೮ | ೧೨೦ | ೧೨೮ | ೨೪ | ೧೪ | ೬೦೭ |
| **ವಿಶೇಷ ವಿವಾಹ** | ೮೭ | ೩೮ | ೨೫ | ೧೫ | ೩ | ೩ | ೧೭೧ |
| **ದತ್ತು ಸ್ವೀಕಾರ** | ೧ | ೧ | ೧ | – | – | – | ೩ |
| **೨೦೦೩–೦೪** | | | | | | | |
| **ವಿವಾಹ** | ೩೪೭ | ೭೮ | ೧೧೧ | ೧೨೬ | ೩೦ | ೧೪ | ೭೦೬ |
| **ವಿಶೇಷ ವಿವಾಹ** | ೧೧೦ | ೨೩ | ೨೧ | ೧೯ | – | ೨ | ೧೭೫ |
| **ದತ್ತು ಸ್ವೀಕಾರ** | ೨ | ೩ | ೧ | ೧ | – | – | ೭ |
| **೨೦೦೪–೦೫** | | | | | | | |
| **ವಿವಾಹ** | ೩೯೮ | ೮೬ | ೧೩೯ | ೧೦೪ | ೪೩ | ೨೬ | ೭೯೬ |
| **ವಿಶೇಷ ವಿವಾಹ** | ೬೯ | ೨೦ | ೨೧ | ೨೭ | ೧ | ೪ | ೧೪೨ |
| **ದತ್ತು ಸ್ವೀಕಾರ** | ೧ | ೨ | ೧ | – | – | – | ೪ |
| **೨೦೦೫–೦೬** | | | | | | | |
| **ವಿವಾಹ** | ೩೫೦ | ೬೫ | ೧೨೦ | ೯೭ | ೩೦ | ೧೫ | ೬೭೭ |
| **ವಿಶೇಷ ವಿವಾಹ** | ೬೫ | ೨೨ | ೨೨ | ೧೪ | ೧ | ೪ | ೧೨೮ |
| **ದತ್ತು ಸ್ವೀಕಾರ** | ೬ | – | ೧ | ೧ | – | – | ೮ |

*ಆಧಾರ : ಭಾರತೀಯ ಜನಗಣತಿ ೨೦೦೧*

ಮುಸ್ಲಿಮರಲ್ಲಿ ಮಗು ಹುಟ್ಟಿದಾಗ ಹೊಕ್ಕಳು ಬಳ್ಳಿ ಕತ್ತರಿಸಿ, ಮೈ ಸ್ವಚ್ಛ ಮಾಡಿದ ಮೇಲೆ ಹಿರಿಯರೊಬ್ಬರು ಮಗುವಿನ ಬಲಕಿವಿಯಲ್ಲಿ ಅಜಾನ್, ಎಡಕಿವಿಯಲ್ಲಿ ಇಕಾಮತ್ ಮಂತ್ರ ಉಚ್ಛರಿಸುತ್ತಾರೆ. ಅಲ್ಲದೆ ಮಗುವಿನ ಹೆಸರನ್ನು ಕಿವಿಯಲ್ಲಿ ಮೂರು ಮೂರು ಸಲ ಹೇಳುತ್ತಾರೆ. ಹುಟ್ಟಿದ ಏಳು ಅಥವಾ ಹದಿನೈದನೇ ದಿನದಂದು ಅಕೀಕಾ (ಕೇಶ ಮುಂಡನ ಸಂಸ್ಕಾರ) ಮತ್ತು ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರ ಮಾಡುತ್ತಾರೆ. ಮಗುವಿನ ಕೂದಲಿಗೆ ಎಣ್ಣೆ ಹಚ್ಚಿ ಆ ಕೂದಲನ್ನು ತೆಗೆದು ಬಾಳೆಎಲೆಯಲ್ಲಿ ಹಾಕುತ್ತಾರೆ. ಆ ಎಲೆಗೆ ಮಗುವಿನ ಕೈಯಿಂದಲೇ ತಾಯಿಯು ಹಣ ಹಾಕಿಸಿ, ಅದನ್ನು ಕೂದಲು ತೆಗೆದವರಿಗೆ ನೀಡುತ್ತಾರೆ. ಕೂದಲು ಇರುವ ಬಾಳೆಎಲೆಯನ್ನು ತೆಂಗಿನ ಮರಕ್ಕೆ ಕಟ್ಟುತ್ತಾರೆ ಅಥವಾ ಸಮುದ್ರಕ್ಕೆ ಎಸೆಯಲಾಗುತ್ತದೆ. ಅನುಕೂಲವಿದ್ದವರು ಅಂದು ನೆಂಟರಿಗೆ ಮಾಂಸಾಹಾರದ ಊಟ ಹಾಕುವುದೂ

ಉಂಟು. ನಲವತ್ತನೇ ದಿನ ಬಾಣಂತಿಗೆ ಶಾಸ್ತ್ರೋಕ್ತವಾಗಿ ಸ್ನಾನ ಮಾಡಿಸುತ್ತಾರೆ. ಅಂದು ಆಕೆ ತಾಯಿ ಮನೆಯಿಂದ ಗಂಡನ ಮನೆಗೆ ಹೋಗುತ್ತಾಳೆ. ಸುನ್ನತ್ (ಖತ್ನಾ) ಮುಸ್ಲಿಮರ ಬಹು ಮುಖ್ಯ ಸಂಸ್ಕಾರಗಳಲ್ಲಿ ಒಂದಾಗಿದೆ. ಅಂದು ಅಕ್ಕಿಮುಡಿಯ ಮೇಲೆ ಕುಳಿತ ಸೋದರಮಾವನ ತೊಡೆಯ ಮೇಲೆ ಹುಡುಗನನ್ನು ಕುಳ್ಳಿರಿಸಿ, ಜೋರಾಗಿ ಸಲಾತ್ ಹಾಡುತ್ತಾ ವಸನ್ ಎಂಬ ವೃತ್ತಿಪರ ಅನುಭವಿಯಿಂದ ಈ 'ಖತ್ನಾ' ಕ್ರಿಯೆ ಮಾಡಲಾಗುತ್ತದೆ. ಗಾಯ ಒಣಗಿದ ಬಳಿಕ ಒಂದು ಶುಕ್ರವಾರ ಹುಡುಗನನ್ನು ಸಂಭ್ರಮದಿಂದ ಮಸೀದಿಗೆ ಕರೆದೊಯ್ಯುವ ಸಮಾರಂಭ ಮಾಡುತ್ತಾರೆ (ವಿವರಕ್ಕೆ: ಸಿರಿ, ಪು.೪೩೨).

**ಋತುಮತಿ ಆಚರಣೆಗಳು**

ಕುಂದಾಪುರ ಭಾಗದ ಹವಿಕ ಹೆಬ್ಬಾರರಲ್ಲಿ ಋತುಮತಿಯಾದ ಹುಡುಗಿಯನ್ನು ಒಂದು ಕೋಣೆಯಲ್ಲಿ ಪ್ರತ್ಯೇಕ ಇರಿಸುತ್ತಾರೆ. ಮೂರು ದಿನ ಅವಳು ಮೀಯುವಂತಿಲ್ಲ. ಐವರು ಮುತ್ತೈದೆಯರಿಂದ ಕುಟ್ಟಿಸಿ ತಯಾರಿಸಿದ ಚಿಗಳಿ ಉಂಡೆ, ಸಿಹಿ ತಿಂಡಿಗಳನ್ನು ಆಕೆಗೆ ವಿಶೇಷವಾಗಿ ತಿನ್ನಲು ಕೊಡುತ್ತಾರೆ. ಆದರೆ, ನಿತ್ಯ ಮುಂಜಾನೆ ಆಕೆಗೆ ಬಟ್ಟೆ ಬದಲಾಯಿಸಿ, ಹೂವು, ಒಡವೆಗಳಿಂದ ಮದುಮಗಳಂತೆ ಅಲಂಕರಿಸುತ್ತಾರೆ. ಮೂರು ದಿನ ಗೋಡೆಯ ಮೇಲೆ ಸೇಡಿಯಿಂದ ವೃತ್ತಾಕಾರ ಬರೆದು, ಅದರ ಮೇಲೆ ಮತ್ತು ತಳಭಾಗದಲ್ಲಿ ಅರಿಸಿನ-ಎಣ್ಣೆ ಹಚ್ಚಿದ ಎರಡೂ ಹಸ್ತ ಹಾಗೂ ವೃತ್ತದ ನಡುವೆ ಒಂದು ಹಸ್ತದ ಗುರುತು ಮೂಡಿಸುತ್ತಾರೆ. ಅದಕ್ಕೆ ಚಿಗಳಿ ಎಳ್ಳನ್ನು ಚಿಮುಕಿಸಿ ಅಕ್ಷತೆ, ಕುಂಕುಮ ಇಡುತ್ತಾರೆ. ಆಮೇಲೆ ಹರಳೆಲೆಯಿಂದ ಬೆರಳು ಮೂಡಿಸುವುದೂ ಇದೆ. ನಾಲ್ಕನೆಯ ದಿನ ಇದಕ್ಕೆ ಚಟ್ಟು ಬರೆಸುವುದು ಎನ್ನುತ್ತಾರೆ. ಹಿಂದೆ, ಋತುಮತಿ ಯಾಗುವ ಮೊದಲೇ ವಿವಾಹವಾಗಿದ್ದವಳಿಗೆ, ಐದನೇ ದಿನ ಪ್ರಸ್ತದ ಶಾಸ್ತ್ರ ಮುಗಿಸುವುದು ರೂಢಿಯಲ್ಲಿದ್ದಿತು (ಜಾನಪದ ೧೯೨). ಒಕ್ಕಲಿಗ ಯಾನೆ ಗೌಡರಲ್ಲಿ ಮುತ್ತೈದೆಯರು ಋತುಮತಿಯಾದ ಹುಡುಗಿಯನ್ನು, ಮನೆಯ ಅಂಗಳದಲ್ಲಿ ಪೂರ್ವಾಭಿಮುಖವಾಗಿ ಕುಳ್ಳಿರಿಸುತ್ತಾರೆ. ಗರಿಕೆ ಪತ್ರೆಯಿಂದ ಎಣ್ಣೆ ತೆಗೆದುಕೊಂಡು ನೆತ್ತಿ ಹಾಗೂ ಕಾಲಿಗೆ ಹಚ್ಚಿ, ತಲೆ ಮೇಲೆ ನೀರು ಹಾಕುತ್ತಾರೆ. ಬಳಿಕ ಮಡಿಬಟ್ಟೆ ಉಡಿಸಿ, ಮನೆಯ ಹೊರ ಅಂಕಣದಲ್ಲಿ ಅಥವಾ ಕೊಟ್ಟಿಗೆಯಲ್ಲಿ ಕೂರಿಸುತ್ತಾರೆ. ಮೂರನೆಯ ದಿನ ಮಡಿವಾಳಿತಿಯು ಹುಡುಗಿಗೆ ಸ್ನಾನ ಮಾಡಿಸಿ, ಅಮೆ ತೆಗೆಯುವ ಕಾರ್ಯ ಮಾಡುತ್ತಾಳೆ. ಚೌಳು ನೀರಿನಿಂದ ಮನೆಯ ಶುದ್ಧಿ, ಪುಣ್ಯಾರ್ಚನೆ ಕಾರ್ಯಗಳೂ ನಡೆಯುತ್ತವೆ. ಬಳಿಕ ನೀರು ತುಂಬಿದ ಮಡಕೆಯಲ್ಲಿ ಒಂದು ಸೌಟು ಇರಿಸಿ, ಅದನ್ನು ಆಕೆಯ ಮೇಲೆ ಹೊರಿಸಿಕೊಂಡು ಬಂದು ಮನೆಯ ನೆಲ್ಲಕ್ಕಿಯಡಿಯಲ್ಲಿ ಇರಿಸುತ್ತಾರೆ. ಮೂರನೆಯ ದಿನ ಈ ಮಡಕೆ ಹಿಡಿಸುವ ಶಾಸ್ತ್ರವನ್ನು ಮಾಡದವರು ಹನ್ನೆರಡನೆಯ ದಿನವಾದರೂ ಮಾಡಲೇಬೇಕು. ಅಲ್ಲಿಯವರೆಗೂ ಆಕೆ ಯಾವ ಕೆಲಸ ಮಾಡುವುದೂ ನಿಷಿದ್ಧವಾಗಿರುತ್ತದೆ. ಹದಿನಾರನೇ ದಿನ ಆಕೆಯನ್ನು ಹೊಸ ವಸ್ತ್ರ, ಆಭರಣಗಳಿಂದ ಅಲಂಕರಿಸಿ ತಮ್ಮ ಐನ್ ಮನೆಯ ಉಯ್ಯಾಲೆ ಅಥವಾ ನೆಲ್ಲಕ್ಕಿಯಡಿಯಲ್ಲಿ ಕುಳ್ಳಿರಿಸುತ್ತಾರೆ. ತಂದೆ-ತಾಯಿಗಳಲ್ಲದೆ ಅಂದು ಅಲ್ಲಿ ಸೇರಿದ ಬಂಧು-ಮಿತ್ರರು ಆಕೆಗೆ ಅಕ್ಷತೆ ಹಾಕಿ, ಉಡುಗೊರೆ ನೀಡುತ್ತಾರೆ. ಪ್ರತಿಯಾಗಿ ಆಕೆ ಅವರ ಕಾಲು ಹಿಡಿಯುತ್ತಾಳೆ. ಅಂದು ಎಲ್ಲರಿಗೂ ಔತಣವಿರುತ್ತದೆ. ಮೇರರಲ್ಲಿ ಹುಡುಗಿ ಋತುಮತಿಯಾದುದನ್ನು "ಮುಳ್ಳು ತುಳಿದಳು" ಎಂದು ಹೇಳುವುದು ವಿಶೇಷವಾಗಿದೆ. ಮಲೆಕುಡಿಯರಲ್ಲಿ ಹುಡುಗಿ ಮೈನೆರೆದಂದು ಆಕೆಯನ್ನು ಸಿಪ್ಪೆ ಸುಲಿಯದ ಮೂರು ತೆಂಗಿನಕಾಯಿಗಳ ಮೇಲೆ ಕೂರಿಸಿ ಎಣ್ಣೆ ಮತ್ತು ಕುರ್ದಿ ನೀರಿನಿಂದ ಶುದ್ಧಿ ಮಾಡುವ ಆಚರಣೆ ನಡೆಸುತ್ತಾರೆ. ಈ ಕಾಯಿಗಳಲ್ಲಿ ಒಂದನ್ನು ನೆಟ್ಟು ಬೆಳೆಸುವುದು ಶುಭಸೂಚಕವೆಂದು ಭಾವಿಸುತ್ತಾರೆ. ಮೂರು ದಿನ ಆಕೆಯನ್ನು ಕೊಟ್ಟಿಗೆಯಲ್ಲಿ ಪ್ರತ್ಯೇಕ ಕೂರಿಸುತ್ತಾರೆ. ೧೨ನೇ ದಿನದಂದು ಆಕೆಗೆ ದೇಸೆ (ಸೇಸೆ) ಹಾಕುವುದು, ಬಂಧುಗಳಿಗೆ ಊಟ ಹಾಕುವುದು ಮಾಡುತ್ತಾರೆ. ಮೈನೆರೆದ ಹುಡುಗಿಯನ್ನು ತೆಂಗಿನಮರದ ಕೆಳಗೆ ಕೂರಿಸಿ, ತೆಂಗಿನಹೂವು ಮುಡಿಸಿ, ಕಾಡಿಗೆ, ಅರಿಸಿನ-ಕುಂಕುಮ ಇಡುವ, ಐದು ದಿನ ಹೊರಗೆ ಕೂರಿಸಿ, ಬಳಿಕ ಸ್ನಾನ ಮಾಡಿಸಿ, ಒಳಗೆ ಕರೆದುಕೊಳ್ಳುವ ಪದ್ಧತಿ ಹಸಲರಲ್ಲಿದೆ. ವಿಶ್ವಕರ್ಮರಲ್ಲಿ ಮೈನೆರೆದಾಕೆಯನ್ನು ನಾಲ್ಕು ದಿವಸ ಪ್ರತ್ಯೇಕ ಕೋಣೆಯಲ್ಲಿರಿಸಿ ಐದನೇ ದಿನ ಮುತ್ತೈದೆಯರು ಆಕೆಗೆ

ಕಲಶದ ನೀರಿನಿಂದ ಸ್ನಾನ ಮಾಡಿಸಿ, ಹೊಸ ವಸ್ತ್ರ ತೊಡಿಸುತ್ತಿದ್ದರು. ಆಕೆ ತೆಂಗು, ಹಲಸು ಮೊದಲಾದ ಮರಗಳಿಗೆ ನೀರು ಹುಯ್ದು, ನಮಸ್ಕರಿಸಿ, ಅಡುಗೆ ಕೋಣೆಗೆ ಬಂದು, ಅಲ್ಲಿನ ಮಡಕೆ ಕುಡಿಕೆಗಳಿಗೂ ನಮಸ್ಕರಿಸುತ್ತಿದ್ದಳು. ಊಟವಾದ ಬಳಿಕ ಸೋದರ ಮಾವ ಆಕೆಯನ್ನು ತನ್ನೊಂದಿಗೆ ಮನೆಗೆ ಕರೆದೊಯ್ಯುತ್ತಿದ್ದ. ಅಲ್ಲಿ ಆಕೆಗೆ ತೆಂಗಿನಕಾಯಿಗಂಜಿ, ಕೊತ್ತಂಬರಿ ಗಂಜಿ, ಮಣ್ಣಿ (ಅಕ್ಕಿಯ ಒಂದು ತಿಂಡಿ) ಮತ್ತಿತರ ವಿಶೇಷ ತಿಂಡಿಗಳನ್ನು ಮಾಡಿಕೊಡುತ್ತಿದ್ದರು. ಒಂದು ವಾರದ ಬಳಿಕ ಆಕೆ ಮನೆಗೆ ಹಿಂದಿರುಗುತ್ತಿದ್ದಳು. ಇದು ಹಿಂದಿನ ಕಾಲದಲ್ಲಿ ನಡೆಯುತ್ತಿದ್ದ ಪದ್ಧತಿ. ಇದನ್ನು ಆಗ "ಮದುಮಗಳ ಮದುವೆ" ಎಂದು ಕರೆಯುತ್ತಿದ್ದರು. ಈಗ ಈ ಪದ್ಧತಿಗಳು ಬದಲಾಗಿವೆ. ಮುಸ್ಲಿಮರಲ್ಲಿ ಮೈನೆರೆದ ಹುಡುಗಿ ಏಳುದಿನ ಹೊರಗೆ ಓಡಾಡುವಂತಿಲ್ಲ. ಏಳನೆಯ ದಿನ ಆಕೆಗೆ ಕ್ರಮಬದ್ಧವಾಗಿ ಸ್ನಾನ ಮಾಡಿಸಿ, ಒಡವೆ, ವಸ್ತ್ರಗಳಿಂದ ಅಲಂಕರಿಸಿ ಬಂಧುಗಳಿಗೆ ವಿಶೇಷ ಔತಣವನ್ನು ಮಾಡಿಸುತ್ತಾರೆ.

**ಸೀಮಂತ :** ಗರ್ಭಿಣಿಯನ್ನು ಹೆರಿಗೆಗಾಗಿ ತವರಿಗೆ ಕರೆದೊಯ್ಯುವ ಮುನ್ನ ಗಂಡನ ಮನೆಯಲ್ಲಿ ಆಕೆಗೆ ಬಯಕೆ ಶಾಸ್ತ್ರ ಮಾಡುವುದು ಸಾಮಾನ್ಯ ಸಂಪ್ರದಾಯವಾಗಿದೆ. ಆದರೆ, ಇದರ ಆಚರಣಾ ನಡವಳಿಕೆಗಳು ಜಾತಿಯಿಂದ ಜಾತಿಗೆ ಕೆಲವೊಮ್ಮೆ ವಿಭಿನ್ನವಾಗಿರುತ್ತವೆ. ಉದಾಹರಣೆಗೆ–ಕೊರಗರಲ್ಲಿ ಚೊಚ್ಚಿಲ ಬಸಿರಿಗೆ ಏಳನೇ ತಿಂಗಳಿಗೆ ಗಂಡನ ಮನೆಯಲ್ಲಿ ಬಯಕೆ ಶಾಸ್ತ್ರ ಮಾಡುತ್ತಾರೆ. ಅಂದು ಆಕೆಯನ್ನು ಅಲಂಕರಿಸಿ ಪೂರ್ವಕ್ಕೆ ಎದಿರು ಕುಳ್ಳಿರಿಸಿ, ಬಾಳೆಎಲೆ ತುಂಬಾ ಕಜ್ಜಾಯ ಬಡಿಸುತ್ತಾರೆ (ಆಕೆ ತಿಂದು ಉಳಿದುದನ್ನು ತೌರಿಗೆ ತೆಗೆದುಕೊಂಡು ಹೋಗುತ್ತಾಳೆ). ಬೇಯಿಸಿದ ಮೊಟ್ಟೆ ಹಾಗೂ ನುಗ್ಗೆಸೊಪ್ಪಿನ ಪಲ್ಯ, ಮೀನಿನ ಪದಾರ್ಥಗಳು ಅಂದಿನ ವಿಶೇಷ ಊಟದಲ್ಲಿ ಬಳಕೆಯಾಗುತ್ತವೆ. ಇದೆಲ್ಲಾ ಆಗಿ, ತೌರಿಗೆ ಹೊರಡುವಾಗ ಅಂಗಳದಲ್ಲಿ ಕರಿಮೆಣಸು, ಜೀರಿಗೆ, ಬೆಳ್ಳುಳ್ಳಿಗಳನ್ನು (ತಲಾ ಸುಮಾರು ಅರ್ಧ ಸೇರಿನಂತೆ) ಆಕೆಯ ಸೆರಗಿನಲ್ಲಿ ಹಾಕುತ್ತಾರೆ. ಹೀಗೆ ತಾತಾಯಿ ಮುಂಚಿ–ಎಂದು ಕೊಟ್ಟ ಮೇಲೆ ಆಕೆ ಗಂಡನ ಮನೆಯ ಕಡೆ ತಿರುಗಿ ನೋಡದಂತೆ ತವರುಮನೆ ಕಡೆ ಹೋಗಬೇಕೆಂಬ ನಂಬಿಕೆ ಇದೆ. ಶಾಲಿಯಾಗಳಲ್ಲಿ ಗರ್ಭಿಣಿಗೆ ಏಳನೇ ತಿಂಗಳಲ್ಲಿ ಪುಳಿಕುಡಿ ಎಂಬ ಶಾಸ್ತ್ರ ಮಾಡುತ್ತಾರೆ. ಅಂದು ತುಳಸಿಕಟ್ಟೆಯಲ್ಲಿ ಆಕೆಯ ಗಂಡ ಒಂದು ಹುಳಿಯ ಮರದ ಗೆಲ್ಲನ್ನು ನೆಟ್ಟು ಅದಕ್ಕೆ ಕಬ್ಬಿಣದ ಉಂಗುರವನ್ನು ಸಿಕ್ಕಿಸುತ್ತಾನೆ. ಅದರ ಮುಂದೆ ಪೂರ್ವಾಭಿಮುಖವಾಗಿ ಕುಳಿತ ಗರ್ಭಿಣಿಯ ಎದಿರು ಹಣತೆ ಇಟ್ಟು ತಟ್ಟೆಯಲ್ಲಿ ಹುಳಿರಸ ಮಿಶ್ರಿತ ಹಾಲನ್ನು ಇಡಲಾಗುತ್ತದೆ. ಹಿರಿಯ ಮಹಿಳೆಯರು ಆಕೆಗೆ ಅದನ್ನು ಕುಡಿಸುತ್ತಾರೆ. ಬಳಿಕ ಆಕೆಯನ್ನು ಸಣ್ಣ ಹುಡುಗನೊಂದಿಗೆ ಕೂರಿಸಿ ಸಿಹಿ ತಿಂಡಿ ಬಡಿಸುತ್ತಾರೆ.

**ವಿವಾಹ**

ತುಳುನಾಡಿನ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಅನನ್ಯತೆಗಳನ್ನು ಅರ್ಥಮಾಡಿಕೊಳ್ಳಲು ಅಲ್ಲಿನ ವಿವಿಧ ಸಮುದಾಯಗಳಲ್ಲಿನ ವಿವಾಹಾಚರಣೆಗಳನ್ನೂ ಅಧ್ಯಯನ ಮಾಡಬೇಕಾಗುತ್ತದೆ. ಇತರೆಡೆಯಂತೆ ಇಲ್ಲಿನವರೂ ವಿವಾಹವೆಂಬುದು ಜೀವನಾವರ್ತನದ ಒಂದು ಮಂಗಳಕಾರ್ಯವೆಂದೂ, ವ್ಯಕ್ತಿಯ ಬದುಕಿನ ಬಹು ಮುಖ್ಯ ಘಟ್ಟವೆಂದೂ ನಂಬಿದ್ದಾರೆ. ಅದಕ್ಕನುಗುಣವಾಗಿ ಅವರ ವಿವಾಹ ವಿಧಿಗಳಲ್ಲಿ ಫಲಸಮೃದ್ಧಿ ಆಶಯದ ಅನೇಕ ಸಾಂಕೇತಿಕ ಆಚರಣೆಗಳು, ನಂಬಿಕೆ, ನಿಷೇಧಗಳು ರೂಢಿಯಲ್ಲಿವೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿನ ವಿವಾಹ ಸಂಪ್ರದಾಯದ ಕೆಲವು ಮಾದರಿಗಳ ಸ್ಥೂಲ ಪರಿಚಯ ಮಾಡಿಕೊಡಲಾಗಿದೆ. ಹಿಂದೆ ಸಾಂಪ್ರದಾಯಿಕ ವಿವಾಹಗಳು ಅವರವರ ಪದ್ಧತಿಯಂತೆ ದಿನಕ್ಕೊಂದು ಶಾಸ್ತ್ರವಾಗಿ ಏಳು ದಿನಗಳವರೆಗೂ ನಡೆಯುತ್ತಿದ್ದವು. ಈಗ ಬಹುಮಟ್ಟಿಗೆ ಆ ಎಲ್ಲಾ ಶಾಸ್ತ್ರಗಳನ್ನು ಅಡಕ ಮಾಡಿ ಒಂದೇ ದಿನದಲ್ಲಿ ಮುಗಿಸುವುದು ರೂಢಿಯಾಗಿದೆ. ಆದರೂ, ವಿವಾಹದ ಪೂರ್ವ ಸಿದ್ಧತೆಯಾಗಿ ನಡೆಯುವ ನಂಬುಗೆ ವೀಳ್ಯದಿಂದ ಆರಂಭಿಸಿ, ಕೊನೆಗೆ ಪ್ರಸ್ಥದವರೆಗಿನ ವಿವಾಹದ ವಿವಿಧ ಸಂಪ್ರದಾಯ, ಸಡಗರಗಳು ಸುಮಾರು ಒಂದು ತಿಂಗಳ ಕಾಲಾವಧಿಯವರೆಗೂ ಜರುಗುತ್ತಿರುತ್ತವೆ. ಏನಿಲ್ಲವೆಂದರೂ, ಮದುವೆಯ ಹಿಂದಿನ ಹಾಗೂ ಮರು ದಿನದವರೆಗಿನ ಮುಖ್ಯ ಶಾಸ್ತ್ರಾಚರಣೆಗಳನ್ನು ಗಮನಕ್ಕೆ ತೆಗೆದುಕೊಂಡರೂ ಈಗಿನ ಸಾಂಪ್ರದಾಯಿಕ ವಿವಾಹಗಳು ಕನಿಷ್ಠ ಮೂರುದಿನಗಳವರೆಗೂ ನಡೆದಂತಾಗುತ್ತದೆ.

ಅಳಿಯಕಟ್ಟು ಪದ್ಧತಿಯವರಲ್ಲಿ ವಧೂವರರ ಸೋದರಮಾವ ಎಲ್ಲಾ ಕಾರ್ಯಗಳಲ್ಲಿ ಮುಂದಾಳಾಗಿ ನಿಲ್ಲುವುದು ರೂಢಿಯಾಗಿದೆ. ಮನೆತನದ ಮತ್ತು ಸಮಾಜದ ಗುರಿಕಾರರ ಒಪ್ಪಿಗೆ ಹಾಗೂ ಸಹಭಾಗಿತ್ವವೂ ಅಗತ್ಯವಾಗಿರುತ್ತದೆ. ಬಳಿ, ಮನೆತನ ಇತ್ಯಾದಿಗಳು ಪರಸ್ಪರ ಒಪ್ಪಿಗೆಯಾದ ಮೇಲೆ ಮನೆದೇವರಲ್ಲಿ ಪ್ರಸಾದ ಕೇಳುವುದು ಮೊದಲಾದುವೂ ಅನುಸರಣೆಯಾಗುತ್ತವೆ. ಇದೆಲ್ಲಾ ಆಗಿ, ನಂಬುಗೆ ಕಾರ್ಯಕ್ರಮದ ಮೂಲಕ ವಿವಾಹ ನಿಶ್ಚಯ ಆದಮೇಲೆ ಮುಂದಿನ ತಯ್ಯಾರಿಗಳು ಬಿರುಸಾಗಿ ಸಾಗುತ್ತವೆ. ಅದರ ಅಂಗವಾಗಿ ಕ್ಷೌರಿಕ, ಮಡಿವಾಳಿ, ವಾದ್ಯದವರು ಮೊದಲಾದವರಿಗೆ ವೀಳ್ಯ ನೀಡಿ ತಮ್ಮ ಸಾಂಪ್ರದಾಯಿಕ ಕೆಲಸಗಳಿಗಾಗಿ ಆಹ್ವಾನಿಸುವುದೂ ನಡೆಯುತ್ತದೆ. ಹಿಂದಿನ ಸಂಪ್ರದಾಯದಂತೆ ಮದುವೆ ಸಾಮಾನ್ಯವಾಗಿ ವಧುವಿನ ಮನೆಯಲ್ಲಿಯೇ ಜರುಗುತ್ತಿತ್ತು. ಈಗ ಪಟ್ಟಣದ ಕಲ್ಯಾಣಮಂಟಪಗಳಲ್ಲಿ ಆಗುತ್ತವೆ. ವಧೂವರರ ಮನೆಗಳಲ್ಲಿಯೇ ಕೆಲವು ಪೂರ್ವಭಾವೀ ಶಾಸ್ತ್ರಗಳನ್ನು ಮುಗಿಸಿಕೊಂಡು ವಿವಾಹದ ದಿನ ಮುಂಜಾನೆ ಮದುವೆ ಮನೆಗೆ ಬಂದು ಧಾರೆಶಾಸ್ತ್ರ ಮಾಡುವುದು ಈ ಪ್ರಾಂತ್ಯದಲ್ಲಿ ಕಂಡುಬರುವ ಪದ್ಧತಿಯಾಗಿದೆ. ತೀರಾ ಕೆಲವು ವ್ಯತ್ಯಾಸಗಳನ್ನು ಬಿಟ್ಟರೆ ಮುಖ್ಯ ಸಂಪ್ರದಾಯಗಳು ಕರಾವಳಿಯ ಎಲ್ಲಾ ಸಮುದಾಯಗಳಲ್ಲೂ ಸಾಮಾನ್ಯವಾಗಿರುತ್ತವೆ. ಮಾದರಿಗಾಗಿ ಜಿಲ್ಲೆಯ ವಿವಿಧ ಸಮುದಾಯದವರ ಸಾಂಪ್ರದಾಯಿಕ ವಿವಾಹದಲ್ಲಿನ ಕೆಲವೊಂದು ಪದ್ಧತಿಗಳನ್ನು ಇಲ್ಲಿ ನೀಡಲಾಗಿದೆ.

ಪದ್ಮಶಾಲಿಗಳಲ್ಲಿ ವಿವಾಹ ನಿಶ್ಚಯವಾದಾಗಿನಿಂದಲೇ ಹೆಣ್ಣುಮಗಳು ಗಂಡನ ಮನೆಗೆ ಸೇರಿದವಳು ಎಂದು ಭಾವಿಸಲಾಗುತ್ತದೆ. ಆಕೆಗೆ ಮೊದಲಿನಂತೆ ತವರಿನಲ್ಲಿ ಮುಕ್ತ ಅವಕಾಶಗಳು ನಿರ್ಬಂಧವಾಗುತ್ತವೆ. ಕೂಸಾಳುಗಳಲ್ಲಿ ವಧುವಿನ ಸೋದರಮಾವ (ಅಕ್ಕನ ಗಂಡ) ವಿವಾಹದ ಆದ್ಯಂತ ಛತ್ರಿ, ಬೀಸಣಿಗೆ ಹಿಡಿದು ವರನ ಜೊತೆಗೆ ನಿಲ್ಲುವುದರಿಂದ ಆತನಿಗೆ 'ಚತ್ರಿಗಾರ' ಎಂಬ ಹೆಸರು ಬಂದಿದೆ. ಅಲ್ಲದೆ, ವರನಿಗೆ ಸಲ್ಲುವ ವಿಶೇಷ ಗೌರವಗಳು ಈತನಿಗೂ ಸಲ್ಲುತ್ತವೆ. ವಿವಾಹದ ಬಳಿಕ ವಧುವನ್ನು ಆಕೆಯ ಅಣ್ಣ ಅಥವಾ ಸೋದರಮಾವ ಹೆಗಲಮೇಲೆ ಹೊತ್ತಕೊಂಡು ಹೋಗಿ ಗಂಡನ ಮನೆಗೆ ಬಿಟ್ಟುಬರುವುದು ಇವರಲ್ಲಿ ಹಿಂದೆ ಸಾಂಪ್ರದಾಯಿಕ ಪದ್ಧತಿಯಾಗಿದ್ದಿತು. ಮರುವಳಿ ಊಟದಂದು ವಧುವು ವರ ಹಾಗೂ ಭಾವನಿಗೆ ಸಿಹಿ ಊಟ ಬಡಿಸಿ, ತಲೆಗೆ ತುಪ್ಪ ಹಾಕಿ ತಿಕ್ಕುವ, ಸಮ್ಮಾನದೂಟದಂದು ವಧುವಿನ ತಾಯಿಯು ಅಳಿಯನಿಗೆ ಹಾಲು ಕುಡಿಸುವುದೇ ಮೊದಲಾದ ಕೆಲವು ವಿಶೇಷ ಶಾಸ್ತ್ರಗಳು ಕೂಸಾಳುಗಳಲ್ಲಿನ ಸಂಪ್ರದಾಯಗಳೆನಿಸಿವೆ. ಜಾತಿಯ ಗುರಿಕಾರನ ಮಾರ್ಗದರ್ಶನದಂತೆ ವಿವಾಹ ಶಾಸ್ತ್ರಗಳು ನಡೆಯುತ್ತಿದ್ದುದಲ್ಲದೆ, ವಧುವಿಗೆ ಆ ಗುರಿಕಾರನೇ ತಾಳಿಕಟ್ಟುವುದೂ ಹಿಂದೆ ಹಸ್ಲರಲ್ಲಿ ಪದ್ಧತಿಯಾಗಿದ್ದಿತು (ದರ್ಶನ, ೧೯೮೨–೮೩ ಪು.೯೮–೧೦೦).

ಬಂಟರಲ್ಲಿ ವಧು–ವರ, ವರನಿಗೆ ಕೊಡಬೇಕಾದ ವರದಕ್ಷಿಣೆ ಇತ್ಯಾದಿಗಳೆಲ್ಲಾ ಪ್ರಾಥಮಿಕವಾಗಿ ಒಪ್ಪಿಗೆಯಾದ ಮೇಲೆ ನಿಶ್ಚಯ ಶಾಸ್ತ್ರಕ್ಕಾಗಿ ವಧುವಿನ ತಂದೆ, ಮಾವ ಮತ್ತಿತರ ಹಿರಿಯರು ವರನ ಮನೆಗೆ ಬರುತ್ತಾರೆ. ಅಲ್ಲಿ, ವೀಳ್ಯದೊಂದಿಗೆ ಕೊಡುವ ವರದಕ್ಷಿಣೆಯ ಮುಂಗಡವನ್ನು ವರ ಸ್ವೀಕರಿಸಿ, ತನ್ನ ಸೋದರಮಾವನಿಗೆ ನೀಡುವುದು ಪದ್ಧತಿ. ಅಂದೇ ವಿವಾಹದ ದಿನ ಮತ್ತಿತರ ವಿಚಾರಗಳೂ ನಿಶ್ಚಯವಾಗುತ್ತವೆ. ಮಾತೃ ಕುಟುಂಬ ಪದ್ಧತಿಯವರಾದ ಬಂಟರಲ್ಲಿ ಮದುವೆಯ ಬಳಿಕ ಮಗಳನ್ನು ಗಂಡನ ಮನೆಗೆ ಅರ್ಥಾತ್ ತಮ್ಮ ಸಮುದಾಯದಿಂದ ಹೊರಗೆ ಕಳುಹಿಸುವುದು ಪದ್ಧತಿಯಲ್ಲವಾದ್ದರಿಂದ ಇವರಲ್ಲಿ ವರನು ತಾಳಿಕಟ್ಟುವಂತಿಲ್ಲ; ಬದಲಿಗೆ ವಧುವಿನ ತಾಯಿ ಕಡೆಯ ಹಿರಿಯ ಮಹಿಳೆ ವಧುವಿಗೆ ಮುಹೂರ್ತ ಶಾಸ್ತ್ರಕ್ಕೆ ಮೊದಲೇ ವಧುವಿಗೆ ಕರಿಮಣಿ ಕಟ್ಟಬೇಕು. ಹಾಗೆಯೇ, ವಧುವಿನ ತಂದೆತಾಯ್ಗಳು ಧಾರೆ ಎರೆದು ಕನ್ಯಾದಾನ ಮಾಡುವ ಸಂಪ್ರದಾಯವೂ ಇಲ್ಲ. ಅದಕ್ಕಾಗಿ ಪುರೋಹಿತರೂ ಇರುವುದಿಲ್ಲ. ಪುರೋಹಿತರಿಗೆ ಬದಲು ಮಡಿವಾಳಿಗೆ ಇಲ್ಲಿ ಆದ್ಯತೆ. ಆತ ಮುಹೂರ್ತಕ್ಕೆ ಮುನ್ನ ವಧುವಿನ ಮೇಲೆ ಹಾಲನ್ನು ಪ್ರೋಕ್ಷಿಸುವ ಶಾಸ್ತ್ರ ಮಾಡುತ್ತಾರೆ. ವಧೂ–ವರರು ಮುಹೂರ್ತ ಕಂಬದ ಬಳಿಯೇ ತಮ್ಮ ಪಾದಗಳ ಹೆಬ್ಬೆರಳುಗಳನ್ನು ಪರಸ್ಪರ ಸೋಕಿಸಿ, ನೆಲವನ್ನು ಮೂರು ಬಾರಿ ಸ್ಪರ್ಶಿಸಿದರೆ ಭೂದೇವಿಯ ಸಾಕ್ಷಿಯಾಗಿ ಅವರಿಬ್ಬರೂ ಸತಿಪತಿಗಳಾದಂತಾಗುತ್ತದೆ. ಆದರೆ ಈಚೆಗೆ ಈ ಸಂಪ್ರದಾಯಗಳಲ್ಲಿ ಕೆಲವೊಂದು ಬದಲಾವಣೆಗಳೂ ಆಗಿವೆ.

ಇತರರ ಹಾಗೆ ಮೊಗವೀರರಲ್ಲಿಯೂ ವಧುವಿನ ಮನೆಯಲ್ಲಿ ನಿಶ್ಚಯ ಶಾಸ್ತ್ರ ಮಾಡಲಾಗುತ್ತದೆ. ಗುರ್ಕಾರನ ಅನುಮತಿ ಮೇರೆಗೆ ವರನ ಸೋದರಿಯರು ಕನ್ಯೆಗೆ ವಸ್ತ್ರಾಭರಣ ತೊಡಿಸಿ ಅಲಂಕಾರ ಮಾಡುತ್ತಾರೆ. ವಧೂವರರ ಕಡೆಯ ಹಿರಿಯರಿಬ್ಬರು ತಲೆಗೆ ಮುಂಡಾಸು ಸುತ್ತಿಕೊಂಡು ಎದಿರೆದಿರು ನಿಂತು, ಒಬ್ಬರ ಕೈಮೇಲೊಬ್ಬರು ತಟ್ಟುತ್ತಾ ಈ ಸಂಬಂಧ ಮಾಡುವ ಭರವಸೆಯ ಮಾತನ್ನಾಡುತ್ತಾರೆ. ಕನ್ಯೆಗೆ ಅಂದೇ ಕಾಲುಂಗುರ ಧರಿಸುವ ರೂಢಿಯೂ ಇವರಲ್ಲಿದೆ. ಅಲ್ಲದೆ, ವಧುವಿಗೆ ಸೇಸೆ ಇಕ್ಕಿದ ಅಕ್ಕಿಯನ್ನು ವರನ ಕಡೆಯವರು ಕೊಡಿಬಾಳೆಯಲ್ಲಿ ಹಾಕಿಕೊಂಡು ಹೋಗಿ, ಮನೆಯಲ್ಲಿ ಹುಡುಗನ ಮುಂದೆ ತಟ್ಟೆಯಲ್ಲಿ ಈ ಅಕ್ಕಿಯನ್ನು ಇಟ್ಟು, ಆರತಿ ಬೆಳಗುವ, ಮತ್ತು ಆತನ ಕೈ,ಕಾಲು ಬೆರಳಿಗೆ ಉಂಗುರ ತೊಡಿಸುವ ಸಂಪ್ರದಾಯವೂ ಮೊಗವೀರರಲ್ಲಿದೆ. ಹೀಗೆ ಮಾಡಿದರೆ ಅರ್ಧ ಮದುವೆ ಮುಗಿದಂತೆ ಎಂದು ಅವರು ನಂಬುತ್ತಾರೆ.

ಮದುವೆಯಂದು ಬಾವಿಯ ಬಳಿ ಕೊಡ್‌ನೀರ್ ತುಂಬಿಸುವ, ಮದುಮಗನಿಗೆ ಸ್ನಾನ ಮಾಡಿಸುವ (ಬಳ್ ಮೀಸುವುದು) ಶಾಸ್ತ್ರಗಳಾಗುತ್ತವೆ. ಆ ಹೊತ್ತಿಗೆ ವಧುವನ್ನು ಆಕೆಯ ಮನೆಯಿಂದ ಕರೆತರುತ್ತಾರೆ. ವರನ ಸೋದರಿಯರು ಕೊಟ್ಟ ವಸ್ತ್ರಾಭರಣಗಳಿಂದ ವಧುವನ್ನು ಸಿಂಗರಿಸುತ್ತಾರೆ. ಬಳೆಗಾರ್ತಿ ಆಕೆಗೆ ಧಾರೆ ಬಳೆ ತೊಡಿಸುವ ಶಾಸ್ತ್ರ ಮಾಡುತ್ತಾಳೆ. ವಧುವಿನಿಂದ ವರನ ಕಾಲು ತೊಳೆಸಿದ ಬಳಿಕ ಮಂಟಪದಲ್ಲಿ ಇಬ್ಬರನ್ನೂ ನಿಲ್ಲಿಸಿ ಹಾರ ಹಾಕುವ, ಧಾರೆ ಎರೆಯುವ ಮತ್ತು ಕರಿಮಣಿ ಕಟ್ಟುವ ಶಾಸ್ತ್ರಗಳು ನಡೆಯುತ್ತವೆ. ವಧುವಿನ ತಾಯಿ ಮತ್ತು ಸಹೋದರಿಯರು ವರನ ಕೈಯಲ್ಲಿ ಹಣವಿಟ್ಟಾಗ ಆತ ಇವರಿಗೆ ನಮಸ್ಕರಿಸುತ್ತಾನೆ. ಇದನ್ನು ಮಾಯಿದಿಕ್ಕು ಹಣಕೊಡುವುದು ಎಂದು ಕರೆಯಲಾಗುತ್ತದೆ. ವಿವಾಹ ದಿನದ ರಾತ್ರಿಯೇ ಪ್ರಸ್ತದ ಶಾಸ್ತ್ರವನ್ನೂ ಮುಗಿಸುವುದು ಇವರ ಪದ್ಧತಿಯಾಗಿದೆ. ಅಲ್ಲದೆ, ಆ ವರ್ಷದಲ್ಲಿ ಬರುವ ಕೋಟೇಶ್ವರದ ಕೋಟಿಲಿಂಗೇಶ್ವರನ ಜಾತ್ರೆಗೆ ನವದಂಪತಿಗಳು ಮುಂಜಾನೆ ಹೋಗಿ ತೀರ್ಥಸ್ನಾನ ಮಾಡಿ, ಕೊಡಿ (ಕಬ್ಬು) ತೆಗೆದುಕೊಂಡು ಬರುವುದೂ ಮೊಗವೀರರ ಸಂಪ್ರದಾಯವಾಗಿದೆ.

ಬ್ರಾಹ್ಮಣರಲ್ಲಿ ನಾಂದಿಯೊಂದಿಗೆ ವಿವಾಹ ಶಾಸ್ತ್ರಗಳು ಪ್ರಾರಂಭವಾಗುತ್ತವೆ. ನಾಂದಿ ಶಾಸ್ತ್ರ ಆದ ಬಳಿಕ ಯಾವುದೇ ಸೂತಕ ಬಂದರೂ ವಿವಾಹ ಕಾರ್ಯ ನಿಲ್ಲುವುದಿಲ್ಲ. ಮದುವೆ ಮುಹೂರ್ತದಂದು ಮುಂಜಾನೆ ವಧೂವರರನ್ನು ಅವರವರ ಮನೆಯಲ್ಲಿ ದೇವರ ಮುಂದೆ ಕೂರಿಸಿ ಅರಿಸಿನ–ಎಣ್ಣೆ ಶಾಸ್ತ್ರ ಮಾಡುತ್ತಾರೆ. ಬಳಿಕ ಸಾಂಪ್ರದಾಯಿಕ ಉಡುಗೆ–ತೊಡುಗೆಗಳಿಂದ ಅಲಂಕರಿಸುತ್ತಾರೆ.

ಕಲಶ ಕನ್ನಡಿ ಹಿಡಿದ ವರನ ಸಹೋದರಿಯೊಂದಿಗೆ ವರನ ಕಡೆಯ ದಿಬ್ಬಣವು ಮದುವೆ ಮನೆ ಬಳಿ ಬಂದಾಗ, ಕದಲಾರತಿ ಬೆಳಗಿ ಅವರನ್ನು ಒಳಗೆ ಬರಮಾಡಿಕೊಳ್ಳಲಾಗುತ್ತದೆ. ಹಾಗೆ ಬಂದವರಿಗೆ ಬಾಯಾರಿಕೆ ನೀಡಿ ಉಪಚರಿಸಿದ್ದು ಆದಮೇಲೆ ವಧೂವರರ ತಂದೆಯರು ಪುರೋಹಿತರ ಮಾರ್ಗದರ್ಶನದಲ್ಲಿ ಗೋತ್ರ ಕಡಿಯುವುದು ಅಂದರೆ ವಧುವನ್ನು ವರನ ಗೋತ್ರಕ್ಕೆ ಸೇರಿಸುವ ಶಾಸ್ತ್ರ ಮಾಡುತ್ತಾರೆ. ಬಳಿಕ ವಧುವಿನ ತಂದೆ ವರನ ಕಾಲು ತೊಳೆದರೆ, ತಾಯಿಯು ವರನಿಗೆ ಹಾಲುಕೊಡುತ್ತಾಳೆ. ಬಳಿಕ ಅಗ್ನಿ ತರುವ ಕಾರ್ಯ ನಡೆಯುತ್ತದೆ. ಕಾಶೀಯಾತ್ರೆಯ ಬಳಿಕ, ಧಾರೆ ಮುಹೂರ್ತ ಸಮೀಪಿಸಿದ ಹೊತ್ತಿಗೆ ವಧುವಿನ ಸೋದರಮಾವನು ಆಕೆಯನ್ನು ಮಂಟಪಕ್ಕೆ ಕರೆತರುತ್ತಾನೆ. ಪುರೋಹಿತರ ಮಾರ್ಗದರ್ಶನದಂತೆ ಅಂತರ್ಪಟ ಹಿಡಿಯುವುದು, ಧಾರೆ, ಮಾಂಗಲ್ಯಧಾರಣೆ, ಸಪ್ತಪದಿ, ಅರುಂಧತಿ ನಕ್ಷತ್ರ ದರ್ಶನ ಇತ್ಯಾದಿ ವಿಧಿಗಳು ಕ್ರಮವಾಗಿ ನಡೆಯುತ್ತವೆ. ವಿನೋದಕ್ಕಾಗಿ ಹರಿವಾಣದಲ್ಲಿನ ಓಕುಳಿ ನೀರಿನಲ್ಲಿ ಹಾಕಿದ ಉಂಗುರವನ್ನು ನವವಿವಾಹಿತರು ಹುಡುಕುವುದು ಮೊದಲಾದುವು ನಡೆಯುತ್ತವೆ. ಸತಿಪತಿಯರಿಂದ ಪಾಣಿಪಂಚೆಯನ್ನೇ ಬಲೆಯಂತೆ ಬಳಸಿ ಮೀನು ಹಿಡಿಸುವುದೂ ಕೆಲವರಲ್ಲಿ ಉಂಟು. ಇವಲ್ಲದೆ, ಇತರರಲ್ಲಿಯಂತೆ ಹೆಣ್ಣು ಒಪ್ಪಿಸುವುದು, ವರನ ಮನೆಯಲ್ಲಿ ಗೃಹಪ್ರವೇಶ, ಬಾಗಿಲು ತಡೆಯುವುದು ಮೊದಲಾದ ಶಾಸ್ತ್ರಗಳನ್ನು ಸಾಂಪ್ರದಾಯಿಕವಾಗಿ ನಡೆಸಲಾಗುತ್ತದೆ.

ರಾಣೆಯರಲ್ಲಿ ವಧೂವರರ ಮನೆಯವರು ಪರಸ್ಪರ ಸಮ್ಮತಿಸಿದ ಬಳಿಕ ಗಂಡಿನ ಕಡೆಯವರು ತಮ್ಮ ಗುರಿಕಾರನೊಂದಿಗೆ ಹೆಣ್ಣಿನ ಕಡೆಯ ಗುರಿಕಾರನ ಮನೆಗೆ ಬರುತ್ತಾರೆ. ಆತ ದೇವಸ್ಥಾನದಲ್ಲಿ ಜಾತಿಕೂಟ (ಸಭೆ) ಸೇರಿಸುತ್ತಾನೆ. ಜಾತಿ ಮುಖಂಡರ ಸಮಕ್ಷಮದಲ್ಲಿ ಗಂಡಿನವರು ಹೆಣ್ಣಿನವರಿಗೆ ಒಂದು ಉಂಗುರ ಕೊಡುವ ಮೂಲಕ ಹೆಣ್ಣು ಗಂಡಿನ ನಿಕ್ಕಿ (ನಿಷ್ಕರ್ಷೆ) ಮಾಡುತ್ತಾರೆ. ವಿವಾಹದಂದು ಗಂಡಿನ ಮನೆಯಲ್ಲಿ ವರನಿಗೆ ಅವರ ಜಾತಿಯವನೇ ಮುಖಕ್ಷೌರದ ಶಾಸ್ತ್ರ ಮಾಡುತ್ತಾನೆ. ಇದಕ್ಕಾಗಿ ಆತನಿಗೆ ಒಂದು ಕುಡಿಬಾಳೆಯಲ್ಲಿ ಮೂರು ಹಾಸೆ (ಪಾಪು) ಬೆಳ್ತಿಗೆ ಅಕ್ಕಿ, ಒಂದು ರೂಪಾಯಿ, ಒಂದು ಕವಳಿಗೆ ವೀಳ್ಯ, ಒಂದು ಅಡಕೆಯನ್ನು ಮರ್ಯಾದೆಯಾಗಿ ನೀಡಲಾಗುತ್ತದೆ. ವರನ ದಿಬ್ಬಣ ವಧುವಿನ ಮನೆಗೆ (ವಿವಾಹ ಮಂಟಪಕ್ಕೆ) ಬರುವ ಹೊತ್ತಿಗೆ ವಧುವಿನ ಸಿಂಗಾರ ಮಾಡುತ್ತಾರೆ. ದೇವರಕೋಣೆಯಿಂದ ಆಕೆಯ ಅಣ್ಣನೇ ಆಕೆಯನ್ನು ಧಾರೆಮಂಟಪಕ್ಕೆ ಕರೆತರುತ್ತಾನೆ. ಇವರಲ್ಲಿ 'ಜಾತಿಬಟ್ಟ' ರಿಗೆ ಜಾತಿಯವರೇ ಸ್ನಾನ ಮಾಡಿಸಿ, ಪಟ್ಟೆ ಉಡಿಸಿ, ಜನಿವಾರ ಹಾಕುತ್ತಾರೆ. ಈ ಭಟ್ಟರು ವಧೂವರರಿಗೆ ಹಾಲಿನ ಧಾರೆ ಎರೆವ ಶಾಸ್ತ್ರ ಮಾಡುತ್ತಾರೆ. ವಿವಾಹದ ಮಾರನೆಯ ದಿನ ಮರುಶಾಸ್ತ್ರ ನಡೆಯುತ್ತದೆ.

ಮೇರರಲ್ಲಿ ಹಿಂದೆ ಮದುವೆ ಕಾರ್ಯ ಒಂದೇ ದಿನದಲ್ಲಿ ಮುಗಿಯುತ್ತಿತ್ತು. ವಧುವಿನ ಮನೆಗೆ ಸಂಜೆ ದಿಬ್ಬಣ ಬಂದು, ಬೆಳಗಿನ ಜಾವ ಧಾರೆ ಮುಹೂರ್ತ ಆಗಿ, ಬೆಳಿಗ್ಗೆ ಊಟ, ಸಂಜೆ ಸಮ್ಮಾನದ ಊಟ ಆಗಿ, ವಧುವನ್ನು ಗಂಡಿನ ಮನೆಗೆ ಕಳುಹಿಸಿದರೆ ಮದುವೆ ಮುಗಿದಂತಾಗುತ್ತಿತ್ತು. ಇವರ ವೈವಾಹಿಕ ವಿಧಿಗಳೂ ಸ್ಥಳೀಯ ವಿಶೇಷಗಳನ್ನೊಳಗೊಂಡು ಅಭ್ಯಾಸನೀಯವಾಗಿವೆ. ವರನ ಮನೆಯಲ್ಲಿಯೇ ಸಂಜೆ ಊಟ ಮುಗಿಸಿ, ದಿಬ್ಬಣ ಬಂದಾಗ ವಧುವಿನ ಮನೆಯವರು ಎದುರುಗೊಂಡು ಸ್ವಾಸೆ ಹಾಕಿ, ಒಳಗೆ ಕೂರಿಸಿ ಆಸರ ಕೊಡುತ್ತಾರೆ. ಬಳಿಕ ವಧುವಿಗೆ ಬಳು ಮೀಯಿಸುವ ಶಾಸ್ತ್ರದ ಅಂಗವಾಗಿ ಆಕೆಯನ್ನು ತುಳಸಿಕಟ್ಟೆ ಬುಡದಲ್ಲಿ ಕೂರಿಸಿ, ಮುಂದುಗಡೆ ನೀರು ತುಂಬಿದ ಐದು ತಂಬಿಗೆಗಳನ್ನು (ಬಾಯಿಗೆ ಹಲಸು ಮತ್ತು ಮಾವಿನ ತುಂಡಿಗೆ (ಎಲೆಗಳ ಗೊಂಚಲು)ಗಳನ್ನು ಇರಿಸುತ್ತಾರೆ) ಇಡುತ್ತಾರೆ. ಗಂಡಿನ ಕಡೆಯ ಒಬ್ಬರು ಒಂದು ತಂಬಿಗೆ ನೀರು ಹಾಕಿದ ಮೇಲೆ, ಹೆಣ್ಣಿನವರು ಉಳಿದ ತಂಬಿಗೆಗಳ ನೀರನ್ನು – ಮಂಡಿಗಳು ಹಾಗೂ ಭುಜದ ಮೇಲೆ ಸೇಸೆ ಇಟ್ಟ ರೀತಿಯಲ್ಲಿ ಆಕೆಯ ಮೇಲೆ ಹಾಕುತ್ತಾರೆ. ಆಮೇಲೆ ಸ್ನಾನ ಮಾಡಿಸುತ್ತಾರೆ. ಗಂಡಿನವರೇ ಆಕೆಯ ಮಂಡೆಕಟ್ಟಿ (ತಲೆಬಾಚಿ, ಹೂಮುಡಿಸಿ), ತಾವು ತಂದ ಸೀರೆ ಉಡಿಸುತ್ತಾರೆ. ಮನೆ ಒಳಗೆ ರಂಗೋಲಿ ಹಾಕಿ, ಮಣೆ ಇಟ್ಟು ಅದರ ಮೇಲೆ ವಧೂವರರನ್ನು ಕುಳ್ಳಿರಿಸಿ, ಸೇಸೆ ಇಟ್ಟು, ತಾಳಿಕಟ್ಟಿಸಿ, ಧಾರೆ ಎರೆಯುತ್ತಾರೆ. ನೀರು ತುಂಬಿದ ತಂಬಿಗೆ ಬಾಯಿಗೆ ತೆಂಗಿನಕಾಯಿ ಅಡ್ಡ ಇರಿಸಿ, ಧಾರೆ ಮಾಡುವುದು ಇವರ ಪದ್ಧತಿ. ಹೆಣ್ಣಿನ ತಂದೆ–ತಾಯಿ ಮಾತ್ರ ಧಾರೆ ಎರೆಯುತ್ತಾರೆ.

ಕುಡುಬಿಯರಲ್ಲಿ ಸೋದರಿಕೆಯಲ್ಲಿಯೇ ಸಂಬಂಧ ಮಾಡುವುದು ಹಿಂದಿನ ಪದ್ಧತಿಯಾಗಿದ್ದಿತು. ಅಂಥಾ ಸಂದರ್ಭದಲ್ಲಿ ಹೆಣ್ಣು ಕೇಳಲು ವರನ ತಾಯಿಯೇ ಹೋಗುವುದೂ ಪದ್ಧತಿಯಾಗಿದ್ದಿತು. ಹೊಸ ಸಂಬಂಧವಾದಲ್ಲಿ ವರನ ತಂದೆ, ಸೋದರಮಾವ, ಊರ ಬುದ್ಯಂತ ಹಾಗೂ ಇನ್ನಿಬ್ಬರು ಹೆಣ್ಣಿನ ಮನೆಗೆ ಹೋಗುತ್ತಾರೆ. ಆಗ ತಾಯಿ ಹೋಗುವ ಪದ್ಧತಿ ಇಲ್ಲ. ಎರಡೂ ಕಡೆಯವರು ಒಪ್ಪಿ, ಮದುವೆ ದಿನ ನಿಶ್ಚಯವಾದ ಮೇಲೆ, ವರನ ಕಡೆಯವನೊಬ್ಬನು 'ರಾಯ್‌ಬರಿ'ಯಾಗಿ ನಿಗದಿಯಾಗಿ, ಮುಂದೆ ಅವನ ಮಾರ್ಗದರ್ಶನದಲ್ಲಿ ವಿವಾಹಕಾರ್ಯಗಳು ನೆರವೇರುತ್ತವೆ. ಮದುವೆಯ ಹಿಂದಿನ ದಿನ ಚಪ್ಪರದ ಶಾಸ್ತ್ರದಂದು ಕ್ಷೌರಿಕನು ವರನಿಗೆ ಕ್ಷೌರ ಮಾಡುತ್ತಾನೆ. ಬಳಿಕ ಎಣ್ಣೆ–ಸೀಗೆಕಾಯಿ ಸ್ನಾನ ಮಾಡಿಸುತ್ತಾರೆ. ಸಂಜೆಗೆ ರಾಯ್‌ಬರಿ, ವರನ ತಂದೆ, ಬುದ್ಯಂತ ಮತ್ತಿತರರು ಐದು ಸೀರೆ, ಕಟ್‌ಕರಿಮಣಿ, ಎಲೆ–ಅಡಕೆ, ಸುಣ್ಣ, ಓಲೆ, ಬಾಚಣಿಗೆ, ಹೂವು, ಕುಂಕುಮಾದಿಗಳೊಂದಿಗೆ ವಧುವಿನ ಮನೆಗೆ ಹೋಗಿ ನಂಬಿಗೆ ಶಾಸ್ತ್ರ ಮಾಡುತ್ತಾರೆ. ಮರುದಿನ ಮುಂಜಾನೆ ವಧುವನ್ನು ಧಾರೆಸೀರೆ, ರವಿಕೆ, ಬಾಸಿಂಗ ಇತ್ಯಾದಿಗಳಿಂದ ಅಲಂಕರಿಸುತ್ತಾರೆ. ಕಟ್‌ಕರಿಮಣಿಯನ್ನು ಆಗಲೇ ಆಕೆಗೆ ಕಟ್ಟಲಾಗುತ್ತದೆ. ಬಳಿಕ ಹೊಸ್ತಿಲ ಒಳಭಾಗದಲ್ಲಿ

ನಿಂತ ವಧುವಿನ ಕೈಬಳೆಯೊಂದನ್ನು ಒಡೆಯುವ, ಆಕೆಯ ಒಂದು ತಲೆಗೂದಲನ್ನು ಕಿತ್ತು, ವೀಳ್ಯದೆಲೆಯನ್ನು ಸೀಳಿಹಾಕುವ ಶಾಸ್ತ್ರವನ್ನು ಹೊಸ್ತಿಲ ಈಚೆ ಪಕ್ಕ ನಿಂತ ವರನ ತಂದೆ ಮಾಡುತ್ತಾನೆ. ಹೊಸ್ತಿಲ ಮೇಲೆ ಇರಿಸಿದ ಹಣತೆಯನ್ನು ಆರಿಸಿ, ವಧು ತವರು ಮನೆಯಿಂದ ಈಚೆ ಬರುತ್ತಾಳೆ.

ವಧುವಿನ ದಿಬ್ಬಣ ವರನ ಮನೆ ಹತ್ತಿರದ ಗದ್ದೆಗೆ ಬಂದು ನಿಂತಾಗ ವರನ ಕಡೆಯವರು ಸಾಂಪ್ರದಾಯಿಕವಾಗಿ ಸ್ವಾಗತಿಸಿ, ತೋರಣಕ್ಕೆ ಕರೆತರುತ್ತಾರೆ. ಬಳಿಕ ವರನನ್ನು ಸಾಂಪ್ರದಾಯಿಕ ಉಡುಗೆ–ತೊಡುಗೆಗಳಿಂದ ಅಲಂಕರಿಸಲಾಗುತ್ತದೆ. ಆಮೇಲೆ ಆತ ಮಡಿವಾಳಿಯು ಹಾಸಿದ ನಡೆಹಾಸಿನ ಮೇಲೆ ನಡೆದು ವಧುವಿನ ಕೈ ಹಿಡಿದು ಬಾಳೆಮಂಟಪಕ್ಕೆ ಕರೆತರುತ್ತಾನೆ. ಅಲ್ಲಿ ವರನನ್ನು ಅಕ್ಕಿಮುಡಿಯ ಮೇಲೆ, ವಧುವನ್ನು ಬತ್ತದ ಮುಡಿಯ ಮೇಲೆ ಕುಳ್ಳಿರಿಸುತ್ತಾರೆ. ಅಲ್ಲಿ ವರನ ತಾಯಿ, ತಂದೆ ವಧೂವರರ ಕಾಲು ತೊಳೆಯುವುದು, ವಧೂವರರು ಹಾಗೂ ವರನ ತಾಯಿತಂದೆಯರು ಪರಸ್ಪರ ಕಂಕಣ ಕಟ್ಟುವುದು ನಡೆಯುತ್ತದೆ. ವಧೂವರರು ಕೈಹಿಡಿದು ಕುಳಿತಾಗ ನೂಲುಡಿಕೆ ಶಾಸ್ತ್ರ ಮಾಡಲಾಗುತ್ತದೆ. ಅಂದರೆ, ವರನ ಕಾಲಿನಿಂದ ಪ್ರಾರಂಭಿಸಿ ಅವನ ತಲೆ ಹಾಗೂ ವಧುವಿನ ತಲೆಯ ಭಾಗದಿಂದ ಹಾದು, ಆಕೆಯ ಕಾಲಿಗೆ ಬರುವಂತೆ ಒಂದು ನೂಲನ್ನು ಕಟ್ಟಲಾಗುತ್ತದೆ. ಅದಾದ ಮೇಲೆ ರಾಯ್‌ಬರಿ ಹಾಗೂ ಬಂಧುಗಳ ಒಪ್ಪಿಗೆ ಪಡೆದು ವರನ ತಂದೆಯು ಕಳಶದ ನೀರಿನಿಂದ ಧಾರೆ ಎರೆದು ಆಕೆಯನ್ನು ಸೊಸೆಯನ್ನಾಗಿ ಮಾಡಿಕೊಳ್ಳುತ್ತಾನೆ. ವಧುವಿನ ತಾಯ್ತಂದೆಯರು ಸ್ವತ: ಧಾರೆ ಎರೆದುಕೊಡುವ ಪದ್ಧತಿ ಇವರಲ್ಲಿ ಇಲ್ಲ.

ವಿವಾಹದ ಆನಂತರದ ದಿನಗಳಲ್ಲಿ ಮರುಸೇಸೆ, ಮೂರನೇ ದಿನಕ್ಕೆ ಸಮ್ಮಾನದೂಟ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ. ಮರುಸೇಸೆ ಆದ ಬಳಿಕ ನೀರು ತುಂಬಿದ ಮರಿಗೆಯಲ್ಲಿನ ಉಂಗುರ ಹುಡುಕುವ ಅಥವಾ ಅದರಲ್ಲಿ ಹಾಕಿದ ಕಾಣೆಮೀನನ್ನು ವಧೂವರರು ಹಿಡಿಯುವುದೇ ಮೊದಲಾದ ವಿನೋದಕ್ರೀಡೆಗಳು ನಡೆಯುತ್ತವೆ. ವಧೂವರರು ವಂಡಾರು ಕಂಬಳಗದ್ದೆಗೆ ಸುತ್ತಕ್ಕಿ ಚೆಲ್ಲುವುದು, ವರನು ಕಂಬಳದಲ್ಲಿ ಗೋರಿ ಮೆಟ್ಟುವುದು ಇತ್ಯಾದಿ ವಿಧಿಗಳು ನಡೆಸಿದ ಮೇಲೆಯೇ ಅವರಿಗೆ (ಗಂಡನ ಮನೆಯಲ್ಲಿ) ನಿಷೇಕ ಆಗಬೇಕೆಂಬ ನಂಬಿಕೆಯೂ ಕುಡುಬಿಯರಲ್ಲಿದೆ (ಬೆಳ್ಳಿಮಿನುಗು, ಪು ೧೦೯–೧೧೨).

ಜೈನರಲ್ಲಿ ಅತ್ತಿಕೊಂಬೆ ಇರಿಸಿ ಪೂಜಿಸುವ ಸ್ತಂಭ ಮುಹೂರ್ತದಿಂದ ಪ್ರಾರಂಭಿಸಿ ತಾಳಿಬಂಧಿ, ತೋರಣ ಮುಹೂರ್ತ, ಧಾರೆ, ಹೋಮ, ನಾಗಬಲಿ ಮೊದಲಾದ ವಿವಾಹವಿಧಿಗಳನ್ನು ಸಾಂಪ್ರದಾಯಿಕವಾಗಿ ನೆರವೇರಿಸಲಾಗುತ್ತದೆ. ನಾಗಬಲಿ ಶಾಸ್ತ್ರದ ಅಂಗವಾಗಿ ಮಂಗಲ ಸ್ನಾನ ಮಾಡಿದ ವಧೂವರರು ಬಸದಿಗೆ ಹೋಗಿ ಪೂಜಾಕಾರ್ಯ ಮುಗಿಸಿಕೊಂಡು ಬಳಿಕ ಲಗ್ನಮಂಟಪಕ್ಕೆ ಬರುತ್ತಾರೆ. ಜೈನಪುರೋಹಿತರು (ಇಂದ್ರರು) ಅಲ್ಲಿ ಮಂಡಲ ಬರೆದು ಅಷ್ಟದಳಕಮಲದ ಚಿತ್ರ ಬಿಡಿಸಿ, ಅದನ್ನು ಸಪ್ತಧಾನ್ಯ, ದರ್ಭೆ, ಪಂಚರತ್ನ ಮೊದಲಾದವುಗಳಿಂದ ಅಲಂಕರಿಸುತ್ತಾರೆ. ವಧುವಿನ ತಾಯಿಯು ಅಷ್ಟದಿಕ್ಪಾಲರನ್ನೂ, ತಕ್ಷಕ, ಚಕ್ರಿ, ಅನಂತ, ವಾಸುಕಿ ಮೊದಲಾದ ನಾಗದೇವತೆಗಳನ್ನೂ ಪೂಜಿಸಿ, ಸಂತಾನ ಸಮೃದ್ಧಿಗಳನ್ನು ಪ್ರಾರ್ಥಿಸುತ್ತಾಳೆ. ಮಂಟಪದ ದಕ್ಷಿಣ ದ್ವಾರದಲ್ಲಿ ವಧುವಿನ ಗೋತ್ರ–ಸೂತ್ರಾದಿಗಳನ್ನೂ, ಉತ್ತರ ದ್ವಾರದಲ್ಲಿ ವರನ ಗೋತ್ರ–ಸೂತ್ರಾದಿಗಳನ್ನೂ ಬರೆದಿರುತ್ತಾರೆ. ಅಲ್ಲಿ ವಧುವಿನ ಅಪೇಕ್ಷೆಯಂತೆ ವರನು ಆಕೆಯ ಕೊರಳಿಗೆ ಸಂಬಂಧಮಾಲೆ ಹಾಕಿ, ಆಕೆಯ ಕೈಹಿಡಿದು ತನ್ನ ವಂಶಗೋತ್ರಕ್ಕೆ ಆಕೆಯನ್ನು ಕರೆದುಕೊಳ್ಳುತ್ತಾನೆ. ಈ ನಾಗಬಲಿ ಆಚರಣೆಯು ಜಿಲ್ಲೆಯ ಜೈನರು ನಾಗಾರಾಧನೆಯನ್ನು ಒಪ್ಪಿಕೊಂಡದ್ದರ ಪ್ರತೀಕವಾಗಿರುವಂತೆ, ವರನ ವಂಶಕ್ಕೆ (ಕುಟುಂಬಕ್ಕೆ) ವಧುವು ಪಾದಾರ್ಪಣೆ ಮಾಡಿದ್ದರ ಸಂಕೇತವೂ ಆಗುತ್ತದೆ.

ಮುಸ್ಲಿಮರಲ್ಲಿ ವಧುವನ್ನು ಮಲ್ಲಿಗೆಹೂವಿನಿಂದ ಅಲಂಕರಿಸುವ ಮೂಲಕ ಗಂಡಿನವರು ತಮ್ಮ ಒಪ್ಪಿಗೆ ಸೂಚಿಸುವ ಕ್ರಮವಿದೆ. ಎರಡೂ ಕಡೆಯವರು ಸೇರಿ ದೂವಾ ಪ್ರಾರ್ಥನೆ ಮಾಡುತ್ತಾರೆ. ಮದುವೆಯ ಹಿಂದಿನ ರಾತ್ರಿ ವಧುವಿಗೆ ಶಾಸ್ತ್ರೋಕ್ತವಾಗಿ ಸ್ನಾನ ಮಾಡಿಸಿ, ಸಾಮಾನ್ಯವಾಗಿ ಬಿಳಿ ಸೀರೆ ಉಡಿಸುತ್ತಾರೆ. ತವರಿನಲ್ಲಿಯೇ ತಾಯಿಯ ಸೋದರ ಮೊದಲು ವಧುವಿಗೆ ಮದರಂಗಿ (ಮೈಲಾಂಜಿ) ಇಡುವ ಶಾಸ್ತ್ರ ಮಾಡುತ್ತಾನೆ. ಬಳಿಕ ಸೋಬಾನೆ ಹಾಡಿನೊಂದಿಗೆ ಉಳಿದವರು ಮದರಂಗಿ ಇಡುವ ಶಾಸ್ತ್ರ ಮಾಡುತ್ತಾರೆ.

ವಿವಾಹ ದಿನದ ಬೆಳಿಗ್ಗೆ ಮುತ್ತೈದೆಯರು ಕ್ರಮಬದ್ಧವಾಗಿ ವಧು, ವರರಿಗೆ ಧಾರೆ ನೀರಿನ ಸ್ನಾನ ಮಾಡಿಸುತ್ತಾರೆ. ವಧುವಿಗೆ ಮೆಹರ್ ಕೊಡುವುದು, ವಧೂವರರ ಒಪ್ಪಿಗೆ ಪಡೆಯುವುದು, ಸಾಕ್ಷಿಗಳ ಸಮ್ಮುಖದಲ್ಲಿ ರಿಜಿಸ್ಟರಿನಲ್ಲಿ ದಾಖಲಿಸುವುದು ಮೊದಲಾದ ಶಾಸ್ತ್ರಗಳೂ ಕ್ರಮಬದ್ಧವಾಗಿ ನಡೆಯುತ್ತವೆ. ಬ್ಯಾರಿಗಳಲ್ಲಿ ವಧು ಒಪ್ಪಿಗೆಯಾದಲ್ಲಿ ಆಕೆಗೆ ಉಂಗುರ ತೊಡಿಸುವ ಶಾಸ್ತ್ರ ಮಾಡಲಾಗುತ್ತದೆ. ಇವರಲ್ಲಿ ನಿಶ್ಚಿತಾರ್ಥವನ್ನು ಕುರಿ ಎಂದು ಕರೆಯುತ್ತಾರೆ. ವಿವಾಹದಂದು ವರನಿಗೆ ಕ್ಷೌರ ಮಾಡುವ ಕ್ಷೌರಿಕನಿಗೆ ಅಕ್ಕಿ, ವಸ್ತ್ರ ಹಾಗೂ ಹಣವನ್ನು ನೀಡಲಾಗುತ್ತದೆ. ವಿವಾಹದ ಹಿಂದಿನ ದಿನ ವಧುವಿಗೆ ಮಯಿಲಾಂಜಿ ಪಾಟ್ಟ್‌ಗಳನ್ನು ಹಾಡುತ್ತಾ ಮದರಂಗಿ ಇಡುವ ಶಾಸ್ತ್ರ ಮಾಡುತ್ತಾರೆ. ಮುಂಜಾನೆ ಗಂಧ, ಅರಿಸಿನ, ತೆಂಗಿನಕಾಯಿ ಹಾಲು ಅರೆದು, ಅವನ್ನು ಮದುಮಗಳ ಮೈಗೆ ಹಚ್ಚುತ್ತಾರೆ. ಸ್ನಾನದ ಬಳಿಕ ಬಿಳಿಸೀರೆ, ಕುಪ್ಪಸ ಉಡಿಸಿ, ತಲೆಗೆ ಮಲ್ಲಿಗೆ ಹೂವಿನ ಜಲ್ಲಿ ಹಾಕಿ, ಆಭರಣಗಳಿಂದ ಅಲಂಕರಿಸುತ್ತಾರೆ. ವಿವಾಹಕ್ಕೆ ಮುನ್ನ ವಧೂವರರು ನೇರವಾಗಿ ಪರಸ್ಪರ ಮುಖ ನೋಡಬಾರದೆಂಬ ಪದ್ಧತಿ ಇರುವುದರಿಂದ ಬ್ಯಾರಿಗಳು ವಧುವಿನ ಮನೆಯ ಕೋಣೆಯಲ್ಲಿ ಅಲಂಕರಿಸಿ ಕೂರಿಸಿದ ವಧುವನ್ನು ವರನ ಕಡೆಯವರು ತೆಳುಪರದೆಯ ಮೂಲಕವೇ ನೋಡಬೇಕಾಗುತ್ತದೆ. ಗಂಡಿನ ಮನೆಯಲ್ಲಿಯೇ ವಿವಾಹ ಆಗುವುದು ಪದ್ಧತಿ. ವಧುವಿನ ತಂದೆ ಹಾಗೂ ವರ ಪರಸ್ಪರ ಕೈಹಿಡಿದು ನಿಂತು ಮಗಳನ್ನು ಕೊಡುವ ಹಾಗೂ ಮದುವೆ ಮಾಡಿಕೊಳ್ಳುವ ಬಗ್ಗೆ ಮಾತು ಕೊಡುತ್ತಾರೆ. ಅದಾದ ಮೇಲೆಯೇ ವಧು ಇರುವಲ್ಲಿ ಆಕೆಯನ್ನು ಅಲಂಕರಿಸುವುದು. ಆ ಬಳಿಕ ವರನ ಸೋದರಿಯರು ಬಂದು ವಧುವಿಗೆ ಆಭರಣ ತೊಡಿಸುತ್ತಾರೆ. ವರನು ಬಲಗಾಲಿಟ್ಟು ಒಳ ಬಂದು ವಧುವಿನ ಕೊರಳಿಗೆ ಮಾಲೆ ಅಥವಾ ಚಿನ್ನದ ಸರ ಹಾಕುವುದು ಮೊದಲಾದ ಶಾಸ್ತ್ರಗಳು ನಡೆಯುತ್ತವೆ.

**ಕೈದಪ್ರಸ್ತ ಅಥವಾ 'ನಾಯರಿ' ಮಾಡುವುದು :** ಒಮ್ಮೆಗೆ ಐದು ಮಂದಿ ಯುವಕರಿಗೆ ಸಾಮೂಹಿಕವಾಗಿ ವಿವಾಹ ಮಾಡುವ ಪದ್ಧತಿ ನಾಯರಿಗಳದು. ಸಾಮುದಾಯಿಕ ಒಗ್ಗಟ್ಟು ಹಾಗೂ ಆರ್ಥಿಕ ಉಳಿತಾಯದ ಆಶಯದಿಂದ ಅವರು ಈ ಕ್ರಮ ಅನುಸರಿಸುತ್ತಾರೆ. ಹೀಗಾಗಿ ಕೆಲವೊಮ್ಮೆ ಅವರಲ್ಲಿ ನಾಲ್ಕೈದು ವರ್ಷಗಳಿಗೊಮ್ಮೆ ವಿವಾಹ ಕಾರ್ಯ ಏರ್ಪಾಡಾಗುತ್ತಿದ್ದಿತು. ನಾಯರಿ ತರುಣನು ಗೃಹಸ್ಥನಾಗುವ ಮೊದಲು ಆತನಿಗೆ ಕೈದಪ್ರಸ್ತ ಅಥವಾ 'ನಾಯರಿ' ಮಾಡುವ ವಿಧಿಯು ಆಗಲೇಬೇಕೆಂಬ ಕಟ್ಟುಪಾಡು ಇದೆ. ನಾಯರಿ ಗುರುಗಳು ಹಾಗೂ ಕುಲದೇವಿ ಸ್ಥಾನದ ಬ್ರಾಹ್ಮಣ ಗುರುಗಳು ಈ ಧಾರ್ಮಿಕ ವಿಧಿಗಳನ್ನು ನಡೆಸಿಕೊಡುತ್ತಾರೆ. ಇದರ ಅಂಗವಾಗಿ ನಿಶ್ಚಿತವಾದ ಗರಡಿ (ದೇವಸ್ಥಾನ)ಯಲ್ಲಿ ಆ ತರುಣರಿಗೆ ಕ್ರಮವಾಗಿ ದಿನ ನಿಶ್ಚಯ ಮದುವೆ', ಚವಲಕಾರ್ಯ, ತಾಯಂದಿರಿಂದ ಕೊಡನೀರು ಸ್ನಾನ, ಗುರುಗಳಿಂದ ಬಂದಿಕೋಲು ಆಟ ಮತ್ತು ಬಿಲ್ಲುಬಾಣಗಳನ್ನು ಕೊಟ್ಟು ಜುಟ್ಟುಕಟ್ಟುವ ವಿಧಿಗಳು ಜರುಗುತ್ತವೆ. ಅದಾದ ಮೇಲೆ ಬ್ರಾಹ್ಮಣ ಗುರುಗಳಿಂದ ಜನಿವಾರ ಧಾರಣೆ, ದೇವಿ ಸನ್ನಿಧಿಯಲ್ಲಿ ಹೂವಿನ ಪೂಜೆ, ಕತ್ತಿ ಎತ್ತುವ ವಿಧಿಗಳು ನಡೆಯುತ್ತವೆ. ಸಮಾಜದ ಹಿರಿಯರು ಆ ತರುಣರನ್ನು 'ನಾಯರಿ' ಎಂಬುದಾಗಿ ಆಶೀರ್ವದಿಸುವುದೂ ವಿಧ್ಯುಕ್ತವಾಗಿ ಜರುಗುತ್ತದೆ. ಕೊನೆಯಲ್ಲಿ ಮಾರ್ಗ ಮಧ್ಯದ ಅನುಕೂಲ ಸ್ಥಳದಲ್ಲಿ ಕಡುಬಿನ ಕಾಳಗ ನಡೆದು, ದೇವಸ್ಥಾನದ ತೀರ್ಥಕೆರೆಯಲ್ಲಿ ಜನಿವಾರ ವಿಸರ್ಜನೆ ಮಾಡಿ ಸ್ನಾನ ಮಾಡುವ ಕಾರ್ಯ ಆಗುತ್ತದೆ. ಮದುವೆ ಮನೆಗೆ ಹಿಂದಿರುಗುವ ದಾರಿಯಲ್ಲಿ ತಾಯಿಯಿಂದ ಓಕುಳಿ ನಿವಾಳಿಸಿ ಚೆಲ್ಲುವ ವಿಧಿ ನಡೆಯುತ್ತದೆ. ಕೊನೆಯಲ್ಲಿ ಆ ತರುಣರು ತಮ್ಮಲ್ಲಿನ ಖಡ್ಗ, ಬಿಲ್ಲುಬಾಣ, ಉಡುಗೆಪಂಚೆ ಇತ್ಯಾದಿಗಳನ್ನು ವಿಸರ್ಜಿಸಿ, ಪೂಜೆ ಮಾಡುತ್ತಾರೆ. 'ನಾಯರಿ' ಆದ ತರುಣನಿಗೆ ಅದೇ ದಿನ ರಾತ್ರಿ ಅಥವಾ ಮರುದಿನ ಮೊದಲೇ ನಿಶ್ಚಯವಾದ ಕನ್ಯೆಯೊಂದಿಗೆ ವಿವಾಹ ಮಾಡುತ್ತಾರೆ. ಹೀಗೆ, ಈ ಕೈದಪ್ರಸ್ತ ಆಚರಣೆಗಳು ಹಿಂದೆ ದಿನಕ್ಕೊಂದರಂತೆ ಐದು ದಿನಗಳವರೆಗೆ ನಡೆಯುತ್ತಿದ್ದದ್ದು, ಈಗ ಒಂದೇ ದಿನಕ್ಕೆ ಎಲ್ಲಾ ವಿಧಿಗಳೂ ಜರುಗುವಂತಾಗಿದೆ (ವಿವರಕ್ಕೆ: ಉಡುಪಿ ಜಿಲ್ಲೆಯ ನಾಯರಿ ಜನಾಂಗದ ಕಿರುಪರಿಚಯ).

ವಿಶೇಷ ಆಶಯದ ಇಂತಹ ಹಲವಾರು ನಂಬಿಕೆ, ಶಾಸ್ತ್ರಗಳು ಸಾಂಪ್ರದಾಯಿಕ ವಿವಾಹ ಪದ್ಧತಿಯಲ್ಲಿ ಕಾಣಬರುತ್ತವೆ. ಪುನರ್ ವಿವಾಹಗಳು ಹೆಚ್ಚಿನ ಶಾಸ್ತ್ರಾಚರಣೆಗಳಿರದೆ ನಡೆಯುತ್ತವೆ. ಈಚೆಗೆ ಸರಳ ವಿವಾಹ, ಸಾಮೂಹಿಕ ವಿವಾಹಗಳು ಅಲ್ಲಲ್ಲಿ ನಡೆಯುವುದುಂಟು. ಸರ್ಕಾರವು ಅಂತರ್ಜಾತೀಯ ವಿವಾಹಕ್ಕೆ

ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಇಂತಹ ವಿವಾಹಗಳ ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ಇಪ್ಪತ್ತೈದು ಸಾವಿರ ರೂ.ಗಳ ಪ್ರೋತ್ಸಾಹ ಧನವನ್ನು ನೀಡುತ್ತಿದೆ (ವಿವರಕ್ಕೆ ೧೬ನೇ ಅಧ್ಯಾಯ ನೋಡಿರಿ). ಭಾರತ ಸರ್ಕಾರದ ವಿವಾಹ ಕಾಯ್ದೆಯಂತೆ ಎಲ್ಲಾ ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕಾಗುತ್ತದೆ. ಉಡುಪಿ ಜಿಲ್ಲೆಯ ವಿವಿಧ ಉಪನೋಂದಣಿ ಕಚೇರಿಗಳಲ್ಲಿ ೨೦೦೧ ರಿಂದ ೨೦೦೫ರವರೆಗೆ ನೋಂದಣಿಯಾಗಿರುವ ದತ್ತು ಸ್ವೀಕಾರ ಹಾಗೂ ವಿವಾಹಗಳ ಅಂಕಿ–ಅಂಶಗಳನ್ನು ಕೋಷ್ಟಕ ೩.೧೧ರಲ್ಲಿ ನೀಡಲಾಗಿದೆ.

**ಶವಸಂಸ್ಕಾರ**

ಶವಸಂಸ್ಕಾರದ ಆಶಯಗಳು ಬಹುಮಟ್ಟಿಗೆ ರಾಜ್ಯದ ಎಲ್ಲೆಡೆ ಒಂದೇ ಆಗಿದ್ದರೂ ಸಂಸ್ಕಾರದ ವಿಧಿಕ್ರಿಯೆಗಳು ಮಾತ್ರ ಪ್ರಾದೇಶಿಕ ಹಿನ್ನೆಲೆಯಲ್ಲಿ ಭಿನ್ನವಾಗುವುದು ಸಹಜವಾಗಿದೆ. ಉಡುಪಿ ಜಿಲ್ಲೆಯಲ್ಲಿ ಸಹ ಪ್ರಾದೇಶಿಕ ವಿಶೇಷದ ಹಲವಾರು ನಂಬಿಕೆ–ಸಂಪ್ರದಾಯಗಳು ರೂಢಿಯಲ್ಲಿವೆ. ವಿವಿಧ ಸಮುದಾಯಗಳಲ್ಲಿನ ಇಂತಹ ಕೆಲವು ಮಾದರಿಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ: ವ್ಯಕ್ತಿಯು ನಿಧನನಾದಾಗ ಕೋಲಿನಿಂದ ಮನೆಯ ಬೈಹುಲ್ಲಿನ ಮಾಡು ಅಥವಾ ಹಂಚಿನ ಚಾವಣಿಯಲ್ಲಿ ತುಸು ರಂಧ್ರ ಮಾಡುವುದರಿಂದ ಕಾಲೆ (ಜೀವ) ಹೊರಹೋಗುವುದು ಸುಲಭವಾಗುತ್ತದೆ ಎಂಬ ನಂಬಿಕೆ ಇಲ್ಲಿನವರಲ್ಲಿ ಇದ್ದಿತು. ತಾರಸಿ ಚಾವಣಿಗಳು ಬಂದ ಮೇಲೆ ಈ ನಡವಳಿಕೆ ತಪ್ಪಿಹೋಗಿದೆ.

ಈ ಪ್ರದೇಶದಲ್ಲಿಯೂ ಶವಕ್ಕೆ ಎಣ್ಣೆ, ಸೀಗೇಕಾಯಿ ಹಾಕಿ ಬಿಸಿ ನೀರಿನಿಂದ ಸ್ನಾನ ಮಾಡಿಸಿ, ಹೊಸ ಬಿಳಿ ಬಟ್ಟೆಯನ್ನು ಮೈಗೆ ಹೊದಿಸುತ್ತಾರೆ. ಎಲೆ–ಅಡಕೆ ಕುಟ್ಟಿ ಶವದ ಬಾಯಿಗೆ ಇಡುವ ಪದ್ಧತಿಗಳೂ ಇವೆ. ಮನೆಯ ಹೆಂಗಸರು ಹಾಗೂ ಮಕ್ಕಳು ಸ್ಮಶಾನಕ್ಕೆ ಹೋಗುವುದು ನಿಷಿದ್ಧವಾದ್ದರಿಂದ, ಶವವನ್ನು ಸಂಸ್ಕಾರಕ್ಕೆ ಕೊಂಡುಹೋಗುವ ಮೊದಲು ತುಳಸಿಕೊಡಿಯಿಂದ ಎಡಗೈಲಿ ಶವದ ಬಾಯಿಗೆ ನೀರು ಬಿಡುತ್ತಾರೆ. ಗಂಡಸರೆಲ್ಲಾ ಶವವನ್ನು ಕಾಟದ ಕಟ್ಟಿಗೆಯ ಮೇಲೆ ಮಲಗಿಸಿದ ಬಳಿಕ ನೀರುಬಿಡುತ್ತಾರೆ. ಎರಡೂ ಕೈ ಹಾಗೂ ಕಾಲುಗಳ ಹೆಬ್ಬೆರಳುಗಳನ್ನು ಬಟ್ಟೆಯ ದಾರದಿಂದ ಕಟ್ಟುವ ಪದ್ಧತಿಯಿದೆ. ಹಾಗೆಯೇ, ಮೃತನ ಪತ್ನಿ ಬಾಗಿಲ ದ್ವಾರಬಂಧದಲ್ಲಿ ತೆಂಗಿನಕಾಯಿಯಿಂದ ವೀಳ್ಯ ಗುದ್ದಿ, ಅದನ್ನು ಶವದ ಬಾಯಿಗೆ ಇಡುವ ನಡವಳಿಕೆಯೂ ಇದೆ. ಮೃತನ ಮಗ ಸಿಪ್ಪೆ ಸಹಿತವಾದ ತೆಂಗಿನಕಾಯಿಯನ್ನು ಮನೆಯ ಮುಟ್ಟಿಕಲ್ಲಿಗೆ (ಹೊಸ್ತಿಲು) ಇರಿಸಿ, ಹಾರೆಯಿಂದ ಒಡೆದು, ಶವದ ತಲೆಯ ಭಾಗದಲ್ಲಿ ಸುರಿದ ಭತ್ತದ ಮೇಲೆ ಒಂದು ಹೋಳಿನಲ್ಲಿ, ಕಾಲಕೆಳಗೆ ಸುರಿದ ಭತ್ತದ ಮೇಲೆ ಇನ್ನೊಂದು ಹೋಳಿನಲ್ಲಿ ದೀಪ ಹಚ್ಚಿಡುವ ಪದ್ಧತಿ ಕೆಲವರಲ್ಲಿ ಇದೆ. ಶವ ಮಲಗಿಸಿದ ಜಗಲಿ ಮೇಲೆ ಹಣತೆ ಹಚ್ಚಿಡುವ ಪದ್ಧತಿಯೂ ಇದೆ. ಶವವನ್ನು ಗುರಿಕಾರರ ಸಮ್ಮುಖದಲ್ಲಿ ಬರೀ ನೆಲದ ಮೇಲೆ ಮಲಗಿಸುವುದು ಇಲ್ಲಿನ ಒಂದು ಪದ್ಧತಿ. ಶವಕ್ಕೆ ಅಂಗಳದಲ್ಲಿ ಸ್ನಾನ ಮಾಡಿಸಿದ ಬಳಿಕ ಮೊದಲಿದ್ದ ಸ್ಥಳಕ್ಕೆ ತಂದು, ಬಾಳೆಎಲೆ ಮೇಲೆ ಮಲಗಿಸಿದ ಬಳಿಕ ಭತ್ತಕ್ಕೆ ಬದಲು ಅಕ್ಕಿಯನ್ನು ತಲೆ ಹಾಗೂ ಕಾಲುಗಳ ಭಾಗದಲ್ಲಿ ಸುರಿದು, ಅದರ ಮೇಲೆ ತೆಂಗಿನ ಹೋಳುಗಳನ್ನು ಇರಿಸಿ, ಅದರಲ್ಲಿ ದೀಪ ಉರಿಸುವುದು ಈ ಭಾಗದ ಇನ್ನೊಂದು ವಿಶೇಷವಾಗಿದೆ. ೩, ೫, ೭ ಅಥವಾ ೧೦ನೆಯ ದಿನ ಅಸ್ಥಿ ಸಂಚಯವನ್ನು ಮಾಡಿ ನೆಲದಲ್ಲಿ ಗುಪ್ಪೆಯಾಗಿ ಹೂತು, ಅದರ ಮೇಲೆ ಮಣ್ಣಿನ ದೂಪೆ (ಗುಡ್ಡೆ) ಮಾಡಲಾಗುತ್ತದೆ.

ಮೃತನ ಹಿರಿಯ ಅಥವಾ ಕಿರಿಯ ಮಗ ಕುಂಟಿಗೆ ಹಿಡಿಯಬೇಕು. ಶವಕ್ಕೆ ಅಗ್ನಿ ಸಂಸ್ಕಾರ ಮಾಡಿದ ಮೂರನೇ ದಿನ ಶುದ್ಧ (ಬೂದಿಮುಚ್ಚು) ಮಾಡುತ್ತಾರೆ. ಅಂದು ಕುಂಟಿಗೆ ಹಿಡಿದವ ಹಾಗೂ ಮೃತನ ಮಗ ತಲೆ ಬೋಳಿಸಿಕೊಳ್ಳಬೇಕಾಗುತ್ತದೆ. ಬೊಜ್ಜದ ದಿನ ರಾತ್ರಿ ಮೃತರಿಗೆ ಮಾಂಸಾಹಾರ, ಬಗೆಬಗೆಯ ಸಿಹಿತಿಂಡಿಗಳನ್ನು ಒಳಗೊಂಡ ಅಗೆಲು (ಎಡೆ) ಹಾಕುತ್ತಾರೆ. ೧೬ನೇ ದಿನ ರಾತ್ರಿ ಮೃತರನ್ನು ಒಳಗೆ ಕರೆಯುವ ಕ್ರಮ ಮಾಡುತ್ತಾರೆ (೧೬ರ ಜೊತೆ ಸೇರಿಸುವುದು). ಆಮೇಲೆ ನದಿಯಲ್ಲಿ ಪಿಂಡ ಪ್ರದಾನ ಮಾಡುತ್ತಾರೆ. ಆ ಮುಂದೆ ವರ್ಷಕ್ಕೊಮ್ಮೆ ಮೃತರಿಗೆ ಅಗೆಲು ಹಾಕುವ ಮೂಲಕ ಹಿರಿಯರನ್ನು

ಸ್ಮರಿಸುತ್ತಾರೆ. ದೀಪಾವಳಿಯಲ್ಲಿ ಅಮಾವಾಸ್ಯೆ ದಿನ ಹೆಣ್ಣಿಗೂ, ಅದರ ಮಾರನೇ ದಿನ ಗಂಡಸಿಗೂ ಮುಂಜಾನೆ ನಾಲ್ಕು ಗಂಟೆಯ ಸುಮಾರಿಗೇ ಶವಕ್ಕೆ ಅಗ್ನಿ ಸಂಸ್ಕಾರ ಮಾಡಿದ ಸ್ಥಳ ಹಾಗೂ ಮನೆಯಲ್ಲಿ ಎಲೆಯ ಮೇಲೆ ಅವಲಕ್ಕಿ, ಬೆಲ್ಲ, ಬಾಳೆಹಣ್ಣು, ತುಪ್ಪ, ತೆಂಗಿನ ಕಾಯಿಗಳನ್ನು ಇಟ್ಟು ಅವಲಕ್ಕಿ ಬಡಿಸುವ ವಿಧಿ ಮಾಡುತ್ತಾರೆ. ಮೃತ ಹಿರಿಯರು ಹಾಗೂ ಮಕ್ಕಳ ಆತ್ಮ ತೃಪ್ತಿಗಾಗಿಯೇ ಜನವರಿ ತಿಂಗಳಲ್ಲಿ ಹಾಲಬ್ಬ ಮಾಡುವುದೂ ಉಂಟು. ಅಂದು ಹಂಚಿನ ದೋಸೆ ಮಾಡಿ, ಪಾಯಸಕ್ಕೆ ಹಾಕಿ ಆ ಎಡೆಯನ್ನೂ, ಹೊಸಬಟ್ಟೆಯನ್ನೂ ಇಟ್ಟು ಪಿತೃಗಳನ್ನು ಪೂಜಿಸುತ್ತಾರೆ.

ಕುಡುಬಿಯರಲ್ಲಿ ಶವವನ್ನು ಹೂಳುವುದು ಹಿಂದಿನ ಸಂಪ್ರದಾಯವಾಗಿದ್ದಿತು. ಈಚೆಗೆ ಕೆಲವರು ಸುಡುವ ಕ್ರಮ ಅನುಸರಿಸುತ್ತಿದ್ದಾರೆ. ಹಾಗೆಯೇ, ದಹನ ಮಾಡಿದ ಸ್ಥಳದಲ್ಲಿ ಮೂರನೇ ದಿನದಂದು ತುಳಸಿಗಿಡ ನೆಟ್ಟು, ಬೇಯಿಸಿದ ಅಕ್ಕಿ ಹಾಗೂ ಮೀನಿನ ಎಡೆಯನ್ನು ನೀರಿನೊಂದಿಗೆ ಇಡಲಾಗುತ್ತದೆ. ಅಲ್ಲಿ ಸಂಸ್ಕಾರ ಮಾಡಿದ ಮಗನು ಒಂದು ಸೀಯಾಳವನ್ನು ಒಪ್ಪಿಸುವ ಮೂಲಕ ಮೃತನನ್ನು ಸ್ವರ್ಗಕ್ಕೆ ಕಳುಹಿಸುತ್ತಾನೆಂಬ ನಂಬಿಕೆಯೂ ಅವರಲ್ಲಿದೆ. ೧೧ನೇ ದಿನ ಗಾಡ್ಯ ಅಥವಾ ಪಾತ್ರಿಯನ್ನು ಕರೆಸಿ ಮೃತನ ಸಾವು ಮತ್ತು ಅದರ ಪರಿಣಾಮಗಳನ್ನು ತಿಳಿದು, ಅದಕ್ಕೆ ಅಗತ್ಯವಾದ ಕ್ರಿಯೆಗಳನ್ನು ನಡೆಸುತ್ತಾರೆ. ಮೂರು ತಿಂಗಳ ಬಳಿಕ ಮೃತರನ್ನು ಹಿರಿಯರ ಸಾಲಿಗೆ ಸೇರಿಸುವ ಶಾಸ್ತ್ರ ಮಾಡುತ್ತಾರೆ. ವರ್ಷಕ್ಕೊಮ್ಮೆ ಪಿತೃಪೂಜೆ ಮಾಡುವುದಿದ್ದು, ಅದನ್ನು ಪೊರೊಬ್ ಅಥವಾ ಮಾಳ್ ಎಂದು ಕರೆಯುತ್ತಾರೆ. ಹೆರಿಗೆಯ ಸಂದರ್ಭದಲ್ಲಿ ಮೃತರಾದವರನ್ನು ಗ್ರಾಮದ ಗಡಿಯ ಆಚೆ ಹೂಳುವ ಪದ್ಧತಿಯೂ ಕುಡುಬಿಯರಲ್ಲಿದೆ. ಗೋವಾ ಕುಡುಬಿ ಪಂಗಡದವರಲ್ಲಿ ಜೀವಂತ ಕಪ್ಪೆಯನ್ನೂ, ಅಕ್ಕಿ, ವೀಳ್ಯದೆಲೆ, ಧಾನ್ಯಗಳು ಹಾಗೂ ಮೃತರಿಗೆ ಇಷ್ಟವಾಗಿದ್ದ ವಸ್ತುಗಳನ್ನೂ ಚಿತೆಗೆ ಅರ್ಪಿಸುವ ಪದ್ಧತಿ ಇದೆ. ಜೋಗಿ ಹಾಗೂ ಅರೆ ಕುಡುಬಿ ಪಂಗಡಗಳಲ್ಲಿ ಶವದ ಕಾಲುಗಳನ್ನು ಪದ್ಮಾಸನದ ರೀತಿ ಮಡಿಚಿ, ಶವವನ್ನು ಕುಳ್ಳಿರಿಸಿ ದಫನ ಮಾಡುವುದು ಹಿಂದಿನ ಸಂಪ್ರದಾಯವಾಗಿದ್ದಿತು.

ರಾಣೆಯರಲ್ಲಿ ಮೃತರನ್ನು ಹೂಳುವ ಪದ್ಧತಿ ಹಿಂದೆ ಇದ್ದಿತು. ಬಳಿಕ, ವಿವಾಹವಾದವರ ಶವಕ್ಕೆ ಅಗ್ನಿಸಂಸ್ಕಾರ ಮಾಡುವ ಪದ್ಧತಿ ಬೆಳೆದಿದೆ. ಗುರಿಕಾರನ ಸೂಚನೆಯಂತೆ ಬಿರಾಣಿಯು ಸಂಬಂಧಿಕರಿಗೆ ಸಾವಿನ ವಾರ್ತೆಯನ್ನು ತಿಳಿಸುತ್ತಾನೆ. ಸ್ನಾನ ಮಾಡಿಸಿದ ಬಳಿಕ, ಶವಕ್ಕೆ ಕಚ್ಚೆಧೋತರ ಉಡಿಸಿ, ಮುಂಡಾಸು ಸುತ್ತುವ, ಶವದ ಕೊರಳಿಗೆ ತುಳಸಿಮಣಿಗಳ ಸರ ಹಾಕುವ ಪದ್ಧತಿ ಇವರಲ್ಲಿದೆ. ಶವದ ಬಳಿ ಉರಿಸುವ ದೀಪವು ಅಲ್ಲಿಂದ ಶವವನ್ನು ತೆಗೆಯುವವರೆಗೂ ನಂದಬಾರದೆಂಬ ನಂಬಿಕೆ ಇದೆ. ಸಂಸ್ಕಾರ ಮುಗಿಸಿ ಮನೆಗೆ ಬಂದವರು ಬಾಗಿಲಲ್ಲಿ ಇರಿಸಿದ ದೀಪವನ್ನು ನೋಡಿ, ವೀಳ್ಯದೆಲೆ ತಿಂದು ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ. ಮಾರನೆಯ ದಿನ ಸ್ಮಶಾನದಲ್ಲಿ ಚಿತಾಭಸ್ಮವನ್ನು ಒಟ್ಟುಗೂಡಿಸುತ್ತಾರೆ. ಶವ ಹೊತ್ತವರ ಭುಜಗಳನ್ನು ಮನೆಯವರೇ ತೊಳೆಯುತ್ತಾರೆ. ಒಂದು ಸೇರು ಅಕ್ಕಿಯ ಪಿಂಡವನ್ನು ಸ್ಮಶಾನದಲ್ಲಿಡುತ್ತಾರೆ. ಅಂದು ಆತ್ಮವು ಮನೆಯಿಂದ ಹೊರಗೆ ಹೋಗುವುದೆಂಬ (ಕಾವೆ ಹೋಗುವುದು) ನಂಬಿಕೆ ಅವರದು. ಅಂದು ಮನೆಯವರೆಲ್ಲ ಬೇಗನೇ ಊಟ ಮಾಡಿ ಮಲಗುವುದೂ ಪದ್ಧತಿಯಾಗಿದೆ. ೧೩ನೇ ದಿನ ಬೊಜ್ಜದ ಆಚರಣೆ. ಬ್ರಾಹ್ಮಣ ಭಟ್ಟರು ಯಾರ ಮೈಮೇಲೆ ಮೃತನ ಆತ್ಮ ಬರುವುದೆಂದು ಸೂಚಿಸಿರುತ್ತಾರೋ, ಆತನು ಬೆಳಗಿನಿಂದ ಉಪವಾಸವಿರುತ್ತಾನೆ ಹಾಗೂ ಹಿಂಗಾರ ಇಲ್ಲವೇ ತೆಂಗಿನ ಹೂ ಹಿಡಿದು ಆವೇಶದಿಂದ ಬೊಬ್ಬೆ ಹಾಕುತ್ತಾನೆ. ವ್ಯಕ್ತಿಯು ನಿಧನನಾದ ಸ್ಥಳದಲ್ಲಿ ಬೂದಿ ಹರಡಿ, ಪಾತ್ರೆಯಲ್ಲಿ ನೀರು ಇಡುತ್ತಾರೆ. ಆತ್ಮವು ಸುಳಿದಲ್ಲಿ ಬೂದಿಯಲ್ಲಿ ಹೆಜ್ಜೆಗುರುತು ಕಾಣುತ್ತದೆ ಎಂದು ಅವರು ನಂಬುತ್ತಾರೆ. ಇವರಲ್ಲಿ ಅಂದು ಮಾತ್ರ ಮೃತನಿಗೆ ಎಡೆ ಹಾಕುವ ಪದ್ಧತಿ ಇದೆ. ಇತರರ ಹಾಗೆ ಸತ್ತವರಿಗೆ ವರ್ಷಕ್ಕೊಮ್ಮೆ ಬೊಜ್ಜ ಮಾಡುವ ರೂಢಿ ಇರುವುದಿಲ್ಲ (ಕಾರ್ಕಳ – ಒಂದು ಪ್ರಾದೇಶಿಕ ಅಧ್ಯಯನ, ಪು.೭೦).

ವ್ಯಕ್ತಿಯು ಮೃತನಾದಾಗ ಶವಕ್ಕೆ ಸ್ನಾನ ಮಾಡಿಸುವುದು, ಕಫಾನ್ ಹೊದಿಸುವುದು, ಶವವನ್ನು ಮಸೀದಿ ಬಳಿ ತಂದಾಗ ನಮಾಜ್ ಮಾಡುವುದು, ಗೋರಿಯಲ್ಲಿ ಶವದ ಮುಖವನ್ನು ಪಶ್ಚಿಮಾಭಿಮುಖವಾಗಿ

ಇರಿಸಿ ಮಲಗಿಸಿ, ದೇಹದ ಮೇಲಿನ ವಸ್ತ್ರಗಳ ಕಟ್ಟುಗಳನ್ನೆಲ್ಲಾ ಬಿಚ್ಚಿ, ಸಮಾಧಿ ಮಾಡಿ, ಮೃತನ ಶಾಂತಿಗಾಗಿ ಎಲ್ಲರೂ ಪ್ರಾರ್ಥಿಸುವುದು ಮೊದಲಾದುವು ಮುಸ್ಲಿಮರ ಶವಸಂಸ್ಕಾರದ ಕೆಲವು ಪ್ರಮುಖ ವಿಧಿಗಳಾಗಿವೆ.

**ಕುಲೆ ಆರಾಧನೆ :** ವ್ಯಕ್ತಿ ಮೃತನಾದ ಬಳಿಕ (೧೨ನೇ ದಿನಕ್ಕೆ) 'ಕುಲೆ' (ಅಥವಾ ಕೊಲೆ)ಯಾಗಿ ಪಿತೃಗಣವನ್ನು ಸೇರುತ್ತಾನೆ ಎಂಬ ನಂಬಿಕೆ ತುಳುನಾಡಿನಲ್ಲಿದೆ. ಸತ್ತವರು ಕುಲೆಗಳ ರೂಪದಲ್ಲಿ ಭೂಮಿಗೆ ಬಂದು ತಮ್ಮ ವಂಶಸ್ಥರನ್ನು ನೋಡಿಕೊಂಡು ಹೋಗುತ್ತಾರೆಂಬ ನಂಬಿಕೆಯೂ ಇದೆ. ಅಂತೆಯೇ, ಹಬ್ಬ–ಹರಿದಿನಗಳಲ್ಲಿ ತಯಾರಿಸಿದ ವಿಶೇಷ ಆಹಾರವನ್ನು ಕುಲೆಗಳಿಗೆ ಎಡೆ ಮಾಡಿ ಅವನ್ನು ಸಂಪ್ರೀತಗೊಳಿಸುವ, ಆ ಮೂಲಕ ತಮ್ಮ ಪೂರ್ವಜರನ್ನು ಗೌರವಿಸುವ ಕಾರ್ಯವನ್ನು ಮಾಡುತ್ತಾರೆ. ಆದರೆ ಮದುವೆಯಾಗದೇ ನಿಧನವಾದ ಕೆಲವು ಹೆಣ್ಣು ಅಥವಾ ಗಂಡು, ಕುಲೆಗಳಾದ ಮೇಲೆ ಮದುವೆಯಾಗುವ ಆಸೆ ತಲೆದೋರಿದಾಗ ಅವರ ಮನೆಯಲ್ಲಿ ಕೆಲವು ಅನಿರೀಕ್ಷಿತ ಘಟನೆಗಳು ಜರುಗುವಂತೆ ಮಾಡುತ್ತವೆ. ಅಂದರೆ ಸಣ್ಣ ಮಗು ಹಾಲು ಕುಡಿಯದಿರುವುದು, ಕುಮಟಿ ಬೀಳುವುದು (ಬೆಚ್ಚುವುದು) ನಿದ್ದೆ ಮಾಡದೆ ರಗಳೆ ಮಾಡುವುದು ಇತ್ಯಾದಿ ಮಾಡಿದಾಗ ಮನೆಯವರು ಪುರೋಹಿತರಲ್ಲಿ ಪ್ರಶ್ನೆ ಕೇಳುತ್ತಾರೆ. ಆತ ತಾತ್ಕಾಲಿಕ ನಿವಾರಣೆಗಾಗಿ ಮಗುವಿಗೆ ಕಟ್ಟಲು ಮಂತ್ರಿಸಿದ ಬಳ್ಳಿ (ಕಪ್ಪುದಾರ), ವಿಭೂತಿ ಹಾಗೂ 'ಅಂತ್ರ'ವನ್ನು ಕೊಡುತ್ತಾನೆ. ಬಳಿಕ, ಆತನ ಸೂಚನೆಯಂತೆ ಪಾತ್ರಿಯನ್ನು ಕರೆಸಿ, ಕೇಳಿದಾಗ, ದೈವಾವೇಶದಲ್ಲಿ ಕುಲೆಯ ಬಗೆಗೆ ತಿಳಿಸಿ, ಜಕಿಣಿಯನ್ನು (ಮೃತ ಹುಡುಗ/ಹುಡುಗಿಯ ಆತ್ಮ) ತೆಂಗಿನಕಾಯಿಯಲ್ಲಿ ಮಂತ್ರಿಸಿಕೊಡುತ್ತಾನೆ. ಆ ಕಾಯಿಯನ್ನು ಮನೆಯ ಬಳಿ ಹಲಸಿನ ಮರಕ್ಕೆ ಕಟ್ಟಿ ೧೧ ಅಮಾವಸ್ಯೆಗಳಂದು ಹೊಳೆಗೆ ಹೋಗಿ ಸ್ನಾನ ಮಾಡಿ, ಕಾಯಿಗೂ ಸ್ನಾನ ಮಾಡಿಸಿ, ಪೂಜೆ ಮಾಡಿ, ತಂದು ಮತ್ತೆ ಮರಕ್ಕೆ ಕಟ್ಟುತ್ತಾರೆ. ೧೨ನೇ ಅಮಾವಸ್ಯೆಯಂದು ಪುರೋಹಿತರು ಜಕ್ಕಿಣಿಗಳ ಪ್ರತೀಕವಾಗಿ ಅಂದರೆ ತಮ್ಮ ವಂಶದಲ್ಲಿ ಸತ್ತುಹೋದ ಅವಿವಾಹಿತ ಗಂಡಸಿನ ಪ್ರತೀಕವಾಗಿ ಒಂದು ಬೈಹುಲ್ಲಿನ ಅಥವಾ ಹಾಲೆ ಮರದ ಗೊಂಬೆ ಮಾಡಿ, ಹಾಗೆಯೇ ಬೇರೊಂದು ಮನೆತನದಲ್ಲಿ ಸತ್ತುಹೋದ ಹೆಣ್ಣಿನ ಪ್ರತೀಕವಾಗಿ ಮತ್ತೊಂದು ಗೊಂಬೆ ಮಾಡಿ, ಈ ಎರಡೂ ಕುಲೆಗಳಿಗೆ ಜೀವಂತ ವ್ಯಕ್ತಿಗಳಾಗಿದ್ದಾಗ ಮಾಡುತ್ತಿದ್ದಂತೆಯೇ ಅಂದರೆ, ಬಳಿ ನೋಡುವುದು, ನಿಶ್ಚಿತಾರ್ಥ, ಧಾರೆ, ಊಟ ಹೀಗೆ ಸಾಂಪ್ರದಾಯಿಕವಾದ ಎಲ್ಲಾ ಶಾಸ್ತ್ರಗಳ ಮೂಲಕ ಸಾಂಕೇತಿಕವಾಗಿ ವಿವಾಹ ಕಾರ್ಯ ಮಾಡಿ, ಗೊಂಬೆಗಳನ್ನು ಆ ಹೊಳೆಯಲ್ಲಿಯೇ ವಿಸರ್ಜಿಸುತ್ತಾರೆ. ಆದರೆ, ಈ ವಿಧಿಗಳೆಲ್ಲಾ ಮನೆಯ ಹೊರಭಾಗದ ಸೂರಿನ ಅಡಿ ಅಥವಾ ಹೊಳೆಯ ಬದಿಯಲ್ಲಿ ರಾತ್ರಿ ವೇಳೆ ನಡೆಯುತ್ತವೆ. ಇದನ್ನು ತುಳುವಿನಲ್ಲಿ 'ಕುಲೆತ ಮದಿಮೆ' ಎನ್ನಲಾಗುತ್ತದೆ. ಕೆಲವೆಡೆ ಅಕ್ಕಿಹಿಟ್ಟಿನ ಗೊಂಬೆಗಳನ್ನು ಮಾಡಿ ಹೊಳೆಯ ದಡದಲ್ಲಿ ಇರಿಸಿ, ವಿವಾಹ ಶಾಸ್ತ್ರ ಮಾಡಿ, ಬಳಿಕ ಆ ಹೊಳೆಯಲ್ಲೇ ಗೊಂಬೆಗಳನ್ನು ವಿಸರ್ಜಿಸುತ್ತಾರೆ.

## ಜಾತ್ರೆ

ಜಾತ್ರೆ, ಕೋಲ–ನೇಮ ಮೊದಲಾದವುಗಳಲ್ಲಿ ಬಂಧುಮಿತ್ರರು ಪರಸ್ಪರ ಭಾಗವಹಿಸುತ್ತಾರೆ. ಜಾತ್ರೆಯ ಆರಂಭದ ಸಂಕೇತವಾದ ಧ್ವಜಾರೋಹಣದಂದು ಊರಲ್ಲಿ ಇದ್ದ ಎಲ್ಲರೂ ಜಾತ್ರೆಯ ಅಂತ್ಯದ ಕುರುಹಾದ ಧ್ವಜಾವರೋಹಣದ ತನಕವೂ ಇರಲೇಬೇಕು–ಎಂಬ ನಿಬಂಧನೆ ಇದೆ. ಬಂಧುಮಿತ್ರರು, ಅನಿವಾರ್ಯ ಕಾರಣಗಳಿಂದಾಗಿ ಹಾಗೆ ಜಾತ್ರೆಯ ಆದ್ಯಂತ ಅದೇ ಊರಲ್ಲಿ ಇರಲು ಸಾಧ್ಯವಾಗದವರು ಧ್ವಜಾರೋಹಣದ ಹೊತ್ತಿನಲ್ಲಿ ಸೀಮೆಯಿಂದ ಹೊರಗೆ ಉಳಿದು, ಬಳಿಕ ಊರಿಗೆ ಬರುವುದೂ ರೂಢಿಯಲ್ಲಿದೆ. ಕರಾವಳಿಯ ಗ್ರಾಮದೇವತೆಗಳ ಜಾತ್ರೆಗಳಲ್ಲಿ ಒಂದು ಗ್ರಾಮದ ದೇವರು ನೆರೆಯೂರಿನ ಗ್ರಾಮದ ದೇವಾಲಯದ ಕೆರೆ ಅಥವಾ ನದಿಗೆ ಹೋಗಿ ಅಲ್ಲಿ ಜಳಕ ಮಾಡಿಕೊಂಡು, ಆ ಊರವರ ಪೂಜೆ, ಕಾಣಿಕೆಯನ್ನು ಪಡೆದುಬರುವ ಸಂಪ್ರದಾಯವೂ ಇದೆ. ಒಂದು ಗ್ರಾಮದ ಸ್ತ್ರೀ ದೇವತೆಯನ್ನು ಮಗುದೊಂದು ಊರಿನ ಪುರುಷ ದೇವತೆಯ ಪತ್ನಿ ಅಥವಾ ಸಹೋದರಿ ಎಂದು ಭಾವಿಸಿ ಎರಡೂ ಊರವರು ವಿಶ್ವಾಸದಿಂದ ನಡೆದುಕೊಳ್ಳುವುದೂ ಇದೆ. ಹಾಗೆಯೇ, ತೇರಿಗೆ ಬೇರೆ ಸೀಮೆಯ ಪ್ರಮುಖರು, ಗುತ್ತಿನವರು ಬಂದರೆ ಅವರಿಗೆ ವಿಶೇಷ ಪ್ರಸಾದ, ಗೌರವ ನೀಡುವ, ಅವರಿಂದ ತೇರಿನ ಚಕ್ರಕ್ಕೆ ಕಾಯಿ ಹೊಡೆಸಿ, ಬಳಿಕ ತೇರನ್ನು ಎಳೆಯುವ ರೂಢಿಯೂ ಇದೆ.

ತುಳುನಾಡಿನ ರಥಗಳು ಅಗಲವಾಗಿ, ದುಂಡಾಕಾರದಲ್ಲಿದ್ದು, ಗದೆಯ ಆಕಾರವನ್ನು ನೆನಪಿಸುವಂತಿರುವುದು ವಿಶೇಷವಾಗಿದೆ. ಇಲ್ಲಿನ ಕೆಲವು ಬಸದಿಗಳಲ್ಲಿಯೂ ರಥೋತ್ಸವ ನಡೆಯುತ್ತದೆ. ಜೈನರಲ್ಲಿ ರಥೋತ್ಸವವನ್ನು ತೀರ್ಥಂಕರನ ಸಮವಸರಣದ ಸಂಕೇತವೆಂದು ಭಾವಿಸಲಾಗುತ್ತದೆ. ಭೇರಿತಾಡ್ಯ, ಧ್ವಜಾರೋಹಣ, ತೋರಣ ಮುಹೂರ್ತ, ಶ್ರೀಗಂಧ ಯಂತ್ರಾರಾಧನೆ ಮುಂತಾದುವು ರಥೋತ್ಸವದ ಅಂಗವಾಗಿ ನಡೆಯುವ ಜೈನವಿಧಿಗಳಾಗಿವೆ. ಧ್ವಜಾರೋಹಣದಲ್ಲಿ ಏರಿಸುವ ಧ್ವಜದಲ್ಲಿ ಸರ್ವಾಣಯಕ್ಷನ ಚಿತ್ರವಿರುತ್ತದೆ.

ಬಸರೂರಿನ ದೇವಿಯ ಜಾತ್ರೆಯು ೬೦ ವರ್ಷಕ್ಕೊಮ್ಮೆ ನಡೆಯುವುದು ವಿಶೇಷ. ೧೯೮೪ರಲ್ಲಿ ನಡೆದದ್ದು ಮತ್ತೆ ೨೦೪೪ಕ್ಕೆ ನಡೆಯಲಿದೆ. ಹೀಗಾಗಿ, ೧೫ ವರ್ಷಕ್ಕೊಮ್ಮೆ ಒಂದು ದಿನದ ಚಿಕ್ಕ ಮಾರಿಜಾತ್ರೆ ನಡೆಸುವ ವ್ಯವಸ್ಥೆ ಇಲ್ಲಿದೆ. ಕುಂದಾಪುರದ ಖಾರ್ವಿಗಳ ಮಾರಿ ಜಾತ್ರೆಯೂ ವಿಶೇಷವಾದುದೇ. ಜಾತ್ರೆಯ ಪ್ರಾರಂಭದಲ್ಲಿ ಸಮುದ್ರಕ್ಕೆ ಹೋಗಿ ಹೊಸ ಕುಂಭದಲ್ಲಿ ಗಂಗೆ ತಂದು ಗುಡಿಯಲ್ಲಿರಿಸುತ್ತಾರೆ. ಪಾತ್ರಿಯ ಮೇಲೆ ದೇವಿಯ ದರ್ಶನವಾದಾಗ ಹಬ್ಬದ ಆಚರಣೆಗೆ ಅನುಮತಿ ಕೋರುತ್ತಾರೆ. ಕೊರಗರು ಬಲಿ ನೀಡಲಿರುವ ಕುರಿಯೊಂದಿಗೆ (ಸಂಚಾರ ಕುರಿ) ಧ್ವಜಾರೋಹಣದ ಬಳಿಕ ಮೂರು ದಿನ (ಬಯಲು ಸೀಮೆಯಲ್ಲಿ ಕೋಣವನ್ನು ಮೆರೆಸುತ್ತಿದ್ದ ಹಾಗೆ) ಮನೆಮನೆ ಮುಂದೆ ಡೋಲು ಬಡಿಯುತ್ತಾ ಮೆರವಣಿಗೆ ಹೋಗುತ್ತಾರೆ. ಮನೆಯವರು ಅದಕ್ಕೆ ಕಾಲು ತೊಳೆದು, ಮಾಲೆ ಹಾಕಿ, ಎಣ್ಣೆ ಹಚ್ಚಿ, ಅಕ್ಕಿ ತಿನ್ನಿಸಿ, ಕೊರಗರಿಗೆ ಕಾಣಿಕೆಯನ್ನು ನೀಡುತ್ತಾರೆ. ಶಂಕರನಾರಾಯಣ ವರ್ಷಾವಧಿ ಜಾತ್ರೆಯ ಮೃಗಯಾವಿನೋದ ಉತ್ಸವದ ಅಂಗವಾಗಿ ನಡೆಯುವ ದೇವರು ಬೇಟೆ ಆಡಿ ಬಂದ ಕಥಾ ಪ್ರಸಂಗವನ್ನು ಭಕ್ತರು ಬಾಳೆದಿಂಡುಗಳಿಂದ ಹೊಡೆದಾಡುವ ಮೂಲಕ ಅಭಿನಯಿಸುತ್ತಾರೆ.

ಬಸರೂರಿನ ಮಹಾಲಿಂಗೇಶ್ವರ ಜಾತ್ರೆಯಲ್ಲಿ ಇದೇ ಆಶಯದ ಆಚರಣೆಯನ್ನು ದೇವದಾಸಿಯರು ಕಡುಬಿನ ಕಾಳಗದ ಮೂಲಕ ನಡೆಸುತ್ತಿದ್ದರು ಹಾಗೂ ಅಲ್ಲಿ ನಡೆಯುವ ಓಕುಳಿ ಆಟ ಬೆಂಗಳೂರಿನ ಧರ್ಮರಾಯನ ಕರಗದ ಅಂಗವಾಗಿ ನಡೆಯುವ ಓಕುಳಿ ಆಚರಣೆಯ ನೆನಪು ತರುತ್ತದೆ. ಕೊಲ್ಲೂರು ಮೂಕಾಂಬಿಕೆಯ ರಥೋತ್ಸವದಲ್ಲಿ ಕುಡುಬಿ, ಮೊಗವೀರ ಮೊದಲಾದ ಜಾತಿಯವರು ತಮತಮಗೆ ನಿರ್ದಿಷ್ಟವಾದ ಕೆಲಸಗಳನ್ನು ಮಾಡುತ್ತಾರೆ. ಹಗ್ಗ (ಹೊಸ) ಒದಗಿಸುವುದು ಮುಸ್ಲಿಮರ ಭಾಗದ ಕೆಲಸವಾಗಿರುತ್ತದೆ. ಜಾತ್ರೆಯಲ್ಲಿ ಹಲಗೆವಾದ್ಯ ನುಡಿಸುವವನಿಗೆ ವಿಶೇಷ ಮನ್ನಣೆ ಇದ್ದು, ಆತನಿಗೆ ಯಜ್ಞೋಪವೀತ ಧಾರಣೆಯಾಗುತ್ತದೆ. ಜಾತ್ರೆ ವಿಧಿಗಳು ಮುಗಿವವರೆಗೆ ಆತ ದೇವಾಲಯದಲ್ಲಿಯೇ ಇದ್ದು ಸಾತ್ವಿಕ ಆಹಾರ ಸೇವಿಸಬೇಕು ಎಂಬ ನಿಬಂಧನೆಗಳೂ ಇವೆ. ತುಳುನಾಡಿನ ದೈವ, ದೇವಸ್ಥಾನಗಳ ಜಾತ್ರೆಗಳ ಆರಂಭದಲ್ಲಿ ಕಾಲ್ಚೆಂಡಾಟ ಆಡುವುದು ಆಚರಣೆಯಾಗಿ ರೂಢಿಯಲ್ಲಿದೆ. ಚರ್ಮದಿಂದ ಮಾಡಿದ ದೊಡ್ಡ ಚೆಂಡನ್ನು (ಒಳಗೆ ತೆಂಗಿನನಾರು ತುಂಬಿರುತ್ತದೆ) ಆಗ ಎರಡು ಭಾಗವಾಗಿ ನಿಂತ ಭಕ್ತಾದಿಗಳು ಒದ್ದಾಡುವುದು ಸಾಮಾನ್ಯವಾಗಿ ನಡೆಯುತ್ತದೆ. ಹೀಗೆ ಜಿಲ್ಲೆಯ ವಿವಿಧ ಜಾತ್ರೆಗಳಲ್ಲಿ ನಡೆಯುವ ಕೆಲವೊಂದು ಸಾಂಪ್ರದಾಯಿಕ ವಿಧಿಗಳು ಅಧ್ಯಯನದ ದೃಷ್ಟಿಯಿಂದಲೂ ಗಮನಿಸುವಂತಿವೆ.

ಉಡುಪಿ ಜಿಲ್ಲೆಯ ಪ್ರಸಿದ್ಧ ಜಾತ್ರೆಗಳ ಪಟ್ಟಿಯಲ್ಲಿ ಉಡುಪಿಯ ಶ್ರೀಕೃಷ್ಣ ದೇವಲದ ರಥೋತ್ಸವ, ಪರ್ಯಾಯ, ಕೃಷ್ಣ ಜನ್ಮಾಷ್ಟಮಿ, ಕೊಲ್ಲೂರು ಮೂಕಾಂಬಿಕೆ ರಥೋತ್ಸವ, ಬಸರೂರು ಮಾರಿ ಜಾತ್ರೆ, ಕೋಟೇಶ್ವರದ ಕೋಟಿಲಿಂಗೇಶ್ವರ ಜಾತ್ರೆ, ಕಾರ್ಕಳದ ವೆಂಕಟರಮಣ ದೇವಸ್ಥಾನದ ದೀಪೋತ್ಸವ, ಕಡಂದಲೆಯ ಸುಬ್ರಹ್ಮಣ್ಯ ರಥೋತ್ಸವ, ನಂದಳಿಕೆಯ ದೈವಗಳ ನೇಮ, ಹಿರಿಯಡ್ಕದ ಸಿರಿ ಜಾತ್ರೆ, ಕುಂದಾಪುರದ ಹಲವು ಮಕ್ಕಳ ತಾಯಿ, ವರಂಗದ ಕೆರೆಬಸದಿ, ಅತ್ತೂರಿನ ಸಂತಲಾರೆನ್ಸ್ ಉತ್ಸವ ಮೊದಲಾದುವನ್ನು ಹೆಸರಿಸಬಹುದು. ಜಿಲ್ಲೆಯಲ್ಲಿ ನಡೆಯುವ ಪ್ರಸಿದ್ಧ ಜಾತ್ರೆ, ಉತ್ಸವ ಹಾಗೂ ನೇಮಗಳ ವಿವರವನ್ನು ಈ ಮುಂದೆ ನೀಡಲಾಗಿದೆ.

## ಉಡುಪಿ ಜಿಲ್ಲೆಯಲ್ಲಿ ನಡೆಯುವ ಕೆಲವು ಪ್ರಮುಖ ಜಾತ್ರೆಗಳ ಪಟ್ಟಿ

| ದೇವರ ಹೆಸರು | ಊರಿನ ಹೆಸರು | ಜಾತ್ರೆ ನಡೆಯುವ ತಿಂಗಳು | ಉತ್ಸವದ ಅವಧಿ | ಸೇರುವ ಅಂದಾಜು ಜನ | ಜಾತ್ರೆಯ ವಿಶೇಷ |
|---|---|---|---|---|---|
| | | **ಕುಂದಾಪುರ ತಾಲೂಕು** | | | |
| **ಶನೇಶ್ವರ** | ಬೈಂದೂರು ಪೇಟೆ | ಮೇ | ೩ ದಿವಸ | ೮,೦೦೦ | ರಥೋತ್ಸವ |
| **ಕೊಲ್ಲೂರು ಮೂಕಾಂಬಿಕೆ** | ಕೊಲ್ಲೂರು | ಮಾರ್ಚ್, ಏಪ್ರಿಲ್ | ೭ ದಿವಸ | ೧೦,೦೦೦ | – „ – |
| **ದುರ್ಗಾ ಪರಮೇಶ್ವರ** | ಉಪ್ಪುಂದ | ನವೆಂಬರ್ | ೭ ದಿವಸ | ೫,೦೦೦ | – „ – |
| **ಅಗಸ್ತ್ಯೇಶ್ವರ** | ಕಿರಿಮಂಜೇಶ್ವರ | ಮೇ | ೪ ದಿವಸ | ೫,೦೦೦ | – „ – |
| **ಬ್ರಾಹ್ಮಿದುರ್ಗಾ ಪರಮೇಶ್ವರಿ** ರಥೋತ್ಸವ | | ಕಮಲಶಿಲೆ | ಫೆಬ್ರವರಿ, ಮಾರ್ಚಿ | ೭ ದಿವಸ | ೪,೦೦೦ |
| **ಶಂಕರನಾರಾಯಣ** | ಶಂಕರನಾರಾಯಣ | ಜನವರಿ | ೭ ದಿವಸ | ೮,೦೦೦ | – „ – |
| **ಬ್ರಹ್ಮಲಿಂಗೇಶ್ವರ** | ಚಿತ್ತೂರು | ಜನವರಿ | ೧ ತಿಂಗಳು | ೧೦,೦೦೦ | ಗೆಂಡೋತ್ಸವ |
| **ಕೋಟಿಲಿಂಗೇಶ್ವರ** | ಕೋಟೇಶ್ವರ | ನವೆಂಬರ್, ಡಿಸೆಂಬರ್ | ೭ ದಿವಸ | ೧೫,೦೦೦ | ರಥೋತ್ಸವ |
| **ವಿನಾಯಕ** | ಆನೆಗುಡ್ಡೆ | ಡಿಸೆಂಬರ್, ಜನವರಿ | ೩ ದಿವಸ | ೮,೦೦೦ | – „ – |
| **ಕುಂದೇಶ್ವರ** | ಕುಂದಾಪುರ | ನವೆಂಬರ್, ಡಿಸೆಂಬರ್ | ೧ ದಿವಸ | ೧೦,೦೦೦ | ದೀಪೋತ್ಸವ |
| | | **ಉಡುಪಿ ತಾಲೂಕು** | | | |
| **ಕಾಪು ಮಾರಿಯಮ್ಮ** | ಹಳೇ ಮಾರಿಗುಡಿ<br>ಹೊಸ ಮಾರಿಗುಡಿ<br>೩ನೇ ಮಾರಿಗುಡಿ | ಮಾರ್ಚಿ | ೨ ದಿವಸ | ೫೦,೦೦೦ | |
| **ಜನಾರ್ದನ** | ಕಾಪು | ಫೆಬ್ರವರಿ | ೬ ದಿವಸ | ೮,೦೦೦ | |
| **ದುರ್ಗಾಪರಮೇಶ್ವರಿ** | ಅಗ್ರಹಾರ,ಯೇಣಗುಡ್ಡೆ | ಮಾರ್ಚಿ | ೬ ದಿವಸ | ೫,೦೦೦ | |
| **ವೆಂಕಟರಮಣ** | ಕಟಪಾಡಿ | ಜನವರಿ | ೮ ದಿವಸ | ೧೦,೦೦೦ಕ್ಕಿಂತ ಹೆಚ್ಚು | |
| **ಮಹಾಲಕ್ಷ್ಮಿ** | ಉಚ್ಚಿಲ | ಮಾರ್ಚಿ | ೫ ದಿವಸ | – „ – | |
| **ಜಾರಂದಾಯ ನೇಮ** | ಶಿರ್ವಾ | ಮಾರ್ಚ್ | ೧ ದಿವಸ | ೫,೦೦೦ಕ್ಕಿಂತ ಹೆಚ್ಚು | |
| **ವಿಶ್ವನಾಥ** | ಎಲ್ಲೂರು | ಏಪ್ರಿಲ್ | ೫ ದಿವಸ | ೫,೦೦೦ಕ್ಕಿಂತ ಹೆಚ್ಚು | |
| **ಕಾಳಿಕಾಂಬ ವಿಶ್ವಕರ್ಮೇಶ್ವರ** | ಅಗ್ರಹಾರ | ನವೆಂಬರ್ | ೧೦ ದಿವಸ | ೧೫,೦೦೦ಕ್ಕಿಂತ ಹೆಚ್ಚು | |
| **ಜನಾರ್ದನ** | ಎರ್ಮಾಳು | ಡಿಸೆಂಬರ್ | ೫ ದಿವಸ | ೫,೦೦೦ಕ್ಕಿಂತ ಹೆಚ್ಚು | |
| **ಸೈಂಟ್ ಜಾನ್ಸ್** | ಶಂಕರಪುರ | ಡಿಸೆಂಬರ್೨೭ ಸಾಂತಮೇರಿ | ೧ ದಿವಸ | ೫,೦೦೦ಕ್ಕಿಂತ ಹೆಚ್ಚು | |
| **ಕಂಬಳ** | ಕಟಪಾಡಿ | ಜನವರಿ | ೧ ದಿವಸ | ೫,೦೦೦ಕ್ಕಿಂತ ಹೆಚ್ಚು | |
| **ಜುಮ್ಮಾ ಮಸೀದಿ** | ಕಟಪಾಡಿ | ರಂಜಾನ್ ತಿಂಗಳು (ಮುಸ್ಲಿಂ ತಿಂಗಳು) | ೨ ದಿವಸ | ೫,೦೦೦ಕ್ಕಿಂತ ಹೆಚ್ಚು | |
| **ಉರುಸ್** | ಬೆಳಪು | ಮಾರ್ಚ್ | ೨ ದಿವಸ | ೬,೦೦೦ಕ್ಕಿಂತ ಹೆಚ್ಚು | |
| **ವೀರಭದ್ರ** | ಹಿರಿಯಡ್ಕ | ಏಪ್ರಿಲ್:ಮೇ | ೩ ದಿವಸ | ೧೦,೦೦೦ | |
| **ಶಂಭುಕಲ್ಲು ವೀರಭದ್ರ** | ಉದ್ಯಾವರ | ಜನವರಿ | ೧ ದಿವಸ | ೫,೦೦೦ | |
| **ಬಲರಾಮ** | ವಡಭಾಂಡೇಶ್ವರ | ಡಿಸೆಂಬರ್, ಜನವರಿ | ೧ ದಿವಸ | ೨೦,೦೦೦ | |
| **ದುರ್ಗಾ ಪರಮೇಶ್ವರಿ** | ಪರ್ಕಳ | ಫೆಬ್ರವರಿ | ೧ ದಿವಸ | ೮,೦೦೦ | |
| **ಮಹಾಲಿಂಗೇಶ್ವರ** | ಪರ್ಕಳ | ಮಾರ್ಚ್ | ೧ ದಿವಸ | ೧೦,೦೦೦ | |
| **ಜನಾರ್ಧನ ಮಹಾಕಾಳಿ** | ಅಂಬಲಪಾಡಿ | ಮಾರ್ಚ್ | ೨ ದಿವಸ | ೫,೦೦೦ | |
| **ವೆಂಕಟರಮಣ** | ಉಡುಪಿ | ತೆಪ್ಪೋತ್ಸವ | ೧ ದಿವಸ | ೫,೦೦೦ | |
| **ಕೃಷ್ಣಮಠ** | ಉಡುಪಿ | ಮಕರ ಸಂಕ್ರಮಣ | ೧ ದಿವಸ | ೫,೦೦೦ಕ್ಕಿಂತ ಹೆಚ್ಚು | |
| | | ವಿಟ್ಲಪಿಂಡಿಯದಿನ | ೧ ದಿನ | – „ – | |
| | | ೨ ವರ್ಷಕ್ಕೊಮ್ಮೆ ಪರ್ಯಾಯ | ೨ ದಿವಸ | ೨೦,೦೦೦ಕ್ಕಿಂತ ಹೆಚ್ಚು | |
| **ಅನಂತಪದ್ಮನಾಭ** | ಪೆರ್ಡೂರುಪೇಟೆ | ಮಾರ್ಚ್ ೧೬ | ೧ ದಿವಸ | ೩೦ರಿಂದ ೩೫ಸಾವಿರ ರಥೋತ್ಸವ | |
| | | ಪ್ರತೀ ತಿಂಗಳ ಸಂಕ್ರಮಣ | ೧ ದಿವಸ | ೧೦ರಿಂದ ೧೫ಸಾವಿರ ರಥೋತ್ಸವ | |
| **ಮಹಿಷಮರ್ಧಿನಿ** | ನೀಲಾವರ ರಥಬೀದಿ | ಚಿತ್ರ ಹುಣ್ಣಿಮೆಯ ೫ನೇ ದಿನ | ೧ ದಿವಸ | ೧೦ರಿಂದ ೧೨ಸಾವಿರ ರಥೋತ್ಸವ | |

| ದೇವರ ಹೆಸರು | ಊರಿನ ಹೆಸರು | ಜಾತ್ರೆ ನಡೆಯುವ ತಿಂಗಳು | ಉತ್ಸವದ ಅವಧಿ | ಸೇರುವ ಅಂದಾಜು ಜನ | ಜಾತ್ರೆಯ ವಿಶೇಷ |
|---|---|---|---|---|---|
| **ದುರ್ಗಾಪರಮೇಶ್ವರಿ** | ಚೇರ್ಕಾಡಿ ಕನ್ನಾರು | ಹೋಳಿ ಹುಣ್ಣಿಮೆ | ೧ ದಿವಸ | ೫ ಸಾವಿರ | ವಾರ್ಷಿಕ ಜಾತ್ರೆ |
| **ಮಹಾಲಿಂಗೇಶ್ವರ** | ಬ್ರಹ್ಮಾವರ | ಏಪ್ರಿಲ್ | ೧ ದಿವಸ | ೫,೦೦೦ | ರಥೋತ್ಸವ |
| **ಕುಲಮಹಾಶ್ರೀ** | ಕುಮ್ರಗೋಡ್ರು ಬೆಣ್ಣೆಕುದ್ರು | ಡಿಸೆಂಬರ್ | ೧ ದಿವಸ | ೧೦–೧೨ ಸಾವಿರ | ವಾರ್ಷಿಕ ಜಾತ್ರೆ |
| **ಬ್ರಹ್ಮಲಿಂಗ** ವೀರಭದ್ರ ದುರ್ಗಾಪರಮೇಶ್ವರಿ | ಸಾಲಿಕೇರಿ ದರ್ಶನ ಸೇವೆ | ಫೆಬ್ರವರಿ | ೩ ದಿವಸ ೧೬, ೧೭, ೧೮ | ೫–೮ ಸಾವಿರ | ಗೆಂಡ, ದಕ್ಕೆಬಲಿ |
| **ಅಮೃತೇಶ್ವರಿ ಹಲವು ಮಕ್ಕಳ ತಾಯಿ** | ಕೋಟ | ಜನವರಿ ೯ | ೩ ದಿವಸ | ೫,೦೦೦ | ವಾರ್ಷಿಕ ಜಾತ್ರೆ |
| **ಗುರುನರಸಿಂಹ ಮತ್ತು ಆಂಜನೇಯ** | ಸಾಲಿಗ್ರಾಮ | ಜನವರಿ ೧೬ | ೨ ದಿವಸ | ೧೦,೦೦೦ | – ,, – |
| | | **ಕಾರ್ಕಳ ತಾಲೂಕು** | | | |
| **ಮಾರಿಯಮ್ಮ** | ಕಾರ್ಕಳ | ಮೇ | ೨ ದಿವಸ | ೪೦,೦೦೦ | ವಾರ್ಷಿಕ ಜಾತ್ರೆ |
| **ವೆಂಕಟರಮಣ** | ಕಾರ್ಕಳ | ನವೆಂಬರ್ | ೧ ದಿವಸ | ೫೦,೦೦೦ | – ,, – |
| **ಸಂತ ಮೇರಿ** | ನಿಟ್ಟೆ | ಜನವರಿ | ೩ ದಿವಸ | ೩೦,೦೦೦ | – ,, – |
| **ಸುಬ್ರಹ್ಮಣ್ಯ** | ಸೂಡ | ಡಿಸೆಂಬರ್ | ೩ ದಿವಸ | ೧೫,೦೦೦ | – ,, – |
| **ಕಾಂತೇಶ್ವರ** | ಕಾಂತಾವರ | ಫೆಬ್ರವರಿ | ೩ ದಿವಸ | ೧೫,೦೦೦ | – ,, – |
| **ಕೊಡಮಂತ್ತಾಯ** | ಮುಡಾರು | ಮಾರ್ಚ್ | ೩ ದಿವಸ | ೧೫,೦೦೦ | – ,, – |
| **ಮಾರಿಯಮ್ಮ** | ಮಾರ್ಪಾಡಿ | ಏಪ್ರಿಲ್ | ೧ ದಿವಸ | ೧೫,೦೦೦ | – ,, – |

* * * * *